ಮಾನವಿಕ ಕರ್ಣಾಟಕ

ಸಂಪುಟ ೫ ಸಂಚಿಕೆ ೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೫

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಆದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-೫೭೦೦೧೨ ಎಂಬ ವಿಳಾಸಕ್ಕೆ ಕಳುಹಿಸಬೇಕು.



ಮ್ಯಾಕ್ಸ್ ವೆಬರ್ (1864–1920)

ಮಾನವಿಕ ಕರ್ಣಾಟಕ

ಸಂಪುಟ ೫ ಸಂಚಿಕೆ ೨

೧೮

ಫೆಬ್ರುವರಿ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೫

MANAVIKA KARNATAKA, Kannada quarterly of the University of Mysore. Volume 5, Number 2, February 1975. Edited by H S. Krishnaswamy Iyengar and Dr. A. V. Narasimha Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಶ್ರೀ ಮೀರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು

ವಿಷಯಸೂಚಿ

ಕೆ. ಎನ್. ಸೋಮಯ್ಯ

ಮ್ಯಾಕ್ಸ್ ವೆಬರ್

ಮ್ಯಾಕ್ಸ್ ವೆಬರ್ ತನ್ನ ಜೀವಮಾನದ ಉದ್ದಕ್ಕೂ ಒಂದು ರೀತಿಯ ಮಾನಸಿಕ ಯಾತನೆಗೆ ಒಳಗಾಗಿದ್ದವನು. ಅವನು ಸಮಾಜ ಶಾಸ್ತ್ರೀಯ ಸಿದ್ಧಾಂತಗಳ ಬೆಳವಣಿಗೆಗೆ ನೀಡಿರುವ ಕೊಡುಗೆಗಳನ್ನು, ಅವನ ಮಾನಸಿಕ ಸಂಘರ್ಷಣೆಗಳನ್ನು ಗಮನಕ್ಕೆ ತೆಗೆದುಕೊಳ್ಳದೆ, ಅರ್ಥ ಮಾಡಿಕೊಳ್ಳುವುದು ಅಸಾಧ್ಯ. ನಾವು ಇಲ್ಲಿ ಮ್ಯಾಕ್ಸ್ ವೆಬರನ ಮಾನಸಿಕ ಯಾತನೆಗಳ ಮೇಲೆಯೇ ಗಮನವನ್ನು ಕೇಂದ್ರೀಕರಿಸಬೇಕಾದ ಆವಶ್ಯಕತೆ ಕೂಡ ಇರುವುದಿಲ್ಲ. ವ್ಯಾಖ್ಯಾನಕಾರ ತುಂಬ ಎಚ್ಚರಿಕೆಯಿಂದ ಕಾರ್ಯತತ್ಪರನಾಗಬೇಕು. ಮಾನವನ ಕೆಲವೇ ಗುಣಗಳ ಧೀರ್ಘ ವಿಶ್ಲೇಷಣೆಯೇ ಒಬ್ಬ ವ್ಯಕ್ತಿಯ ಐತಿಹಾಸಿಕ ಮತ್ತು ಬೌದ್ಧಿಕ ಪ್ರಾಮುಖ್ಯದ ಮೇಲೆ ಯಾವ ಬೆಳಕನ್ನೂ ಚೆಲ್ಲಲಾರದು.

ವೆಬರ್ ತನ್ನ ಕುಟುಂಬದೊಡನೆ ಹೊಂದಿದ್ದ ಸಂಬಂಧಗಳಿಂದಲೂ ಅವನು ಜೀವಿಸಿದ ಮತ್ತು ಕೆಲಸ ಮಾಡಿದ ಕೈಸರನ ಜರ್ಮನಿಯ ಕೊಳೆತು ನಾರುತ್ತಿದ್ದ ರಾಜಕೀಯ ವಾತಾವರಣದಿಂದಲೂ ಅವನ ಮಾನಸಿಕ ಯಾತನೆಗಳು ಪ್ರಭಾವಿತಗೊಂಡುವು. ತನ್ನ ವೈಯಕ್ತಿಕ ಜೀವನದಲ್ಲಿ ಅವನು ಅಧಿಕಾರದ ಬಗ್ಗೆ ಹೊಂದಿದ್ದ ತಿರಸ್ಕಾರಭಾವನೆ ಮತ್ತು ತನ್ನ ಬರವಣಿಗೆಗಳಲ್ಲಿ ಅದರ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಿರುವುದು, ವಿಚಾರಪರತೆ, ಜವಾಬ್ದಾರಿಯ ನೈತಿಕತೆಗಳ ಬಗ್ಗೆ ಅವನಿಗಿದ್ದ ವಿಶೇಷ ಆಸಕ್ತಿ, ಅಂತರ್‌ಮುಖಿಯ ಪ್ರಭಾವಕ್ಕೊಳಗಾದ ಸಂನ್ಯಾಸದ ಬಗ್ಗೆ ಅವನಿಗಿದ್ದ ಅನುಕಂಪ ಮತ್ತು ದೈವಾಂಶ ಸಂಭೂತ ನಾಯಕರುಗಳ ಜೀವನವಿಧಾನಗಳಲ್ಲೂ ಭಾಗಶಃ ತನ್ಮಯತೆ ಮುಂತಾದ ವಿಷಯಗಳಿಗೆ ಅವನ ಜೀವನದ ಘಟನೆಗಳೇ ಆಧಾರ.

ಮ್ಯಾಕ್ಸ್ ವೆಬರ್ 1864ರ ಏಪ್ರಿಲ್ 21ರಂದು ಜನಿಸಿದ. ಅವನ ತಂದೆತಾಯಿಯರಿಗೆ ಈತನೇ ಹಿರಿಯಮಗ. ಇವರ ವಂಶ ಕ್ಯಾತೊಲಿಕರ ಹಿಂಸಾಚಾರಕ್ಕೆ ಒಳಗಾಗಿತ್ತು. ಅನಂತರ ಅದು ವಾಣಿಜ್ಯೋದ್ಯಮದಲ್ಲಿ ತುಂಬ ಯಶಸ್ವಿಯಾಗಿ ಜರ್ಮನಿಯಲ್ಲಿ ಪ್ರವರ್ಧಮಾನವಾಯಿತು. ವೆಬರನ ಅಜ್ಜ ಹೆಸರಾಂತ ಲಿನನ್ ವ್ಯಾಪಾರಿಯಾಗಿದ್ದ. ಅವನ ಒಬ್ಬ ಮಗ ಕುಟುಂಬದ ವ್ಯಾಪಾರವನ್ನು ಬೆಳೆಸಲು ಆದ್ಯಗಮನ ನೀಡಿದರೆ, ವೆಬರನ ತಂದೆ ಸ್ವಲ್ಪ ಕಾಲ ಬರ್ಲಿನ್ನಿನ ನಗರಸರ್ಕಾರದಲ್ಲಿ ಕೆಲಸಮಾಡಿ, ಅನಂತರ ನ್ಯಾಯಾಧಿಕಾರಿಯಾಗಿ ಕಾರ್ಯನಿರ್ವಹಿಸಿ ಕೊನೆಗೆ ಬರ್ಲಿನ್‌ನಲ್ಲಿ ರಾಜಕೀಯರಂಗ ಪ್ರವೇಶಿಸಿ ಒಳ್ಳೆಯ ಹೆಸರು ಸಂಪಾದಿಸಿದ. ಅವನು ಬರ್ಲಿನ್‌ನಲ್ಲಿ ಸಭಾಸದಸ್ಯನಾಗಿ ಕಾರ್ಯವನ್ನಾರಂಭಿಸಿ ಅನಂತರ ಪ್ರಷ್ಯದ ಹೌಸ್ ಆಫ್ ಡೆಪ್ಯೂಟೀಸ್‌ನ ಮತ್ತು ಜರ್ಮನಿಯ ರೀಪ್‌ಸ್ಟಾಗ್‌ನ ಸದಸ್ಯನಾಗಿ

ತನ್ನ ರಾಜಕೀಯ ಚಟುವಟಿಕೆಗಳನ್ನು ಮುಂದುವರಿಸಿದ. ಅವನು ರಾಷ್ಟ್ರೀಯ ವಿಚಾರವಾದಿ ಪಕ್ಷದ ಒಬ್ಬ ಪ್ರಮುಖ ಸದಸ್ಯನಾಗಿದ್ದ. ಈ ಪಕ್ಷ ಬಿಸ್‌ಮಾರ್ಕನೊಡನೆ ರಾಜಿ ಮಾಡಿ ಕೊಂಡು ಅವನು ಪ್ರತಿಪಾದಿಸುತ್ತಿದ್ದ ರಾಜಕೀಯ ನೀತಿನಿಯಮಗಳಿಗೆ ತನ್ನ ಒಪ್ಪಿಗೆಯನ್ನು ನೀಡಿತ್ತು. ಆಗಿನ ಜರ್ಮನಿಯ ರಾಜಕಾರಣದ ಮೇಲೆ ಹಿಡಿತವನ್ನಿರಿಸಿಕೊಂಡಿದ್ದ ಜನರೊಡನೆ ನಿಕಟ ಸಂಬಂಧ ಹೊಂದಿದ್ದ ವೆಬರನ ತಂದೆ ಸಂತೃಪ್ತವಾದ, ಸುಖಪ್ರಿಯ ಮತ್ತು ಸೀಮಿತ ಜೀವನ ನಡೆಸುತ್ತಿದ್ದ. ಅವನು ಜರ್ಮನಿಯ ಬಂಡವಾಳಶಾಹಿ ಪದ್ಧತಿಯ ಪ್ರತೀಕ ವಾದ ರಾಜಕೀಯ ಮುಖಂಡನ ಚಿತ್ರವನ್ನು ಬಹು ಚೆನ್ನಾಗಿ ಪ್ರತಿಬಿಂಬಿಸುತ್ತಾನೆ.

ಮ್ಯಾಕ್ಸ್ ವೆಬರನ ತಾಯಿಯೂ ಇಂತಹುದೇ ಒಂದು ಸಾಮಾಜಿಕ ಸಾಂಸ್ಕೃತಿಕ ವಾತಾವರಣದಿಂದ ಬಂದವಳಾಗಿದ್ದಳು. ಆದರೆ ಅವಳು ಸಂಪೂರ್ಣವಾಗಿ ಬೇರೆಯದೇ ಆದ ಸ್ವಭಾವದಿಂದ ಕೂಡಿದ್ದಳು. ಅವಳ ತಂದೆ ಶಾಲಾಮುಖ್ಯೋಪಾಧ್ಯಾಯರ ವಂಶಕ್ಕೆ ಸೇರಿದವನಾಗಿದ್ದು ಸ್ವತಃ ಉಪಾಧ್ಯಾಯನಾಗಿ, ಭಾಷಾಂತರಕಾರನಾಗಿ, ಬುದ್ಧಿಜೀವಿಯಾಗಿ ಹೆಸರುವಾಸಿಯಾಗಿದ್ದ. ಪ್ರಷ್ಯ ದೇಶ ನೆಪೋಲಿಯನನೊಡನೆ ನಡೆಸಿದ ಯುದ್ಧದಲ್ಲಿ ಭಾಗ ವಹಿಸಿದ ಅನಂತರ ಅವನು ಒಬ್ಬ ಉನ್ನತ ಪ್ರಷ್ಯನ್ ಆಡಳಿತಾಧಿಕಾರಿಯಾಗಿ ಜೀವನ ಸಾಗಿಸಿದ. ತನ್ನ ಮೊದಲನೆಯ ಹೆಂಡತಿಯ ನಿಧನದ ಅನಂತರ, ಫ್ರಾಂಕ್‌ಫರ್ಟ್‌ನ ಶ್ರೀಮಂತ ವ್ಯಾಪಾ ರಿಯ ಮಗಳಾದ ಎಮಿಲಿಯನ್ನು ಅವನು ಮದುವೆಯಾದ. ಅವನ ಹಣಕಾಸಿನ ಸ್ಥಿತಿ ತುಂಬ ಉತ್ತಮಗೊಂಡಿದ್ದರಿಂದ ಅವನು ಹೈಡೆಲ್‌ಬರ್ಗ್‌ನಲ್ಲಿ ವಿಶ್ರಾಂತಿಜೀವನವನ್ನು ನಡೆ ಸಲು ನಿರ್ಧರಿಸಿ, ಅನೇಕ ಬುದ್ಧಿಜೀವಿಗಳಿಗೆ ಹಣಕಾಸಿನ ನೆರವು ನೀಡುತ್ತ ಅವರನ್ನು ಎಲ್ಲ ರೀತಿಯಿಂದಲೂ ಪ್ರೋತ್ಸಾಹಿಸತೊಡಗಿದ.

ತರುಣ ವೆಬರ್ ಬಂಡವಾಳಶಾಹಿ ವಾತಾವರಣದಿಂದ ಕೂಡಿದ ಸುಸಂಸ್ಕೃತ ಜರ್ಮನಿಯ ಕುಟುಂಬದಲ್ಲಿ ಬೆಳೆದ. ಜರ್ಮನಿಯ ಪ್ರಸಿದ್ಧ ರಾಜಕಾರಣಿಗಳು ಮತ್ತು ಬುದ್ಧಿಜೀವಿಗಳು ವೆಬರನ ಕುಟುಂಬಕ್ಕೆ ಆಗಾಗ್ಗೆ ಅತಿಥಿಗಳಾಗಿ ಆಗಮಿಸುತ್ತಿದ್ದರು : ಇಲ್ಲಿ ವೆಬರ್ ತನ್ನ ಚಿಕ್ಕವಯಸ್ಸಿನಲ್ಲಿಯೇ ಪ್ರಸಿದ್ಧ ಇತಿಹಾಸಕಾರರಾದ ಟ್ರೀಚ್‌ಕೆ, ಸೀಬೆಲ್, ಮಾಮ್ ಸೇನ್ ಮುಂತಾದವರುಗಳನ್ನು ಭೇಟಿಮಾಡುವ ಸುವರ್ಣಾವಕಾಶ ಪಡೆದಿದ್ದ. ಆದರೆ ಅವನ ತಾಯಿತಂದೆಯರ ವೈವಾಹಿಕ ಜೀವನ ಆರಂಭದಲ್ಲಿ ಸುಖದಾಯಕವಾಗಿ ತೋರಿದರೂ ಕ್ರಮೇಣ ಘರ್ಷಣೆಗಳು ಅದರಲ್ಲಿ ಕಾಣಿಸಿಕೊಳ್ಳತೊಡಗಿದುವು. ತಂದೆತಾಯಿಯರು ತಮ್ಮತಮ್ಮಲ್ಲಿಯೇ ಜಗಳ ವಾಡುತ್ತಿದ್ದುದು ಚಿಕ್ಕ ವಯಸ್ಸಿನ ವೆಬರನ ಮನಸ್ಸಿನ ಮೇಲೆ ತುಂಬ ಪರಿಣಾಮ ಬೀರಿತು. ವೆಬರನ ತಾಯಿ ಅತೀವ ಮತೀಯ ಭಾವನೆಗಳನ್ನು ಹೊಂದಿದ್ದು ಕ್ಯಾಲ್ವಿನನ ಕರ್ತವ್ಯಪ್ರಜ್ಞೆ ಯನ್ನು ಹುಟ್ಟುಗುಣವಾಗಿ ಬೆಳೆಸಿಕೊಂಡಿದ್ದಳು. ಇದು ಅವಳ ಗಂಡ ಬೆಳೆಸಿಕೊಂಡಿದ್ದ ಪ್ರಾಟೆ ಸ್ಟಂಟ್ ಮತದ ಗುಣಗಳಿಗೆ ಅತ್ಯಂತ ವಿರುದ್ಧವಾಗಿತ್ತು.

ಮ್ಯಾಕ್ಸ್ ವೆಬರ್ ತುಂಬ ಚುರುಕು ಸ್ವಭಾವವುಳ್ಳವನಾಗಿದ್ದರೂ ಅನಾರೋಗ್ಯದಿಂದ ಕೂಡಿದವನಾಗಿಯೂ ಸಂಕೋಚ ಸ್ವಭಾವದವನಾಗಿಯೂ ಇದ್ದ. ಅವನ ಗುರುಗಳು, ಅವನು ತಮ್ಮ ಅಧಿಕಾರಕ್ಕೆ ಗೌರವ ತೋರಿಸುವುದಿಲ್ಲವೆಂದೂ ಅವನು ಸರಿಯಾದ ಜೀವನಕ್ರಮವನ್ನು ರೂಪಿಸಿಕೊಂಡಿಲ್ಲವೆಂದೂ ಆಕ್ಷೇಪಿಸತೊಡಗಿದರು. ಆದರೆ ಅವನು ತುಂಬ ಓದುತ್ತಿದ್ದ.

ತನ್ನ ಹದಿನಾಲ್ಕನೆಯ ವಯಸ್ಸಿನಲ್ಲೇ ಅವನು ಹೋಮರ್, ವರ್ಜಿಲ್, ಸಿಸಿರೊ, ಲಿವಿ ಮುಂತಾದವರ ಹೇಳಿಕೆಗಳನ್ನೊಳಗೊಂಡಿದ್ದ ಪತ್ರಗಳನ್ನು ಬರೆಯತೊಡಗಿದ. ಪ್ರಸಿದ್ಧ ದಾರ್ಶನಿಕರಾದ ಗಯಟೆ, ಸ್ಪಿನೋಜ, ಕ್ಯಾಂಟ್ ಮತ್ತು ಷೋಪೆನ್‌ಹೌರ್‌ಗಳ ಬರವಣಿಗೆಗಳನ್ನು ಅವನು ವಿಶ್ವವಿದ್ಯಾನಿಲಯವನ್ನು ಪ್ರವೇಶಿಸುವುದಕ್ಕೆ ಮುಂಚೆಯೇ ಅಧ್ಯಯನ ಮಾಡಿದ್ದ.

ವೆಬರನ ಕುಟುಂಬದಲ್ಲಿ ಮನೆತನದ ವ್ಯವಹಾರಗಳ ಮೇಲೆ ತಂದೆಯ ಹಿಡಿತ ಅತ್ಯಂತ ಬಲವಾಗಿತ್ತು: ಅವನು ರಾಜಕೀಯ ಕ್ಷೇತ್ರದಲ್ಲಿ ಉದಾರವಾದಿ ಅಭಿಪ್ರಾಯಗಳನ್ನು ಎತ್ತಿ ಹಿಡಿದರೂ, ತನ್ನ ಗೃಹದಲ್ಲಿ ಮಾತ್ರ ತುಂಬ ನಿಷ್ಕರುಣ ಶಿಸ್ತಿನ ಸಿಪಾಯಿಯಂತೆ ವರ್ತಿಸುತ್ತಿದ್ದ. ವೆಬರನ ತಾಯಿ ಮಗನನ್ನು ತನ್ನ ಕಡೆ ಸೆಳೆದುಕೊಂಡು ಅವನಲ್ಲಿ ತಾನು ತುಂಬ ಮೆಚ್ಚಿಕೊಂಡಿದ್ದ ಕ್ರೈಸ್ತ ಮತದ ತತ್ವಗಳ ಬಗ್ಗೆ ಆಸಕ್ತಿ ಉಂಟುಮಾಡಲು ಪ್ರಯತ್ನಿಸಿದರೂ, ವೆಬರ್ ಮಾತ್ರ ತನ್ನ ತಾರುಣ್ಯದಲ್ಲಿ ತನ್ನ ತಾಯಿಗಿಂತ ತಂದೆಯ ಕಡೆಗೇ ಹೆಚ್ಚಾಗಿ ಒಲವು ತೋರಿದ. ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ವೆಬರ್ ಹೈಡಲ್‌ಬರ್ಗ್ ವಿಶ್ವವಿದ್ಯಾಲಯವನ್ನು ಪ್ರವೇಶಿಸಿದಾಗ, ತನ್ನ ತಂದೆ ರೂಢಿಸಿಕೊಂಡು ಬೆಳೆಸಿಕೊಂಡಿದ್ದ ಗುಣಗಳನ್ನು ತುಂಬ ಮೆಚ್ಚಿಕೊಂಡು ಅವುಗಳ ಬೆಳವಣಿಗೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ. ತನ್ನ ತಂದೆ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಕುಸ್ತಿ ಅಖಾಡದ ಸದಸ್ಯನಾಗಿ ವೆಬರನೂ ಅತ್ಯಂತ ಆಸಕ್ತಿಯಿಂದ ಕುಸ್ತಿ ಮಾಡುವುದನ್ನು ಅಭ್ಯಸಿಸತೊಡಗಿದ. ತನ್ನ ತಂದೆ ಆರಿಸಿಕೊಂಡಿದ್ದ ಕಾನೂನಿನ ಅಧ್ಯಯನವನ್ನೇ ತನ್ನ ಪ್ರಧಾನ ಅಧ್ಯಯನ ವಿಷಯವಾಗಿ ಆರಿಸಿಕೊಂಡ. ಕುಸ್ತಿಮಾಡುವುದರಲ್ಲೂ ಪಾನಸೇವನೆಯಲ್ಲಿಯೂ ವೆಬರ್ ದಿನೇದಿನೇ ಹೆಚ್ಚಿನ ಆಸಕ್ತಿ ತೋರತೊಡಗಿದ.

ವೆಬರ್ ಇಂಥ ಕೆಲವು ಅಭ್ಯಾಸಗಳನ್ನು ಬೆಳೆಸಿಕೊಂಡಿದ್ದರೂ, ಅವನು ತನ್ನ ಅಧ್ಯಯನದ ಕಡೆಗೆ ವಿಶೇಷ ಗಮನ ನೀಡುತ್ತಿದ್ದ. ಅವನು ಕಾನೂನಿನ ಅಧ್ಯಯನದ ಜೊತೆಗೆ ಅರ್ಥಶಾಸ್ತ್ರ, ಮಧ್ಯಯುಗದ ಇತಿಹಾಸ ಮತ್ತು ದರ್ಶನಗಳ ಅಧ್ಯಯನಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ. ಇದಲ್ಲದೆ ಮ್ಯಾಕ್ಸ್ ವೆಬರ್ ರೋಮನ್ ನ್ಯಾಯ ಮತ್ತು ರೋಮನ್ ಸಂಸ್ಥೆಗಳ ಅಧ್ಯಯನದಲ್ಲೂ ಆಸಕ್ತಿ ತಳೆದ. ಇದರ ಜೊತೆಗೆ ಅವನು ಮತಧರ್ಮಶಾಸ್ತ್ರದ ಬಗ್ಗೆಯೂ ಆಳವಾದ ಜ್ಞಾನ ಸಂಪಾದಿಸಿಕೊಂಡ. ಮೂರು ವರ್ಷಗಳ ಅನಂತರ ವೆಬರ್ ಸ್ಟ್ರಾಸ್‌ಬರ್ಗ್‌ನಲ್ಲಿ ವಿಶೇಷ ಮಿಲಿಟರಿ ಸೇವೆ ಸಲ್ಲಿಸಲು ಹೈಡಲ್‌ಬರ್ಗ್ ವಿಶ್ವವಿದ್ಯಾಲಯವನ್ನು ಬಿಡಬೇಕಾಗಿ ಬಂತು. ಇಲ್ಲಿ ಅವನು ಇತಿಹಾಸಕಾರನಾಗಿ ಪ್ರಸಿದ್ಧಿಗೆ ಬಂದಿದ್ದ ತನ್ನ ಚಿಕ್ಕಪ್ಪ ಹರ್‌ಮನ್ ಬಾಮ್‌ಗಾರ್ಟನ್ ಮತ್ತು ಆತನ ಹೆಂಡತಿ ಈವಾ ಅವರುಗಳ ಪ್ರಭಾವಕ್ಕೊಳಗಾದ.

ಬಹು ಬೇಗ ಬಾಮ್‌ಗಾರ್ಟನ್ ದಂಪತಿಗಳು ವೆಬರನಿಗೆ ಎರಡನೆಯ ತಂದೆತಾಯಿಗಳಾದರು. ಅವನ ಬೆಳವಣಿಗೆಯ ಮೇಲೆ ಅವರ ಪ್ರಭಾವ ನಿರ್ಣಾಯಕವಾದ್ದಾಗಿತ್ತು. ಹರ್‌ಮನ್ ಬಾಮ್‌ಗಾರ್ಟನ್ ವೆಬರನ ತಂದೆಯ ಹಾಗೆ ಉದಾರವಾದಿ ರಾಜಕೀಯ ತತ್ತ್ವಗಳಲ್ಲಿ ತುಂಬ ನಂಬಿಕೆಯನ್ನಿರಿಸಿಕೊಂಡಿದ್ದರೂ ಅವನು ಬಿಸ್‌ಮಾರ್ಕನಿಗೆ ಬೆಂಬಲವಾಗಿ ನಿಂತಿದ್ದ ಜರ್ಮನ್ ರೀಚ್‌ನೊಡನೆ ಯಾವ ರೀತಿಯ ಒಡಂಬಡಿಕೆಯನ್ನು ಮಾಡಿಕೊಳ್ಳದೆ ತಾನು ತಾರುಣ್ಯದಲ್ಲಿ ಬೆಳೆಸಿಕೊಂಡಿದ್ದ ಉದಾರವಾದಿ ತತ್ತ್ವಗಳನ್ನು ಚಾಚೂ ತಪ್ಪದೆ ಅನುಸರಿಸತೊಡಗಿದ. ವೆಬರನ ತಂದೆ ಬಿಸ್‌ಮಾರ್ಕನೊಡನೆ ರಾಜಿ ಮಾಡಿಕೊಂಡಿದ್ದರಿಂದ ಅವನಿಗೆ ಅನೇಕ ರೀತಿಯ ರಾಜಕೀಯ

ಸೌಲಭ್ಯಗಳು ದೊರೆತಿದ್ದುವು. ಆದರೆ ಅವನ ಚಿಕ್ಕಪ್ಪ ಅಂಥ ಯಾವ ಆಸೆ ಆಮಿಷಗಳ ಬಲೆಗೂ ಬಲಿ ಬೀಳಲಿಲ್ಲ.

ವೆಬರನ ಚಿಕ್ಕಪ್ಪ ವೆಬರನನ್ನು ಸರಿಸಮಾನತೆಯಿಂದ ನೋಡತೊಡಗಿ ಅವನನ್ನು ತನ್ನ ಸರಿ ಸಮಾನ ಬುದ್ಧಿಜೀವಿಯೆಂದು ಪರಿಗಣಿಸಿದ. ಆದರೆ ಅವನ ತಂದೆಯಾದರೋ ಯಾವಾಗಲೂ ಮಗನ ಮೇಲೆ ತನ್ನ ಅಧಿಕಾರವನ್ನು ಚಲಾಯಿಸುವುದರಲ್ಲೇ ಸಂತೃಪ್ತಿಗೊಳ್ಳುತ್ತಿದ್ದ. ತಾನು ಸ್ಟ್ರಾಸ್‌ಬರ್ಗ್‌ನಲ್ಲಿ ನೆಲೆಸಿದಂದಿನಿಂದ ಹಿಡಿದು ತನ್ನ ಚಿಕ್ಕಪ್ಪ 1893ರಲ್ಲಿ ಮರಣ ಹೊಂದುವ ವರೆಗೂ ವೆಬರ್ ಅನೇಕರಿಗೆ ಬರೆದಿರುವ ಪತ್ರಗಳಲ್ಲಿ ತನ್ನ ಚಿಕ್ಕಪ್ಪ ರಾಜಕೀಯ, ಹಾಗೂ ಬೌದ್ಧಿಕ ವಿಚಾರಗಳಿಗೆ ಸಂಬಂಧಿಸಿದ ಹಾಗೆ ತನಗೆ ಹೇಗೆ ಗುರುವಾಗಿಯೂ ಮಾರ್ಗದರ್ಶಿ ಯಾಗಿಯೂ ನೆರವಾಗುತ್ತಿದ್ದ ಎಂಬುದನ್ನು ಒತ್ತಿ ಒತ್ತಿ ಹೇಳಿದ್ದಾನೆ. ಅವನ ಮೇಲೆ ಅವನ ಚಿಕ್ಕಮ್ಮನ ಪ್ರಭಾವವೂ ಅಷ್ಟೇ ಬಲಯುತವಾದುದಾಗಿತ್ತು. ವೆಬರನ ತಾಯಿ ಮಗನನ್ನು ಮತಧರ್ಮದಲ್ಲಿ ಆಸಕ್ತಿ ಪಡೆಯುವಂತೆ ಮಾಡಲು ಪ್ರಯತ್ನಿಸಿ ವಿಫಲಗೊಂಡರೆ ಅದಕ್ಕೆ ವಿರುದ್ಧ ವಾಗಿ ಆತನ ಚಿಕ್ಕಮ್ಮ ಅವನು ಮತಧರ್ಮಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಓದುವ ಅಭಿರುಚಿ ಬೆಳೆಸಿಕೊಳ್ಳುವಂತೆ ತನ್ನ ಪ್ರಭಾವ ಬೀರುವುದರಲ್ಲಿ ಸಾಕಷ್ಟು ಯಶಸ್ಸು ಗಳಿಸಿದಳು. ತನ್ನ ಚಿಕ್ಕಮ್ಮನ ವ್ಯಕ್ತಿತ್ವದಿಂದ ವೆಬರ್ ತುಂಬ ಆಕರ್ಷಿಸಲ್ಪಟ್ಟ. ಎಂತಹ ಸಂದರ್ಭ ಒದಗಿದರೂ ಆಕೆ ತನ್ನ ಮತಧರ್ಮಕ್ಕೆ ಸಂಬಂಧಿಸಿದ ತನ್ನ ನಿಲುವನ್ನು ಸ್ವಲ್ಪವೂ ಬದಲಾಯಿಸುತ್ತಿರಲಿಲ್ಲ. ತನ್ನ ಗೃಹ ಕೃತ್ಯಗಳ ಮೇಲ್ವಿಚಾರಣೆಯಲ್ಲಿ ಅವಳು ಸಾಮಾಜಿಕ ಹೊಣೆಗಾರಿಕೆಯ ಪ್ರಜ್ಞೆಯನ್ನು ಪ್ರದರ್ಶಿ ಸುತ್ತಿದ್ದಳು. ಸಾಮಾಜಿಕ ಸೇವೆ ಸಲ್ಲಿಸುವುದರಲ್ಲಿ ಅವಳು ತುಂಬ ಹೊಣೆಗಾರಿಕೆಯಿಂದ ನಡೆದು ಕೊಳ್ಳುತ್ತಿದ್ದಳು. ತನ್ನ ತಾಯಿ ಪ್ರತಿಪಾದಿಸುತ್ತಿದ್ದ ಸಾಮಾಜಿಕ, ನೈತಿಕ ಮತ್ತು ದಾರ್ಶನಿಕ ಮೌಲ್ಯಗಳನ್ನು ತನ್ನ ಚಿಕ್ಕಮ್ಮ ತನ್ನ ದೈನಂದಿನ ಜೀವನಕ್ಕೆ ಅಳವಡಿಸಿಕೊಂಡಿರುವುದನ್ನು ಕಂಡು ಯುವಕ ವೆಬರ್ ತುಂಬ ಉಬ್ಬಿಹೋದ. ಪ್ರಾಯಶಃ ವೆಬರ್ ಸ್ಟ್ರಾಸ್‌ಬರ್ಗ್‌ನಲ್ಲಿ ನೆಲೆಸಿದ್ದ ಕಾಲದಲ್ಲಿ ತನ್ನ ಜೀವಮಾನದುದ್ದಕ್ಕೂ ತನ್ನ ವ್ಯಕ್ತಿತ್ವದ ಮೇಲೆ ಪರಿಣಾಮಕಾರಿಯಾಗಿ ಪ್ರಭಾವ ಬೀರಿದ ಪ್ರಾಟೆಸ್ಟಂಟ್ ಮತಧರ್ಮದ ಗುಣಗಳ ಬಗ್ಗೆ ವಿಶದವಾಗಿ ಅರಿತುಕೊಂಡ. ಅವನು ನೈತಿಕದರ್ಶನವನ್ನು ಪ್ರತಿಪಾದಿಸಿ ಅದನ್ನು ತಮ್ಮ ಜೀವನಕ್ಕೆ ಅಳವಡಿಸಿಕೊಂಡಿದ್ದವರ ಬಗ್ಗೆ ತುಂಬ ಗೌರವಾದರಗಳಿಂದ ನಡೆದುಕೊಂಡ.

ವೆಬರ್ ಸ್ಟ್ರಾಸ್‌ಬರ್ಗ್‌ನಲ್ಲಿದ್ದ ಕಾಲದಲ್ಲಿ ತನ್ನ ತಂದೆಯ ನಡತೆಯ ಬಗ್ಗೆ ಗೌರವ ಕಳೆದುಕೊಂಡ. ತನ್ನ ತಂದೆ ನಡೆಸುತ್ತಿದ್ದ ಭೋಗಜೀವನವನ್ನು ಕಂಡು ಅವನು ಜುಗುಪ್ಸೆ ಗೊಂಡು ತನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮ ನಡೆಸುತ್ತಿದ್ದ ಧಾರ್ಮಿಕ ಮತ್ತು ನೈತಿಕ ತತ್ತ್ವಗಳನ್ನು ಧರಿಸಿದ ಜೀವನದಿಂದ ವೆಬರ್ ಬಹುವಾಗಿ ಆಕರ್ಷಿಸಲ್ಪಟ್ಟ.

ವೆಬರ್ ಬಾಮ್‌ಗಾರ್ಟನ್‌ನ ಮಗಳು ಎಮ್ಮಿಯಲ್ಲಿ ಅನುರಕ್ತನಾಗಿದ್ದ. ಸುಮಾರು ಆರು ವರ್ಷಗಳ ಕಾಲ ವೆಬರ್ ಮತ್ತು ಮತ್ತು ಎಮ್ಮಿ ಇವರ ಪ್ರೇಮ ಸಂಬಂಧ ಅತ್ಯಂತ ಘರ್ಷಣೆ ಮತ್ತು ಏರಿಳಿತಗಳಿಂದ ಕೂಡಿತ್ತು. ದೈಹಿಕವಾಗಿ ಮತ್ತು ಮಾನಸಿಕವಾಗಿ ಎಮ್ಮಿ ಅನಾರೋಗ್ಯದಿಂದ ಕೂಡಿದ್ದಳು. ಅನೇಕ ವರ್ಷಗಳ ಸಂಶಯ ಮತ್ತು ಅಪರಾಧಿ ಮನೋಭಾವಗಳ ಒತ್ತಡದಿಂದ ವೆಬರ್ ಕೊನೆಗೆ ತಾನು ಎಮ್ಮಿಯೊಡನೆ ಹೊಂದಿದ್ದ ಪ್ರೇಮ ಸಂಬಂಧವನ್ನು ಕಡಿದುಹಾಕಿದ.

1884ರಲ್ಲಿ ಸೈನ್ಯದ ಸೇವೆ ಮುಗಿದ ಅನಂತರ ವೆಬರ್ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮುಂದುವರಿಸಲು ತನ್ನ ಮನೆಗೆ ಹಿಂದಿರುಗಿದ. ಅವನ ತಂದೆತಾಯಿಗಳ ಅವನು ಬಾಮ್‌ಗಾರ್ಟನ್ ಕುಟುಂಬದ ಪ್ರಭಾವದಿಂದ ವಿಮುಕ್ತನಾಗಬೇಕೆಂದು ಬಯಸಿ ಅವನು ಹಿಂದಿರುಗುವುದನ್ನು ಅತ್ಯಂತ ಆತಂಕ ಮತ್ತು ಕಾತರತೆಗಳಿಂದ ಎದುರು ನೋಡುತ್ತಿದ್ದರು. ವೆಬರ್ ನಡೆಸುತ್ತಿದ್ದ ಸ್ವಚ್ಛಂದ ಜೀವನಕ್ಕೆ ಕಡಿವಾಣ ಹಾಕಲೂ ಅವರು ತುಂಬ ಕಾತರತೆಯಿಂದಿದ್ದರು. ಸುಮಾರು ಎಂಟು ವರ್ಷಗಳ ಕಾಲ ವೆಬರ್ ತನ್ನ ತಂದೆತಾಯಿಯರ ಆಶ್ರಯದಲ್ಲಿ ವಿದ್ಯಾರ್ಥಿಯಾಗಿಯೂ ಅನಂತರ ಬರ್ಲಿನ್ ನ್ಯಾಯಾಲಯಗಳಲ್ಲಿ ಕಿರಿಯ ವಕೀಲನಾಗಿಯೂ ಇದುಕೊಂಡಿದ್ದು ಕಡೆಯಲ್ಲಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕನಾಗಿ ಕಾಲಕಳೆದ. ಆ ದಿನಗಳಲ್ಲಿ ವೆಬರ್ ಹಣಕಾಸಿನ ದೃಷ್ಟಿಯಿಂದ ತಾನು ಇಷ್ಟಪಡದ ತಂದೆಯ ಮೇಲೆ ಅವಲಂಬಿತನಾಗಬೇಕಾಗಿದ್ದಿತ್ತು. ತಾನು ತನ್ನ ಚಿಕ್ಕಮ್ಮನ ಜೊತೆ ವಾಸಿಸುತ್ತಿದ್ದ ಕಾಲದಲ್ಲಿ ತನ್ನ ತಾಯಿಯ ವ್ಯಕ್ತಿತ್ವ ಮತ್ತು ಆವಳ ಮತಧರ್ಮದ ತತ್ವಗಳ ಬಗ್ಗೆ ಅವನ್ದ ಹೆಚ್ಚಿನ ತಿಳಿವಳಿಕೆ ಬೆಳಸಿಕೊಂಡ. ತನ್ನ ತಂದೆ ತನ್ನ ತಾಯಿಯನ್ನು ಮೃಗದೋಪಾದಿಯಲ್ಲಿ ನಡೆಸಿಕೊಳ್ಳುತ್ತಿದ್ದುದನ್ನು ನೆನೆಸಿಕೊಂಡು ವ್ಯಥೆಪಡುತ್ತಿದ್ದ.

ಬರ್ಲಿನ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ವೆಬರ್ ವಿದ್ವಾಂಸರುಗಳಾದ ಜಾಕಬ್ ಗಾಲ್ಟ್‌ಷ್ಮಿತ್ ಮತ್ತು ಮಾಮ್‌ಸೆನ್‌ರನ್ನು ಬಹಳ ಗೌರವದಿಂದ ಕಾಣುತ್ತಿದ್ದ. ತನ್ನ ಪಿ.ಎಚ್‌ಡಿ. ಪ್ರಬಂಧವನ್ನು ತಯಾರಿಸಲು ಎಲ್ಲ ರೀತಿಯ ಮಾರ್ಗದರ್ಶನ ನೀಡಿದ ಗುರು ಮಾಮ್‌ಸೆನನ ಜೊತೆ ವೆಬರ್ ನಿಕಟ ಸಂಬಂಧ ಹೊಂದಿದ್ದ. 1889ರಲ್ಲಿ ಅವನು ಮಧ್ಯಯುಗದ ವಾಣಿಜ್ಯಸಂಸ್ಥೆಗಳ ಇತಿಹಾಸ ಎಂಬ ಪ್ರಬಂಧ ತಯಾರಿಸಿದ. ಈ ಪ್ರಬಂಧದ ಬಗ್ಗೆ ಅವನ ಗುರು ಈ ಅರ್ಥಗರ್ಭಿತ ಮಾತುಗಳನ್ನಾಡಿದ್ದಾನೆ: "ನಾನು ಸಾಯುವ ವೇಳೆ ಬಂದಾಗ್ಗ ಈ ಮಾತನ್ನು ಬೇರೆಯವರಿಗಿಂತ ಉತ್ತಮನಾದ ಇವನಿಗೆ ಹೇಳಬಯಸುತ್ತೇನೆ: 'ಪುತ್ರನೆ, ಈ ಭರ್ಜಿಯನ್ನು ನಾನು ಹೊರಲಾರೆ ; ದಯವಿಟ್ಟು ಇನ್ನು ಮೇಲೆ ಇದನ್ನು ನೀನು ಹೊರುವ ಜವಾಬ್ದಾರಿ ಹೊಂದು.'"

ವೆಬರ್ ಬರ್ಲಿನ್‌ನಲ್ಲಿ ನೆಲೆಸಿದ್ದ ವರ್ಷಗಳಲ್ಲಿ ತುಂಬ ಪರಿಣಾಮಕಾರಿಯಾದ ರೀತಿಯಲ್ಲಿ ಪ್ರಬಂಧಗಳನ್ನೂ ಲೇಖನಗಳನ್ನೂ ಪುಸ್ತಕಗಳನ್ನೂ ಹೊರತಂದ. 1891ರಲ್ಲಿ ವೆಬರ್ ರೋಮ್ ದೇಶದ ವ್ಯವಸಾಯ ಪದ್ಧತಿ ಎಂಬ ಒಂದು ಪ್ರಮುಖ ಪುಸ್ತಕವನ್ನು ಹೊರತಂದ. ಅನಂತರ ಜರ್ಮನಿಯ ಪೂರ್ವ ಎಲ್ಬಿಯನ್ ಪ್ರದೇಶದ ವ್ಯವಸಾಯಗಾರರ ಸ್ಥಿತಿಗತಿಗಳನ್ನು ಕುರಿತು ವೆಬರ್ ಸುಮಾರು ಒಂಬೈನೂರು ಪುಟಗಳ ಒಂದು ಬೃಹತ್ ಗ್ರಂಥ ಪ್ರಕಟಿಸಿದ. ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ತನ್ನ ಗುರು ಗಾಲ್ಟ್‌ಷ್ಮಿತ್ತನ ಸ್ಥಾನದಲ್ಲಿ ಉಪನ್ಯಾಸಕನಾಗಿ, ಮೇಲೆ ತಿಳಿಸಿದ ಪ್ರಕಟನೆಗಳನ್ನು ಹೊರತಂದ ಅನಂತರ, ನೇಮಕಗೊಂಡ. ಅದೇ ಕಾಲದಲ್ಲಿ ವಕೀಲಿಯನ್ನು ಮುಂದುವರಿಸಿದ. ಈ ದಿವಸಗಳಲ್ಲಿ ವೆಬರ್ ತುಂಬ ಕಟ್ಟುನಿಟ್ಟಾದ ಮತ್ತು ಶಿಸ್ತಿನಿಂದ ಕೂಡಿದ ಸರಳಜೀವನವಿಧಾನ ರೂಪಿಸಿಕೊಂಡ. ತನ್ನ ಆತ್ಮಸಾಕ್ಷಿಯ ಮಾರ್ಗದರ್ಶನದ ಮೂಲಕ ತನ್ನ ದೈನಂದಿನ ಚಟುವಟಿಕೆಗಳನ್ನು ತುಂಬ ಎಚ್ಚರಿಕೆಯಿಂದ ಸುಸಂಬದ್ಧವಾದ ರೀತಿಯಲ್ಲಿ ಅವನು ಮುಂದುವರಿಸಿಕೊಂಡು ಹೋಗುತ್ತಿದ್ದ.

ವೆಬರ್ ವೈದ್ಯನೊಬ್ಬನ 22 ವರ್ಷ ವಯಸ್ಸಿನ ಮಗಳನ್ನು ಮದುವೆಯಾಗಿ ಮಾನಸಿಕ ತುಮುಲದಿಂದ ಬಿಡುಗಡೆಹೊಂದಿದ. ಅದೇ ಕಾಲದಲ್ಲಿ ಫ್ರೀಬರ್ಗ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಅಧ್ಯಾಪಕನಾಗಿ ಅವನು ನೇಮಕಗೊಂಡ. ಇದೂ ಅವನ ಮಾನಸಿಕ ಬೆಳವಣಿಗೆಯ ಮೇಲೆ ತುಂಬ ಪರಿಣಾಮಕಾರಿಯಾದ ಪ್ರಭಾವ ಬೀರಿತು. ಗಂಡಹೆಂಡಿರಿಬ್ಬರೂ ಬೌದ್ಧಿಕ ಮತ್ತು ನೈತಿಕ ಮಿತ್ರರಾಗಿ ಜೀವನ ಸಾಗಿಸತೊಡಗಿದರು.

1895ರಲ್ಲಿ ವೆಬರ್ "ರಾಷ್ಟ್ರೀಯ ರಾಜ್ಯವ್ಯವಸ್ಥೆ ಮತ್ತು ಆರ್ಥಿಕ ನೀತಿ" ಎಂಬ ವಿಷಯದ ಮೇಲೆ ತುಂಬ ವಿದ್ವತ್‌ಪೂರ್ಣವಾದ ಮತ್ತು ರಾಷ್ಟ್ರೀಯ ಮನೋಭಾವದ ದ್ಯೋತಕವಾದ ಪ್ರಸ್ತಾವಿಕ ಭಾಷಣ ನೀಡಿದ. ಈ ಭಾಷಣ ವೆಬರನನ್ನು ವಿದ್ವಾಂಸರ ಮತ್ತು ಪ್ರಭಾವಕಾರಿ ರಾಜಕಾರಣಿಗಳ ಗಮನಕ್ಕೆ ತಂದಿತು. ಇದರಿಂದಾಗಿ 1896ರಲ್ಲಿ ವೆಬರ್ ಹೈಡಲ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ತನ್ನ ಗುರುವಾದ ಕ್ನೈಸರನ ಸ್ಥಾನದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಿಸಲ್ಪಟ್ಟ. ಹೈಡಲ್‌ಬರ್ಗ್‌ನಲ್ಲಿ ವೆಬರ್ ತನ್ನ ಹಿಂದಿನ ಗುರುಗಳೊಡನೆ ಸಂಪರ್ಕ ಇಟ್ಟುಕೊಂಡುದಲ್ಲದೆ ಹೊಸ ಮಿತ್ರರ ಮತ್ತು ಸಹಪಾಠಿಗಳ ಪರಿಚಯ ಸಹಮಾಡಿಕೊಂಡ. ವೆಬರನ ಮನೆಗೆ ಹೈಡಲ್‌ಬರ್ಗ್‌ನ ಬುದ್ಧಿಜೀವಿಗಳು ಮತ್ತು ವಿದ್ವಾಂಸರು ಬಂದು ಹೋಗುತ್ತಿದ್ದುದರಿಂದ ಅದು ನವಚೇತನವನ್ನು ಪಡೆದುಕೊಂಡಿತು. ವೆಬರ್ ಇನ್ನೂ ಚಿಕ್ಕವನಾಗಿದ್ದರೂ ಸಹಪಾಠಿಗಳ ಮತ್ತು ಬುದ್ಧಿಜೀವಿಗಳ ಕೇಂದ್ರಬಿಂದುವಾಗಿ ವರ್ತಿಸತೊಡಗಿದ. ವೆಬರನ ಪಾಂಡಿತ್ಯದ ಬಗ್ಗೆ ಎಲ್ಲರೂ ತಮ್ಮ ಮೆಚ್ಚುಗೆ ವ್ಯಕ್ತಪಡಿಸತೊಡಗಿದರು.

ತನ್ನ ಬರವಣಿಗೆಗಳನ್ನು ಪ್ರಕಟಗೊಳಿಸುವುದರ ಕಡೆಗೆ ಮಾತ್ರವೇ ಗಮನಕೊಡದೆ, ವೆಬರ್ ಕ್ರೈಸ್ತ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲೂ ಸಕ್ರಿಯವಾಗಿ ಭಾಗವಹಿಸುತ್ತ ತನ್ನ ರಾಜಕೀಯ ಆಸಕ್ತಿಗಳನ್ನು ಅಭಿವ್ಯಕ್ತಗೊಳಿಸತೊಡಗಿದ. ಅಂದಿನ ಪ್ರಚಲಿತ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ ಅನೇಕ ಲೇಖನಗಳನ್ನು ಪ್ರಸಿದ್ಧ ನಿಯತಕಾಲಿಕಗಳಿಗೆ ಬರೆದು ಕಳುಹಿಸಿಕೊಟ್ಟ. ಪಾಂಡಿತ್ಯ ಮತ್ತು ರಾಜಕೀಯ ಕ್ಷೇತ್ರಗಳೆರಡರಲ್ಲಿಯೂ ಅವನು ಸಕ್ರಿಯವಾಗಿ ಭಾಗವಹಿಸತೊಡಗಿ, ಜರ್ಮನಿಯ ಬೌದ್ಧಿಕ ಜೀವನದಲ್ಲಿ ತುಂಬ ಪ್ರಧಾನವಾದ ಸ್ಥಾನ ಗಳಿಸಿಕೊಂಡ.

ಬಹು ಬೇಗ ಇಂಥ ಒಂದು ಬಹುಮುಖ ಪ್ರತಿಭೆ ಗಳಿಸಿಕೊಂಡಿದ್ದ ವ್ಯಕ್ತಿಯ ಜೀವಮಾನ ಕೊನೆಗೊಳ್ಳುವ ಸೂಚನೆಗಳು ಕಾಣಿಸಿಕೊಂಡುವು. 1897ರ ಜುಲೈ ತಿಂಗಳಿನಲ್ಲಿ ಅವನ ತಂದೆತಾಯಿಯರು ಹೈಡಲ್‌ಬರ್ಗ್‌ಗೆ ಬಂದರು. ಅವನ ತಂದೆ ತನ್ನ ಮಕ್ಕಳೊಡನೆ ಏಕಾಂತವಾಗಿ ಕಳೆಯಬೇಕೆಂಬ ಇಚ್ಛೆಹೊಂದಿದ್ದ ಹೆಂಡತಿಯ ಅಭಿಲಾಷೆಗೆ ವಿರೋಧವಾಗಿ ತಾನೂ ಅವಳ ಜೊತೆ ಬರುವುದಾಗಿ ಹಠಹಿಡಿದು ಅವಳೊಡನೆ ಬಂದ. ಅಂಥ ಒಂದು ಸಂದರ್ಭದಲ್ಲಿ ತಂದೆಗೂ ಮಗನಿಗೂ ಘರ್ಷಣೆ ಉಂಟಾಯಿತು. ಮಗ ತನ್ನ ತಂದೆ ತನ್ನ ತಾಯಿಯನ್ನು ಪಶುವಿನೋಪಾದಿಯಲ್ಲಿ ನಡೆಸಿಕೊಳ್ಳುತ್ತಿದ್ದುದಕ್ಕಾಗಿ ದೂರಿ ಆ ಕೂಡಲೇ ತನ್ನ ಮನೆಯನ್ನು ಬಿಟ್ಟು ಹೊರಟುಹೋಗಬೇಕೆಂದು ಆ ಮುದುಕನಿಗೆ ಹೇಳಿದ. ಈ ಘಟನೆ ನಡೆದು ಒಂದು ತಿಂಗಳಿನ ಅನಂತರ ವೆಬರನ ತಂದೆ ನಿಧನಹೊಂದಿದ. ಇದಾದ ಕೆಲವು ದಿವಸಗಳ ಅನಂತರ ವೆಬರ್ ಮಾನಸಿಕ ದೈಹಿಕ ಅಸ್ವಸ್ಥತೆಗೆ ಒಳಗಾದ. ಸುಮಾರು ಐದು ವರ್ಷಗಳ ಕಾಲ ಅವನು ಚೇತರಿಸಿಕೊಳ್ಳಲಿಲ್ಲ.

ತನ್ನ ತಂದೆತಾಯಿಯರು ಅನ್ಯೋನ್ಯವಾಗಿರದೆ ಇದ್ದುದು ಮತ್ತು ಅವರು ಪ್ರತಿಪಾದಿಸುತ್ತಿದ್ದ ಪರಸ್ಪರ ವಿರೋಧವಾದ ಮೌಲ್ಯಗಳ ಬಗ್ಗೆ ಅವನು ತುಂಬಾ ಯೋಚಿಸಿದ್ದು ಅವನ ಅಸ್ವಸ್ಥತೆಗೆ ಕಾರಣಗಳಾಗಿದ್ದಿರಬಹುದು. ಬಹಳವಾಗಿ ಓದುತ್ತಿದ್ದುದೂ ಬರೆಯುತ್ತಿದುದೂ ಅವನ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯ ಮೇಲೆ ಸಾಕಷ್ಟು ಪರಿಣಾಮ ಉಂಟು ಮಾಡಿರಬೇಕೆಂದು ಅವನನ್ನು ಪರೀಕ್ಷಿಸಿದ ವೈದ್ಯರು ಅಭಿಪ್ರಾಯಪಟ್ಟರು.

ವೆಬರ್ ಅಸ್ವಸ್ಥತೆಯ ಅನಂತರ ಬಹಳ ವರ್ಷಗಳ ಕಾಲ ಯಾವ ಕೆಲಸವನೂ ಮಾಡಲು ಅಸಮರ್ಥನಾದ. ಓದುವುದರ ಮೇಲೆ ತನ್ನ ಗಮನವನ್ನು ಅನೇಕ ವೇಳೆ ಹೆಚ್ಚು ಕಾಲ ಕೇಂದ್ರೀಕರಿಸಲಾಗಲಿಲ್ಲ. ಈ ಸಂದರ್ಭದಲ್ಲಿ ವೆಬರ್ ಸ್ವಿಟ್ಜರ್ಲೆಂಡ್ ಮತ್ತು ಇಟಲಿ ದೇಶಗಳಲ್ಲಿ ಪ್ರವಾಸ ಕೈಗೊಂಡ. ಕೆಲವು ವೇಳೆ ಅವನು ತನ್ನ ಅನಾರೋಗ್ಯದಿಂದ ಚೇತರಿಸಿ ಕೊಂಡಂತೆ ಕಂಡುಬಂದರೆ, ಮರುಕ್ಷಣವೇ ಅದು ಮರುಕೊಳಿಸುತ್ತಿತ್ತು. ತನ್ನ ವಿದ್ಯಾರ್ಥಿಗಳಿಗೆ ತಾನು ಇನ್ನು ಮುಂದೆ ಉಪನ್ಯಾಸಗಳನ್ನು ನೀಡಲಾರೆನೆಂದು ಅವನಿಗೆ ಮನವರಿಕೆಯಾದಾಗ, ಹೈಡಲ್‌ಬರ್ಗ್ ವಿಶ್ವವಿದ್ಯಾಲಯದ ತನ್ನ ಪ್ರಾಧ್ಯಾಪಕ ಹುದ್ದೆಗೆ ಅವನು ರಾಜೀನಾಮೆ ನೀಡಿದ. ಸ್ವಲ್ಪ ಕಾಲವನ್ನು ಅವನು ಆರೋಗ್ಯಧಾಮವೊಂದರಲ್ಲಿ ಕಳೆದ. 1903ರಲ್ಲಿ ತುಂಬ ಅಶ್ಚರ್ಯಕರವಾದ ರೀತಿಯಲ್ಲಿ ಅವನ ಬುದ್ಧಿಶಕ್ತಿ ನಿಧಾನವಾಗಿ ಮತ್ತೆ ಕುದುರತೊಡಗಿತು. ಆ ವರ್ಷ ಅವನು ಜರ್ಮನಿಯ ಒಂದು ಸುಪ್ರಸಿದ್ಧ ಸಾಮಾಜಿಕ ವಿಜ್ಞಾನ ಪತ್ರಿಕೆಯ ಸಹ ಸಂಪಾದಕನಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿ ವಹಿಸಿಕೊಂಡ. ಅವನ ಸಂಪಾದಕೀಯ ಹುದ್ದೆಯಿಂದ ಅವನು ತನ್ನ ಅನಾರೋಗ್ಯದ ಕಾಲದಲ್ಲಿ ಕಳೆದುಕೊಂಡಿದ್ದ ಸ್ನೇಹಿತರುಗಳನ್ನೂ ಬುದ್ಧಿಜೀವಿಗಳನ್ನೂ ಮತ್ತೆ ಪಡೆದುಕೊಳ್ಳಲು ಸಾಧ್ಯವಾಯಿತು.

1904ರಲ್ಲಿ ಅಮೆರಿಕದ ಸುಪ್ರಸಿದ್ಧ ವಿಶ್ವವಿದ್ಯಾಲಯವಾದ ಹಾರ್ವರ್ಡ್‌ನಲ್ಲಿ ಪ್ರಾಧ್ಯಾಪಕನಾಗಿ ಕೆಲಸ ನಿರ್ವಹಿಸುತ್ತಿದ್ದಾಗ ಸೇಂಟ್ ಲೂಯಿಸ್‌ನಲ್ಲಿ ನಡೆಯಲೇರ್ಪಾಡಾಗಿದ್ದ ಕಲೆ ಮತ್ತು ವಿಜ್ಞಾನಗಳ ಸಮ್ಮೇಳನದಲ್ಲಿ ಒಂದು ಲೇಖನವನ್ನು ಓದಬೇಕೆಂದು ವೆಬರನಿಗೆ ಒಂದು ಆಹ್ವಾನ ಬಂತು. ವೆಬರ್ ಈ ಆಹ್ವಾನವನ್ನು ಒಪ್ಪಿಕೊಂಡು ಜರ್ಮನಿ ದೇಶದ ಸಾಮಾಜಿಕ ವ್ಯವಸ್ಥೆಯ ಮೇಲೆ ಒಂದು ಉತ್ತಮ ಉಪನ್ಯಾಸ ನೀಡಿದ. ಆರೂವರೆ ವರ್ಷಗಳಲ್ಲಿ ಅದು ಅವನು ನೀಡಿದ ಪ್ರಥಮ ಭಾಷಣವಾಗಿತ್ತು. ಅನಂತರ ವೆಬರ್ ಸುಮಾರು ಮೂರು ತಿಂಗಳುಗಳ ಕಾಲ ಅಮೆರಿಕದ ಅನೇಕ ಕಡೆಗಳಲ್ಲಿ ಸುತ್ತಾಡಿದ. ಆಗ ಅವನು ಆ ದೇಶದ ನಾಗರಿಕತೆಯ ವಿಶಿಷ್ಟ ಲಕ್ಷಣಗಳಿಂದ ತುಂಬ ಆಕರ್ಷಿತನಾದ. ಅವನು ಮುಂದೆ ಬೆಳೆಸಿ ಪೋಷಿಸಿದ ಅನೇಕ ಬೌದ್ಧಿಕ, ದಾರ್ಶನಿಕ, ರಾಜಕೀಯ ಮತ್ತು ಸಾಮಾಜಿಕ ಸಿದ್ಧಾಂತಗಳು ಆ ದೇಶದಲ್ಲಿ ಅವನು ತಂಗಿದ್ದ ಕಾಲದಲ್ಲಿ ಪ್ರಚೋದನೆ, ಪ್ರೋತ್ಸಾಹಗಳೆರಡನ್ನೂ ಪಡೆದುಕೊಂಡುವು ಎಂದು ಹೇಳಬಹುದು. ಅವನು ಅಮೇರಿಕದಿಂದ ಹಿಂದಿರುಗಿದ ಅನಂತರ ಬಂಡವಾಳ ಪದ್ಧತಿಯ ಉಗಮದಲ್ಲಿ ಪ್ರಾಟೆಸ್ಟಂಟ್ ಪಂಥಗಳು ವಹಿಸಿದ್ದ ಗಮನಾರ್ಹವಾದ ಪಾತ್ರ, ರಾಜಕೀಯ ಯಂತ್ರಗಳ ವ್ಯವಸ್ಥೆ, ಆಡಳಿತಶಾಹಿಪದ್ಧತಿ ಅಮೆರಿಕದ ರಾಜಕೀಯ ವ್ಯವಸ್ಥೆಯಲ್ಲಿ ಅಧ್ಯಕ್ಷೀಯ ಪದ್ಧತಿಯ ಪಾತ್ರ ಮುಂತಾದ ವಿಷಯಗಳ ಬಗ್ಗೆ ತುಂಬ ಪಾಂಡಿತ್ಯಪೂರ್ಣವಾದ ಬರವಣಿಗೆಗಳನ್ನು ಬರೆದ.

ಹೈಡಲ್‌ಬರ್ಗ್‌ಗೆ ಹಿಂದಿರುಗಿದ ಅನಂತರ ವೆಬರ್ ಪೂರ್ಣ ವೇಳೆಯ ಬರವಣಿಗೆಗಾರ ನಾಗಿ ತನ್ನ ಕರ್ತವ್ಯ ನಿರ್ವಹಿಸತೊಡಗಿದ. ಉಪನ್ಯಾಸಕ ವೃತ್ತಿಗೆ ತನ್ನ ಜೀವನದ ಕೊನೆಯ ವರ್ಷಗಳಲ್ಲಿ ಮಾತ್ರ ಅವನು ಹಿಂದಿರುಗಿದ. ಆಗ ಅವನ ಬೌದ್ಧಿಕ ಸಾಮರ್ಥ್ಯ ಎಲ್ಲರನ್ನೂ ಬೆರಗುಗೊಳಿಸುವಂಥದಾಗಿತ್ತು. ಸಮಾಜ ವಿಜ್ಞಾನಗಳ ವಿಧಾನಗಳಿಗೆ ಸಂಬಂಧಿಸಿದ ಬರಹಗಳು ಅಲ್ಲಿಂದೀಚೆಗೆ ಅವನ ಲೇಖನಿಯಿಂದ ಹೊರಬರತೊಡಗಿದವು. ಸಮಾಜ ವಿಜ್ಞಾನದ ವಿದ್ಯಾರ್ಥಿಗಳೆಲ್ಲರಿಗೂ ಚಿರಪರಿಚಿತವಾಗಿರುವ "ಸಮಾಜ ವಿಜ್ಞಾನಗಳ ವಿಧಾನಗಳನ್ನು ಕುರಿತು ಮಾಕ್ಸ್ ವೆಬರ್" ಎಂಬ ಗ್ರಂಥ ಬರೆದಿದ್ದ ವೆಬರ್ ಹೈಡಲ್‌ಬರ್ಗ್ ಪ್ರವೇಶಿಸಿದ ಅನಂತರ ಇನ್ನೊಂದು ಸುಪ್ರಸಿದ್ಧ ಗ್ರಂಥವಾದ "ಪ್ರಾಟೆಸ್ಟೆಂಟ್ ಎಥಿಕ್" ಎಂಬ ಗ್ರಂಥವನ್ನು 1905ರಲ್ಲಿ ಪ್ರಕಟಿಸಿದ. ಈ ಗ್ರಂಥ ಮತಧರ್ಮ ಸಮಾಜಶಾಸ್ತ್ರಕ್ಕೆ ವೆಬರ್ ನೀಡಿರುವ ಅತ್ಯಂತ ಮಹತ್ವದ ಕಾಣಿಕೆಯಾಗಿದೆ. ಈ ಗ್ರಂಥದಲ್ಲಿ ಅವನು ಬಂಡವಾಳ ಪದ್ಧತಿಯ ಆರ್ಥಿಕ ವ್ಯವಸ್ಥೆಯ ಉಗಮಕ್ಕೆ ಪ್ರಾಟೆಸ್ಟೆಂಟ್ ಮತದ ವಿವಿಧ ಪಂಥಗಳು ಯಾವ ರೀತಿಯಲ್ಲಿ ಸಹಕಾರಿಯಾಗಿದ್ದುವು ಎಂಬುದನ್ನು ತುಂಬ ಎಚ್ಚರಿಕೆಯಿಂದ ಪರಿಶೀಲಿಸಿದ್ದಾನೆ. ಅವನು ರಷ್ಯದಲ್ಲಿ 1905ರಲ್ಲಿ ನಡೆದ ಕ್ರಾಂತಿಯ ಅನಂತರ ಉಂಟಾದ ರಾಜಕೀಯ ಬೆಳವಣಿಗೆಗಳಿಗೆ ಸಂಬಂಧಿಸಿದ ಹಾಗೆ ಅನೇಕ ಪ್ರಮುಖ ಅಧ್ಯಯನಗಳನ್ನು 1909ರಲ್ಲಿ ನಡೆಸಿದ. 1908 ಮತ್ತು 1909ರಲ್ಲಿ ಕಾರ್ಖಾನೆ ಕೆಲಸಗಾರರ ಮತ್ತು ಕೈಗಾರಿಕಾ ಕೆಲಸಗಾರರ ಸಾಮಾಜಿಕ ಮನೋವಿಜ್ಞಾನದ ಅಧ್ಯಯನವನ್ನು ವಸ್ತುನಿಷ್ಠ ದೃಷ್ಟಿಯಿಂದ ಮಾಡಿದ. ಈ ಮಾರ್ಗಗಳಲ್ಲಿ ಅವನು ವಿದ್ವತ್ ಸಮ್ಮೇಳನಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ ಮತ್ತು ಅನೇಕ ರಾಜಕೀಯ ಸಭೆಗಳಲ್ಲಿ ಭಾಷಣ ಮಾಡಿದ. 1910ರಲ್ಲಿ ಅವನು ಜರ್ಮನಿಯ ಸುಪ್ರಸಿದ್ಧ ಸಮಾಜವಿಜ್ಞಾನಿಗಳಾದ ಟೋನಿಸ್ ಮತ್ತು ಸಿಮ್ಮೆಲರುಗಳ ಸಹಾಯ ಮತ್ತು ಸಹಕಾರಗಳಿಂದ ಜರ್ಮನಿಯ ಸಮಾಜಶಾಸ್ತ್ರೀಯ ಸಂಘ ಸ್ಥಾಪಿಸಿದ. ಅವನು ಅದಕ್ಕೆ ಕಾರ್ಯದರ್ಶಿಯಾಗಿ ಅನೇಕ ವರ್ಷಗಳ ಕಾಲ ಸಂಘದ ಅಧ್ಯಯನದ ಯೋಜನೆಗಳನ್ನು ತುಂಬ ನಿರ್ಣಾಯಕ ರೀತಿಯಲ್ಲಿ ಸಿದ್ಧಪಡಿಸಿದ.

ಪ್ರಥಮ ಮಹಾಯುದ್ಧಕ್ಕೆ ಮುಂಚೆ ಹೈಡಲ್‌ಬರ್ಗ್‌ನಲ್ಲಿದ್ದ ವೆಬರನ ಗೃಹ ತುಂಬಾ ಪ್ರಮುಖವಾದ ಬೌದ್ಧಿಕ ಚರ್ಚೆಗಳ ಕೇಂದ್ರವಾಗಿತ್ತು. ವೆಬರ್ ದಂಪತಿಗಳು ಸ್ವಲ್ಪ ಕಾಲ ತಮ್ಮ ಮನೆಯಲ್ಲಿ ಸುಪ್ರಸಿದ್ಧ ವಿದ್ವಾಂಸನಾದ ಅರ್ನೆಸ್ಟ್ ಟ್ರಾಯಲ್ಟ್‌ನೊಡನೆ ಕಳೆಯುತ್ತಿದ್ದರು. ಸಮಾಜ ವಿಜ್ಞಾನಿಗಳಾದ ಸಿಮ್ಮೆಲ್, ಮೈಕೇಲ್ಸ್ ಮತ್ತು ಸೋಂಬಾರ್ಟರುಗಳೂ ಯುವ ಪೀಳಿಗೆಗೆ ಸೇರಿದ ಪ್ರಸಿದ್ಧ ವಿದ್ವಾಂಸರಾದ ಪಾಲ್ ಹಾಲಿಂಗ್ ಷೀಮ್ ಮತ್ತು ಲೊವಿನ್ ಸ್ಟೈನ್ನರೂ ವೆಬರನ ಮನೆಗೆ ಆಗಾಗ್ಗೆ ಭೇಟಿ ನೀಡುತ್ತಿದ್ದರು. ಯುವಕ ಉಗ್ರವಾದಿ ದಾರ್ಶನಿಕರುಗಳಾದ ಅರ್ನೆಸ್ಟ್ ಬ್ಲಾಚ್ ಮತ್ತು ಜಾರ್ಜ್ ಲೂಕಾಸರೂ ಕೆಲವು ವೇಳೆ ಅವನ ಮನೆಯಲ್ಲಿ ಸತತವಾಗಿ ನಡೆಯುತ್ತಿದ್ದ ವಿಚಾರಪೂರಿತ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು.

ಪ್ರಥಮ ಮಹಾಯುದ್ಧ ಪ್ರಾರಂಭವಾದಾಗ ರಾಷ್ಟ್ರೀಯ ಮನೋಭಾವದಿಂದ ಸೈನ್ಯದಲ್ಲಿ ಸೇವೆ ಸಲ್ಲಿಸಲು ವೆಬರ್ ಮುಂದೆ ಬಂದ. ಅವನು ಮೀಸಲು ಅಧಿಕಾರಿಯಾಗಿ ಹೈಡಲ್‌ಬರ್ಗ್ ಪ್ರದೇಶದಲ್ಲಿ ಸುಮಾರು ಒಂಬತ್ತು ಸೈನಿಕ ಆಸ್ಪತ್ರೆಗಳನ್ನು ನಡೆಸುವ ಜವಾಬ್ದಾರಿ ವಹಿಸಬೇಕಾಯಿತು. 1915ರ ಚಳಿಗಾಲದಲ್ಲಿ ಅವನು ಈ ಕೆಲಸದಿಂದ ನಿವೃತ್ತನಾದ.

ಮೊದಲಿಗೆ, "ಎಲ್ಲಕ್ಕಿಂತಲೂ ಇದು ಒಂದು ಮಹತ್ತಾದ ಮತ್ತು ಆಶ್ಚರ್ಯಕರವಾದ ಯುದ್ಧ" ಎಂದು ಘೋಷಿಸಿದ ವೆಬರ್ ಕೊನೆಕೊನೆಗೆ ಭ್ರಮನಿರಸನಗೊಳ್ಳಬೇಕಾಯಿತು. ಆಗ ಅವನು ಸ್ವಯಂ ನೇಮಿಸಲ್ಪಟ್ಟ ವಿನಾಶದ ಪ್ರವಾದಿಯ ಹಾಗೆ ತನ್ನ ಹೆಚ್ಚಿನ ಕಾಲವನ್ನೆಲ್ಲ ಸರ್ಕಾರಕ್ಕೆ ಮನವಿ ಸಲ್ಲಿಸುವುದಕ್ಕೂ ಸರ್ಕಾರದ ಅಧಿಕಾರಗಳ ಮನವೊಲಿಸುವುದಕ್ಕೂ ವಿನಿಯೋಗಿಸಿದ. ಅವನು ತನ್ನ ದೇಶದ ಸರ್ಕಾರ ಯುದ್ಧ ನಡೆಸುತ್ತಿದ್ದ ರೀತಿಯನ್ನೂ ಜರ್ಮನಿಯ ನಾಯಕತ್ವದ ಅಸಮಂಜಸ ನಡವಳಿಕೆಯನ್ನೂ ತೀವ್ರವಾಗಿ ಟೀಕಿಸತೊಡಗಿದ. ಜರ್ಮನರು ಯುದ್ಧದಲ್ಲಿ ಸಬ್‌ಮೇರೀನ್ ಮೇಲೆ ಹೆಚ್ಚು ಅವಲಂಬಿತವಾದ್ದನ್ನು ನೋಡಿ ಅವನು ರೊಚ್ಚಿಗೆದ್ದ. ಈ ರೀತಿಯ ಯುದ್ಧ ಅಮೆರಿಕ ದೇಶವನ್ನು ಯುದ್ಧದಲ್ಲಿ ಭಾಗಿಯಾಗುವಂತೆ ಪ್ರಚೋದಿಸಿ ಜರ್ಮನಿಯ ಸೋಲಿಗೆ ಕಾರಣವಾಗುವುದೆಂದು ಭವಿಷ್ಯ ನುಡಿದ. ಅವನು ತಾತ್ವಿಕವಾಗಿ ಯುದ್ಧದ ವಿರೋಧಿಯಾಗಿರಲಿಲ್ಲ. ಅವನ ಒಲವು ಮಿತ ಯುದ್ಧದ ಗುರಿಗಳ ಕಡೆಗೆ ಇದ್ದಿತು. ಅವನು ಕೈಗಾರಿಕೋದ್ಯಮಿಗಳ ಮೇಲೆ ಕಡಿವಾಣ ಹಾಕಬೇಕೆಂದೂ ಆಕ್ರಮಣಕಾರಿ ಮನೋಭಾವವನ್ನು ರೂಢಿಸಿಕೊಂಡಿದ್ದ ಬಲಪಂಥೀಯ ಶಕ್ತಿಗಳ ಮೇಲೆ ಸಮರ್ಪಕ ನಿಯಂತ್ರಣ ವಿಧಿಸಬೇಕೆಂದೂ ಬಲವಾಗಿ ವಾದಿಸಿದ. ಇಂಗ್ಲೆಂಡಿನೊಡನೆ ಜರ್ಮನಿ ಶಾಂತಿ ಒಪ್ಪಂದಕ್ಕೆ ಬರಬೇಕೆಂದು ಆತ ಬಹುವಾಗಿ ಆಶಿಸಿದ.

ಆದರೆ ಜರ್ಮನಿಯಲ್ಲಿ ಅಂದು ಅಸ್ತಿತ್ವದಲ್ಲಿದ್ದ ರಾಜಕೀಯ ಆಡಳಿತಗಾರರು ವೆಬರನ ಸಲಹೆಗಳನ್ನು ಪುರಸ್ಕರಿಸಲು ಅಸಮರ್ಥರಾದರು. ಇದರಿಂದಾಗಿ ಅವನು ಜರ್ಮನಿಯ ಅಂದಿನ ನಾಯಕತ್ವದ ಬಗ್ಗೆ ಹತಾಶ ಮನೋಭಾವ ಬೆಳಸಿಕೊಂಡ. ಜರ್ಮನಿಯ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕೆಂದೂ ಜವಾಬ್ದಾರಿಯುತ ಸಂಸದೀಯ ಸರ್ಕಾರದ ಬೆಳವಣಿಗೆಯಾಗಬೇಕೆಂದೂ ಜರ್ಮನಿಯನ್ನು ಆಳುತ್ತಿದ್ದ ಕೈಸರನ ಆಡಳಿತದ ಮೇಲೆ ನಿಯಂತ್ರಣ ವಿಧಿಸಬೇಕೆಂದೂ ಪ್ರತಿಪಾದಿಸಿ ವಿಚಾರಪೂರಿತ ಲೇಖನಗಳನ್ನು ಬರೆದು ಸರಕಾರದ ಉಗ್ರ ಕೋಪ ಮತ್ತು ಟೀಕೆಗಳಿಗೆ ಒಳಗಾಗಬೇಕಾಯಿತು. ಜರ್ಮನಿಯ ಸರ್ಕಾರ ಅವನ ಮೇಲೆ ರಾಜದ್ರೋಹದ ಆಪಾದನೆ ಹೊರಿಸಿತು. ನಿನ್ನೆಯವರೆಗೂ ವಿಶ್ವಾಸಾರ್ಹನಾದ ರಾಷ್ಟ್ರೀಯವಾದಿ ಇಂದು ದೇಶದ್ರೋಹದ ಆಪಾದನೆಯನ್ನು ಎದುರಿಸಬೇಕಾಗಿ ಬಂದುದು ಒಂದು ವಿಪರ್ಯಾಸವೇ ಸರಿ.

1918ರ ನವೆಂಬರ್ 3ನೆಯ ತಾರೀಕು ನಾವಿಕರು ಕೀಲ್ ಎಂಬ ಸ್ಥಳದಲ್ಲಿ ದಂಗೆ ಎದ್ದು ಜರ್ಮನಿಯ ಕ್ರಾಂತಿಗೆ ಕರೆ ಕೊಟ್ಟಾಗ, ವೆಬರನ ಪ್ರಥಮ ಪ್ರತಿಕ್ರಿಯೆ ನಕಾರಾತ್ಮಕವಾಗಿತ್ತು. ಅವನು ಕ್ರಾಂತಿಯನ್ನು ರಕ್ತಪಾತದಿಂದ ಕೂಡಿದ ಒಂದು ಸ್ವೇಚ್ಛಾವಿಹಾರೋತ್ಸವ ಎಂದು ಕರೆದ. ಆದರೆ ಅವನು ಬಹು ಬೇಗ ತನ್ನ ಮನೋಭಾವವನ್ನು ಬದಲಾಯಿಸಿ, ಅದರ ಬೆಂಬಲಿಗನಾಗಿ ಉದಾರವಾದಿ ಜರ್ಮನ್ ರಾಜಕೀಯದ ಅಡಿಪಾಯವನ್ನು ಹಾಕಲು ಪ್ರಮಾಣಿಕವಾಗಿ ಪ್ರಯತ್ನಿಸಿದ.

1918ರ ಪ್ರಾರಂಭದಲ್ಲಿ ವೆಬರ್ ಅನೇಕ ವರ್ಷಗಳಲ್ಲಿ ಅದೇ ಪ್ರಥಮವಾಗಿ ವಿಯೆನ್ನಾ ವಿಶ್ವವಿದ್ಯಾಲಯದಲ್ಲಿ ಸುಮಾರು ಒಂದು ಪೂರ್ಣಾವಧಿಯ ಕಾಲ ಉಪನ್ಯಾಸಗಳನ್ನು ನೀಡಿದ. ಒಂದು ವರ್ಷದ ಅನಂತರ ಅವನು ಮ್ಯೂನಿಚ್ ವಿಶ್ವವಿದ್ಯಾಲಯದ ಆಹ್ವಾನದ ಮೇಲೆ ಅನೇಕ ಪ್ರಮುಖ ಉಪನ್ಯಾಸಗಳನ್ನು ನೀಡಿದ. 'ವಿಜ್ಞಾನ ಒಂದು ಕಸಬು' ಮತ್ತು 'ರಾಜ

ಕೀಯ ಒಂದು ಕಸಬು' ಎಂಬ ಅವನ ಸುಪ್ರಸಿದ್ಧ ಉಪನ್ಯಾಸಗಳನ್ನು ಅವನು ಮೊದಲ ಬಾರಿಗೆ ನೀಡಿದ್ದು 1919ರಲ್ಲಿ ಮ್ಯೂನಿಚ್‌ನಲ್ಲಿ ವಿದ್ಯಾರ್ಥಿಗಳಿಗಾಗಿ. ಕ್ರಾಂತಿಯ ವಾತಾವರಣ ದೇಶವನ್ನೆಲ್ಲಾ ಪ್ರಸರಿಸಿದ್ದಾಗ, ವೆಬರ್ ತನ್ನ ಪ್ರಮುಖ ರಾಜಕೀಯ ಮತ್ತು ಬೌದ್ಧಿಕ ವಿಚಾರಧಾರೆಗಳನ್ನು ರೂಪಿಸಲು ಮಾಡಿದ ಪ್ರಯತ್ನಗಳ ಗುರುತುಗಳು ಈ ಉಪನ್ಯಾಸಗಳಲ್ಲಿವೆ.

ತನ್ನ ಜೀವನದ ಕೊನೆಯ ಮೂರು ವರ್ಷಗಳಲ್ಲಿ, ಅಂದರೆ 1918-20ರ ನಡುವೆ, ವೆಬರ್ ರಾಜಕೀಯ ಚಟುವಟಿಕೆಗಳಲ್ಲಿ ತೀವ್ರವಾಗಿ ಭಾಗವಹಿಸತೊಡಗಿದ. ಆಗಿನ ಕಾಲದ ರಾಜಕೀಯ ಪರಿಸ್ಥಿತಿಯ ಮೇಲೆ ಅವನು ಅನೇಕ ಪ್ರಮುಖ ವೃತ್ತ ಪತ್ರಿಕಾ ಲೇಖನಗಳನ್ನೂ ಮನವಿ ಪತ್ರಗಳನ್ನೂ ಲೇಖನಗಳನ್ನೂ ನಿರಂತರವಾಗಿ ಬರೆದ. ಹೊಸದಾಗಿ ವ್ಯವಸ್ಥಿ ಸಲ್ಪಟ್ಟ ಡೀಯುಟ್ಸೇಡೆಮಾಕ್ರಟೀಕ್ ಪಕ್ಷದ ಸಂಸ್ಥಾಪಕ ಸದಸ್ಯನಾಗಿ ಅದರ ಜನಪ್ರಿಯತೆಗಾಗಿ ತುಂಬ ಪ್ರಚಾರ ಮಾಡಿದ : ವರ್ಸೇಲ್ಸ್‌ನಲ್ಲಿ ನಡೆದ ಶಾಂತಿಸಮ್ಮೇಳನದಲ್ಲಿ ಜರ್ಮನಿ ದೇಶದ ನಿಯೋಗದ ಸಲಹೆಗಾರನಾಗಿ ತುಂಬ ಯಶಸ್ವಿಯಾಗಿ ಅವನು ಕಾರ್ಯ ನಿರ್ವಹಿಸಿದ. ಜರ್ಮನಿಯ ಸಂವಿಧಾನ ರಚನೆಗೆ ಸಂಬಂಧಿಸಿದ ಪೂರ್ವಭಾವಿ ಕೆಲಸವನ್ನು ತುಂಬ ಚೆನ್ನಾಗಿ ಅವನು ನೆರವೇರಿಸಿದ. ಅವನು ವಿದ್ಯಾರ್ಥಿ ಸಭೆಗಳನ್ನು ಮತ್ತು ಬುದ್ಧಿಜೀವಿಗಳ ಗುಂಪುಗಳನ್ನು ಕುರಿತು ವಿಚಾರ ಪ್ರಚೋದಕ ಭಾಷಣಗಳನ್ನು ನೀಡಿದ ; ಕ್ರಾಂತಿಯ ಕ್ಷೋಭೆಗೆ ಒಳಗಾಗಿದ್ದ ದಿವಸಗಳಲ್ಲಿ ಅವನು ಒಂದು ವಿಚಾರಪೂರಿತ ಪ್ರಜಾಪ್ರಭುತ್ವಾಡಳಿತದ ರೂಪರೇಖೆಗಳನ್ನು ಗುರುತಿಸಿ ಅದಕ್ಕೆ ಒಂದು ಸಮಗ್ರ ರೂಪವನ್ನು ಕೊಡಲು ತುಂಬ ಪ್ರಾಮಾಣಿಕವಾಗಿ ಪ್ರಯತ್ನಿಸಿದ. ಅವನು ಬಲಪಂಥೀಯರ ಹುಚ್ಚು ಮಾರ್ಗಗಳನ್ನು ಮತ್ತು ಎಡಪಂಥೀಯರ ವಿನಾಶಕಾರಿ ಮಾರ್ಗಗಳನ್ನು ಒಟ್ಟಾರೆ ತಿರಸ್ಕರಿಸಿ ತನಗೆ ಸರಿ ಕಂಡ ಪ್ರಜಾಪ್ರಭುತ್ವವಾದಿ ಮಧ್ಯಮಾರ್ಗವನ್ನು ಪ್ರತಿಪಾದಿಸಿದ. ಅವನು ಸಾಮಾಜಿಕ ಪ್ರಜಾಪ್ರಭುತ್ವವಾದಿ ಚಳವಳಿಯೊಂದಿಗೆ ನಿಕಟ ಸಂಬಂಧ ಬೆಳಸಿಕೊಳ್ಳಲು ಪ್ರಯತ್ನಿಸಿದ. ಆದರೆ ಕ್ರಾಂತಿಯನ್ನು ಒಂದು ರಕ್ತಪಾತದಿಂದ ಕೂಡಿದ ಸ್ವೇಚ್ಛಾವಿಹಾರೋತ್ಸವ, ಎಂದು ಕರೆದಿದ್ದ ವ್ಯಕ್ತಿ ಅನೇಕ ವಾಮಪಂಥೀಯರ ರಾಜಕಾರಣಿಗಳ ವಿರೋಧವನ್ನು ಮೆಟ್ಟಿ ನಿಲ್ಲಲು ಕೊನೆಗೂ ಯಶಸ್ವಿಯಾಗಲಿಲ್ಲ. ಇವುಗಳೆಲ್ಲದರ ಪರಿಣಾಮವಾಗಿ ಸರ್ಕಾರದಲ್ಲಿ ಅವನಿಗೆ ಒಂದು ಉನ್ನತಸ್ಥಾನ ಗಳಿಸಿಕೊಡಲು ಮಾಡಿದ ಪ್ರಯತ್ನಗಳಾಗಲಿ ಅವನನ್ನು ಜರ್ಮನಿಯ ಅಧ್ಯಕ್ಷ ಸ್ಥಾನಕ್ಕೆ ಉಮೇದುವಾರನಾಗಿ ನಾಮಕರಣ ಮಾಡುವ ಪ್ರಯತ್ನಗಳಾಗಲಿ ಫಲಿಸಲಿಲ್ಲ. ಪಕ್ಷದ ಯಜಮಾನರು ವೆಬರನ ಬಗ್ಗೆ ಅನೇಕ ಸಂಶಯಗಳನ್ನು ಬೆಳೆಸಿಕೊಂಡಿದ್ದರು. ಮೊದಲಿಗೆ ರಾಜಭಕ್ತಿಯ ಮಾರ್ಗವನ್ನನುಸರಿಸುತ್ತಿದ್ದು ಅನಂತರ ಪ್ರಜಾಪ್ರಭುತ್ವವಾದಿ ತತ್ತ್ವಗಳಲ್ಲಿ ನಿಷ್ಠೆ ಬೆಳೆಸಿಕೊಂಡ ರಾಜಕೀಯ ಪಕ್ಷಗಳು ಕಾರ್ಯ ನಿರ್ವಹಿಸುತ್ತಿದ್ದ ರೀತಿಯ ಬಗ್ಗೆ ಅವನು ತುಂಬ ಉಗ್ರವಾಗಿ ಟೀಕಿಸತೊಡಗಿದ. ಒಟ್ಟಿನಲ್ಲಿ ಅವನು ಅಸಮರ್ಥ ಆಡಳಿತಗಾರರ ಆಡಳಿತವನ್ನು ಕೊನೆಗೊಳಿಸಿ ಸಮರ್ಥ ಆಡಳಿತಗಾರರ ಹಿಡಿತಕ್ಕೆ ದೇಶದ ಆಡಳಿತವನ್ನು ವಹಿಸಿಕೊಡಬೇಕೆಂದು ವಾದಿಸುತ್ತಿದ್ದ.

ಯುದ್ಧ ನಡೆಯುತ್ತಿದ್ದ ವರ್ಷಗಳಲ್ಲಿ ವೆಬರ್ ಮತಧರ್ಮ ಸಮಾಜವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕವನ್ನು ಬರೆದು ಮುಗಿಸುವುದರಲ್ಲಿ ನಿರತನಾಗಿದ್ದ. 'ಚೀನಾ ದೇಶದ ಮತಧರ್ಮ' ಮತ್ತು 'ಭಾರತದ ಮತಧರ್ಮ' ಎಂಬ ಬರವಣಿಗೆಗಳು 1916ರಲ್ಲಿ ಪ್ರಕಟ

ವಾದುವು. 'ಪುರಾತನ ಜುಡಾಯಿಸಮ್' ಎಂಬ ಬರವಣಿಗೆ ಒಂದು ವರ್ಷದ ಅನಂತರ ಪ್ರಕಟವಾಯಿತು. ಈ ಅವಧಿ ಮತ್ತು ಯುದ್ಧಮುಗಿದ ಅನಂತರದ ವರ್ಷಗಳಲ್ಲಿ ತನ್ನ ಜೀವನದ ಅತ್ಯಂತ ಮುಖ್ಯ ಬರವಣಿಗೆಯಾದ 'ಅರ್ಥವ್ಯವಸ್ಥೆ ಮತ್ತು ಸಮಾಜ' ಎಂಬ ಬೃಹತ್ ಗ್ರಂಥ ಬರೆದು ಮುಗಿಸುವುದರಲ್ಲಿದ್ದ. ಈ ಬರವಣಿಗೆ ಅವನ ಮರಣಾನಂತರ ಬೆಳಕಿಗೆ ಬಂದಿತು. 1920ರ ಜೂನ್ ತಿಂಗಳ ಆದಿಭಾಗದಲ್ಲಿ ವೆಬರ್ ತೀವ್ರ ಜ್ವರಪೀಡಿತನಾಗಿ ಹಾಸಿಗೆ ಹಿಡಿದ. ಮೊದಲಿಗೆ ಅವನು ಫ್ಲೂ ವ್ಯಾಧಿಯಿಂದ ನರಳುತ್ತಿದ್ದಾನೆಂದು ಜನರು ಭಾವಿಸಿದರು. ಆದರೆ ರೋಗಿಯನ್ನು ಪರೀಕ್ಷಿಸಿದ ವೈದ್ಯರು ಅವನು ನ್ಯುಮೋನಿಯಾ ಜ್ವರದಿಂದ ನರಳುತ್ತಿದ್ದಾನೆ ಎಂದು ಹೇಳಿದರು. ಅಷ್ಟು ಹೊತ್ತಿಗೆ ಆಗಲೇ ಕಾಲ ಮೀರಿಹೋಗಿತ್ತು. ಅವನು ಜೂನ್ ತಿಂಗಳ 14ರಂದು ಮರಣ ಹೊಂದಿದ. ವೆಬರ್ ಸಾವಿನ ದವಡೆಯಲ್ಲಿ ಸಿಕ್ಕಿಕೊಂಡಿದ್ದಾಗ ಆಡಿದ ಅರ್ಥಗರ್ಭಿತ ಮಾತುಗಳು ಇವು : "ಸತ್ಯ ಯಾವಾಗಲೂ ಸತ್ಯವೇ ಆಗಿರುತ್ತದೆ." ನ್ಯಾಯ ಮತ್ತು ಸತ್ಯಗಳನ್ನು ಎತ್ತಿ ಹಿಡಿಯಲು ಸತತವಾಗಿ ಹೋರಾಡಿದ ಜರ್ಮನಿಯ ಸಾಂಸ್ಕೃತಿಕ ನಾಯಕರಂತೆ ವೆಬರನೂ ನ್ಯಾಯ ಮತ್ತು ಸತ್ಯಗಳನ್ನು ಎತ್ತಿ ಹಿಡಿಯಲು ಸತತವಾಗಿ ಹೋರಾಡಿದ. ಮಾರ್ಟಿನ್ ಲೂಥರ್ ನುಡಿದ, "ಇಲ್ಲಿ ನಾನು ನಿಂತಿದ್ದೇನೆ ; ನಾನು ಇದನ್ನು ಬಿಟ್ಟು ಇನ್ನೇನನ್ನೂ ಮಾಡಲಾರೆ," ಎಂಬ ಹೇಳಿಕೆಯನ್ನು ವೆಬರ್ ತನ್ನ ಜೀವನದಲ್ಲಿ ಅನುಷ್ಠಾನಕ್ಕೆ ತಂದ.

ಎಲ್ಲ ಸಂದರ್ಭಗಳಲ್ಲೂ ವೆಬರ್ ಯಾವುದೇ ರೀತಿಯ ಸೈದ್ಧಾಂತಿಕ ನಿಲುವಿಗೆ ಬಲಿಬೀಳಲು ಒಪ್ಪದೆ ತನ್ನ ರಾಜಕೀಯ ನಡವಳಿಕೆಯಲ್ಲಿ ತನ್ನದೇ ಆದ ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದ.

ಅನ್ಯಾಯವಾಗಿದೆ ಎಂದು ಕಂಡುಬಂದ ಸಂದರ್ಭಗಳಲ್ಲಿ ವೆಬರ್ ರೊಚ್ಚಿದ್ದ ಪ್ರವಾದಿಯ ಹಾಗೆ ತನ್ನ ಸಹಪಾಟಿಗಳನ್ನೆಲ್ಲ ಅವರ ನೈತಿಕ ಆಲಸ್ಯಕ್ಕಾಗಿ ಅವರ ದೃಢ ನಿಶ್ಚಯದ ಅಭಾವಕ್ಕಾಗಿ ಮತ್ತು ಅವರ ನಿಧಾನ ಪ್ರವೃತ್ತಿಯ ನ್ಯಾಯಬೇಡಿಕೆಗಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದ. ವಿಶ್ವವಿದ್ಯಾಲಯದ ಅಧಿಕಾರಿಗಳು ಒಬ್ಬ ಸೋಂಬರ್ಟ್‌ನ ಅಥವಾ ಒಬ್ಬ ನಿಮ್ಮೆಲ್ಲನ ಅಥವಾ ಒಬ್ಬ ಮೈಕೇಲ್ಸ್‌ನ ಯೋಗ್ಯತೆಯನ್ನು ಗುರುತು ಹಚ್ಚುವುದರಲ್ಲಿ ವಿಫಲರಾದಾಗ ವೆಬರ್ ಹಳೆಯ ಮಿತ್ರತ್ವವನ್ನು ಕಳೆದುಕೊಳ್ಳುವ ಸಂದರ್ಭ ಬಂದರೂ ಲೆಕ್ಕಿಸದೆ ತುಂಬ ದೃಢವಾಗಿ ಅವರುಗಳ ಪರವಾಗಿ ಹೊಡೆದಾಡುತ್ತಿದ್ದ. ರಷ್ಯ ದೇಶಕ್ಕೆ, ಪೋಲೆಂಡಿಗೆ ಅಥವಾ ಪೂರ್ವಜರ್ಮನಿಯ ಯೆಹೂದ್ಯ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಗೌರವಾನ್ವಿತ ಜರ್ಮನ್ ಪ್ರಾಧ್ಯಾಪಕರುಗಳು ಭೇಟಿಯಾಗಲು ಹಿಂದೆಮುಂದೆ ನೋಡುತಿದ್ದಾಗ, ವೆಬರ್ ಅವರೆಲ್ಲರನ್ನು ತನ್ನ ಸುತ್ತ ಸೇರಿಸಿಕೊಂಡು ಅವರುಗಳೊಡನೆ ಬಿಚ್ಚುಮನಸ್ಸಿನ ಚರ್ಚೆ ನಡೆಸುತ್ತಿದ್ದ. ಕೆಲವು ವೇಳೆ ಅವರುಗಳನ್ನು ತನ್ನ ಮನೆಗೆ ಆಹ್ವಾನಿಸಿ ಸತ್ಕರಿಸಲೂ ಅವನು ಹಿಂಜರಿಯುತ್ತಿರಲಿಲ್ಲ. ಯುದ್ಧ ನಡೆಯುತ್ತಿದ್ದಾಗ ಶಾಂತಿವಾದಿಗಳು ಮತ್ತು ರಾಜಕೀಯ ಉಗ್ರವಾದಿಗಳು ಸರ್ಕಾರದಿಂದ ದೇಶದ್ರೋಹದ ಆಪಾದನೆಯ ಮೇಲೆ ವಿಚಾರಣೆ ಎದುರಿಸಬೇಕಾಯಿತು. ಅಂಥ ಸಂದರ್ಭಗಳಲ್ಲಿ ವೆಬರ್ ಅವರ ಪರವಾಗಿ ವಾದಿಸಿ, ನ್ಯಾಯಾಲಯವು ವಿಧಿಸಬಹುದಾಗಿದ್ದ ಶಿಕ್ಷೆಯನ್ನು ತಪ್ಪಿಸಿದ. ಸೆಮಿಟಿಕ್ ವಿರೋಧಿ ಬಲಪಂಥೀಯ ವಿದ್ಯಾರ್ಥಿಗಳು

ಮ್ಯೂನಿಚ್ ನಗರದಲ್ಲಿ ಒಬ್ಬ ಯೆಹೂದಿ ವಿದ್ಯಾರ್ಥಿಯನ್ನು ಅವಹೇಳನಕ್ಕೆ ಗುರಿಪಡಿಸಿದಾಗ, ವೆಬರ್ ಆ ವಿದ್ಯಾರ್ಥಿಗಳ ನಾಯಕನನ್ನು ಹಿಡಿದು ಅವನು ತನ್ನ ವಿದ್ಯಾರ್ಥಿ ಸಹಪಾಠಿಗಳ ದುರ್ನಡತೆಗಾಗಿ ತತ್‌ಕ್ಷಣ ಕ್ಷಮಾಪಣೆ ಕೇಳಿಕೊಳ್ಳಬೇಕೆಂದು ಧೈರ್ಯವಾಗಿ ಹೇಳಿದ. ತನ್ನ ಒಬ್ಬ ಸ್ನೇಹಿತೆ ಒಬ್ಬ ಸ್ವಿಸ್ ಕ್ರಾಂತಿಕಾರಿಯ ಜೊತೆಯ ಪ್ರಣಯ ಸಂಬಂಧದಿಂದಾಗಿ ತನ್ನ ಮಕ್ಕಳ ಮೇಲಿನ ಒಡೆತನವನ್ನು ಕಳೆದುಕೊಳ್ಳುವ ಸಂದರ್ಭ ಒದಗಿದಾಗ ವೆಬರ್ ನ್ಯಾಯಾಲಯದಲ್ಲಿ ಅವಳ ತಾಯ್ತನದ ಹಕ್ಕುಗಳ ಪರವಾಗಿ ಸುಮಾರು ಒಂದು ವರ್ಷಕಾಲ ನಿರಂತರವಾಗಿ ಹೋರಾಟ ನಡೆಸಿದ. ತನ್ನ ಅಚ್ಚುಮೆಚ್ಚಿನ ಸ್ನೇಹಿತನೊಬ್ಬ ಯುದ್ಧಕಾಲದಲ್ಲಿ ಒಂದು ಸೈನಿಕ ಆಸ್ಪತ್ರೆಯ ಆಡಳಿತಾಧಿಕಾರಿಯ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾಗ ಯುದ್ಧ ಖೈದಿಗಳನ್ನು ಭೇಟಿಮಾಡಲು ಅಪ್ಪಣೆ ನಿರಾಕರಿಸಿದಾಗ ವೆಬರ್ ತನ್ನ ಸ್ನೇಹಿತನ ನಡತೆಯನ್ನು ಕಟುವಾಗಿ ಟೀಕಿಸಿ, ಅವನೊಡನೆ ತನ್ನ ಸಂಬಂಧಗಳನ್ನು ಕಡಿದುಹಾಕಿಕೊಂಡ.

ಯಾವಾಗಲೂ ಮತ್ತು ಎಲ್ಲೆಲ್ಲೂ ವೆಬರ್ ರಾಜಕೀಯ ಸಮಯ ಸಾಧಕತೆಯ ಪ್ರಲೋಭನೆಗೆ ಒಳಗಾಗದೆ, ತನ್ನ ಅಂತರಾತ್ಮದ ಕರೆಯನ್ನನುಸರಿಸಿ ಕಾರ್ಯತತ್ಪರನಾಗುತ್ತಿದ್ದ. ವೆಬರ್ ಎಂಥ ಸಂದರ್ಭದಲ್ಲೂ ತನ್ನ ವ್ಯಕ್ತಿತ್ವವನ್ನು ಬಿಟ್ಟುಕೊಡುತ್ತಿರಲಿಲ್ಲ. ತನಗೆ ಸರಿಯೆಂದು ತೋರಿದುದನ್ನು ಯಾರ ಹೆದರಿಕೆಗೂ ಜಗ್ಗದೆ, ಅನುಸರಿಸಿಯೇ ತೀರುತ್ತಿದ್ದ. ಅವನು ಪದೇ ಪದೇ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುತ್ತಿದ್ದರೂ ತನ್ನ ಉದ್ದೇಶಗಳನ್ನು ಸಾಧಿಸಲು ತನ್ನ ತತ್ತ್ವಗಳಿಗೆ ವಿರುದ್ಧವಾಗಿ ಎಂದಿಗೂ ರಾಜಿ ಮಾಡಿಕೊಳ್ಳುವ ವ್ಯಕ್ತಿ ಅವನಾಗಿರಲಿಲ್ಲ. ವೆಬರನ ಪ್ರಕಾರ ಒಬ್ಬ ನಿಜವಾದ ರಾಜಕಾರಣಿ ಒಂದು ನಿರ್ದಿಷ್ಟ ತತ್ವಕ್ಕೆ ಅಥವಾ ತನ್ನ ಅಂತರಾತ್ಮನಿಗೆ ಯಾವಾಗಲೂ ಬಲವಾಗಿ ಬದ್ಧನಾಗಿರುತ್ತಾನೆ. ಇಂಥ ಬಲವಾದ ಉತ್ಸಾಹವನ್ನು ವೆಬರ್ ಸಂಪೂರ್ಣವಾಗಿ ಹೊಂದಿದ್ದ. ಆದರೆ ತನ್ನ ರಾಜಕೀಯ ನಡತೆಯಲ್ಲಿ ವಸ್ತುಸ್ಥಿತಿಗೆ ಮತ್ತು ಜನಕ್ಕೆ ದೂರವಾಗಿ ಅವನು ನಿಲ್ಲಲಿಲ್ಲ. ತನ್ನ ಪಾಂಡಿತ್ಯಪೂರ್ಣ ಬರವಣಿಗೆಗಳಲ್ಲಿ ವಸ್ತುನಿಷ್ಠೆಯ ದೃಷ್ಟಿಯಿಂದ ಯಾವುದೇ ವಿಷಯವನ್ನಾದರೂ ಅಧ್ಯಯನ ಮಾಡಬೇಕೆಂದು ಅವನು ನಿರೂಪಿಸಿದ್ದಾನೆ. ಇದರ ಪರಿಣಾಮವಾಗಿ ವೆಬರ್ ತನ್ನ ರಾಜಕೀಯ ಚಟುವಟಿಕೆಗಳಲ್ಲಿ ಇತರರಿಂದ ಪ್ರತ್ಯೇಕಿಸಲ್ಪಟ್ಟ ಒಂಟಿ ಜೀವನ ನಡೆಸಬೇಕಾಗಿ ಬಂತು. ಅವನು ಒಂದು ರಾಜಕೀಯ ಪಕ್ಷದ ನಿಷ್ಠಾವಂತ ವ್ಯಕ್ತಿ ಎಂದು ಕರೆಸಿಕೊಳ್ಳಲು ಇಷ್ಟಪಡಲಿಲ್ಲ.

ವೆಬರ್ ತುಂಬ ವಿಶಾಲದೃಷ್ಟಿಯ, ಉದಾರ ಭಾವನೆಯ ದೃಷ್ಟಿಕೋನ ಬೆಳೆಸಿಕೊಂಡಿದ್ದ. ಅವನ ವೈಚಾರಿಕತೆ ಅನೇಕ ಮತ್ತು ವಿವಿಧ ಪ್ರಭಾವಗಳ ಒತ್ತಡಕ್ಕೊಳಗಾಗಿ ರೂಪುಗೊಂಡಿತ್ತು. ಅವನು ಒಬ್ಬ ದಾರ್ಶನಿಕನಾಗಿರಲಿಲ್ಲ. ಆದರೂ ಅವನು ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದಾಗಲೇ ಅನೇಕ ಪುರಾತನ ದರ್ಶನ ಪದ್ಧತಿಗಳ ಜ್ಞಾನವನ್ನು ಸಂಪಾದಿಸಿಕೊಂಡಿದ್ದ. ಅವನೊಬ್ಬ ಮತಧರ್ಮದ ಗುರುವಾಗಿರಲಿಲ್ಲ. ಆದರೆ ಅವನ ಬರವಣಿಗೆಗಳು ಮತಧರ್ಮಶಾಸ್ತ್ರದಲ್ಲಿ ಅವನು ಅಪರಿಮಿತ ಜ್ಞಾನವನ್ನು ಸಂಪಾದಿಸಿಕೊಂಡಿದ್ದನೆಂಬುದನ್ನು ತುಂಬ ಸ್ಪಷ್ಟವಾಗಿ ಸಾಬೀತುಮಾಡುತ್ತವೆ. ಒಬ್ಬ ಸುಪ್ರಸಿದ್ಧ ಆರ್ಥಿಕ ಇತಿಹಾಸಕಾರನಾಗಿ ಅವನು ಆ ಕ್ಷೇತ್ರದಲ್ಲಿ ಮತ್ತು ಆರ್ಥಿಕ ಸಿದ್ಧಾಂತದ ಕ್ಷೇತ್ರದಲ್ಲಿ ದೊರಕಿದ ಎಲ್ಲ ಸಾಹಿತ್ಯವನ್ನು ಓದಿ ಜೀರ್ಣಿಸಿಕೊಂಡಿದ್ದ. ಅವನು ಪ್ರಥಮ ದರ್ಜೆಯ ವಕೀಲನ ಮನಸ್ಸನ್ನು ಹೊಂದಿದ್ದ. ಕಾನೂನಿನ

ಇತಿಹಾಸ ಮತ್ತು ದರ್ಶನಗಳಲ್ಲಿ ಅಗಾಧ ಪಾಂಡಿತ್ಯ ಸಂಪಾದಿಸಿಕೊಂಡಿದ್ದ. ಅವನು ಪುರಾತನ ಮತ್ತು ಆಧುನಿಕ ಇತಿಹಾಸದ ಬಗ್ಗೆ ಮತ್ತು ಪೂರ್ವ ದೇಶಗಳ ಇತಿಹಾಸದ ಬಗ್ಗೆ ಅತ್ಯದ್ಭುತ ವಾದ ಮತ್ತು ಆಳವಾದ ಜ್ಞಾನ ಹೊಂದಿದ್ದ. ಅವನು ಸ್ವಾಭಾವಿಕವಾಗಿಯೇ ತನ್ನ ಕಾಲದ ಎಲ್ಲ ಪ್ರಮುಖ ಸಮಾಜಶಾಸ್ತ್ರೀಯ ಬರವಣಿಗೆಗಳ ಬಗ್ಗೆಯೂ ನಿಕಟ ಸಂಬಂಧ ಪಡೆದಿದ್ದ. ಆಗಿನ ಕಾಲದಲ್ಲಿ ಇನ್ನೂ ಪ್ರಸಿದ್ಧಿಗೆ ಬಂದಿರದಿದ್ದ ಸಿಗ್‌ಮಂಡ್ ಫ್ರಾಯ್ಡನ ಬರವಣಿಗೆಗಳನ್ನು ಸಹ ವೆಬರ್ ಓದಿದ್ದನೆಂದು ಪ್ರತೀತಿ ಇದೆ. ವೆಬರ್ ಬಹುವಿದ್ಯಾಪಂಡಿತರ ಸಾಲಿಗೆ ಸೇರಿದವನೆಂದು ಎಲ್ಲ ದೃಷ್ಟಿಯಿಂದಲೂ ಸಮರ್ಥಿಸಬಹುದಾಗಿದೆ.

ವೆಬರನ ವಿಚಾರಧಾರೆಯ ಮೇಲೆ ಪ್ರಭಾವ ಬೀರಿರುವ ಅನೇಕ ಬೌದ್ಧಿಕ ಶಕ್ತಿಗಳಲ್ಲಿ ಕೆಲವು ಪ್ರಭಾವಗಳು ಅವನನ್ನು ಅವನ ಕೆಲವು ಸಮಕಾಲೀನರ ಜೊತೆ ಒಂದುಗೂಡಿಸುತ್ತವೆ. ಸಮಾಜ ವಿಜ್ಞಾನಗಳಿಗೆ ಸಂಬಂಧಿಸಿದ ಹಾಗೆ ವೆಬರನ ಒಟ್ಟು ದೃಷ್ಟಿ ಪ್ರಕೃತಿ ಮತ್ತು ಮಾನವ ವಿಜ್ಞಾನಗಳ ಮಧ್ಯೆ ಇರುವ ಭೇದಗಳ ವಿಧಾನಕ್ಕೆ ಸಂಬಂಧಿಸಿದ ಚರ್ಚೆಗಳಿಂದ ತುಂಬ ಪ್ರಮುಖ ವಾಗಿ ಪ್ರಭಾವಿಸಲ್ಪಟ್ಟಿತು ಎಂದು ಹೇಳುವುದಕ್ಕೆ ಅನೇಕ ಆಧಾರಗಳಿವೆ. ಈ ಚರ್ಚೆಗಳು ಜರ್ಮನಿಯಲ್ಲಿ ಇಮಾನ್ಯುಯೆಲ್ ಕ್ಯಾಂಟನ ಕಾಲದಲ್ಲಿ ಪ್ರಾರಂಭವಾಗಿ ಹೆಗಲನ ಕಾಲದಲ್ಲಿ ಮುಂದುವರಿದು ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಪುನರುಜ್ಜೀವನ ಹೊಂದಿದುವು.

ಸಾಮಾಜಿಕವರ್ತನೆ ಮಾನವ ಜಾತಿಗೆ ಮಾತ್ರ ಸೀಮಿತವಾಗಿಲ್ಲ. ಅದನ್ನು ಎಲ್ಲ ಜೀವಿಗಳಲ್ಲಿಯೂ ಸ್ವಲ್ಪಮಟ್ಟಿಗೆ ಕಾಣಬಹುದು. ಜೀವವಿಕಾಸದಲ್ಲಿ ಮೊದಲು ಬಂದ ಸೂಕ್ಷ್ಮ ಜೀವಿಗಳಿಂದ ಹಿಡಿದು ಮಾನವ ಜಾತಿಯವರೆಗೆ ಎಲ್ಲ ಜೀವಿಗಳಲ್ಲೂ ಸಾಮೂಹಿಕ ವರ್ತನೆಯನ್ನು ಕಾಣಬಹುದು. ಜೀವಿಗಳ ದೈಹಿಕ ವ್ಯವಸ್ಥೆ ವಿಕಾಸವಾಗಿರುವಂತೆಯೇ ಅವುಗಳ ವರ್ತನೆಯೂ ವಿಕಾಸಗೊಂಡಿದೆಯೆಂದು ಜೀವಿಮನಶ್ಶಾಸ್ತ್ರಜ್ಞರು ಪ್ರಮಾಣಪೂರ್ವಕವಾಗಿ ತೋರಿಸಿಕೊಟ್ಟಿದ್ದಾರೆ. ಸಾಮಾಜಿಕವರ್ತನೆ ಎಲ್ಲ ಜೀವಿಗಳಲ್ಲೂ ಕಂಡುಬರುತ್ತದೆಯಾದರೂ, ಅದರ ವಿಕಾಸದಲ್ಲಿ ಒಂದು ಮುಖ್ಯವಾದ ಲಕ್ಷಣವನ್ನು ಕಾಣಬಹುದು. ಸೂಕ್ಷ್ಮ ಜೀವಿಗಳಲ್ಲಿ, ಮತ್ತು ವಿಕಾಸದ ಪ್ರಥಮದಲ್ಲಿ ಹುಟ್ಟಿಕೊಂಡ ಇತರ ಜೀವಿಗಳಲ್ಲಿ, ಸಾಮಾಜಿಕ ವರ್ತನೆ ಪೂರ್ತಿಯಾಗಿ ಸ್ವಾಭಾವಿಕ ಶಕ್ತಿಗಳಿಂದ ಉಂಟಾಗುತ್ತದೆ. ತರುವಾಯ ಬಂದ ಜೀವಿಗಳಲ್ಲಿ ಸ್ವಾಭಾವಿಕ ಶಕ್ತಿಗಳ ಜೊತೆಗೆ ಕಲಿಕೆಯ ಪ್ರಭಾವ ಕಂಡುಬಂದು ಜೀವವಿಕಾಸದ ಕೊನೆಯಲ್ಲಿ ಬಂದ ಸಸ್ತನಿಗಳ, ಅವುಗಳಲ್ಲಿಯೂ ವಾನರಗಳ ಮತ್ತು ಮಾನವರ, ವರ್ತನೆಯಲ್ಲಿ ಸ್ವಾಭಾವಿಕ ಶಕ್ತಿಗಳ ಭಾಗ ಕಡಿಮೆಯಾಗುತ್ತ ಬಂದು, ಕಲಿಕೆಯ ಪ್ರಭಾವವೇ ಹೆಚ್ಚಾಗುತ್ತದೆ. ಮಾನವರ ಸಾಮಾಜಿಕವರ್ತನೆ ಬಹುಮಟ್ಟಿಗೆ ಕಲಿತ ವರ್ತನೆಯೆಂದೇ ಹೇಳಬೇಕಾಗುತ್ತದೆ.

ಆರ್. ಎ. ಫಣಿಶಾಯಿ*

---

* ಸಾಮಾಜಿಕ ಮನೋವಿಜ್ಞಾನ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೩೨

ಕಂಠೀರಾವ್

ಇಸ್ಲಾಮೀ ನ್ಯಾಯ—೨

ವಾದಿ ಮತ್ತು ಪ್ರತಿವಾದಿ

ದಾವೆದಾರನನ್ನು (ವಾದಿಯನ್ನು) ಮುದ್ದಯಿ ಮತ್ತು ಪ್ರತಿವಾದಿಯನ್ನು 'ಮುದ್ದಾಲಿಯ'[1] ಎಂದು ಕರೆಯುತ್ತಿದ್ದರು.

(1) ಕಳವಿನ ಮಾಲನ್ನು ಮೂರನೆಯವರು ಪಡೆದರೆ ವಾದಿಯು ಅವನಿಂದ ಅದನ್ನು ಪಡೆಯಲು ದಾವೆ ಹೂಡಬಹುದು, ಚರಾಸ್ತಿಯನ್ನು ಅನ್ಯಾಯವಾಗಿ ವಶಪಡಿಸಿ ಕೊಂಡವನ ಮೇಲೆ ವಾದಿ ದಾವೆ ಹೂಡಿ ಅದನ್ನು ಮರಳಿ ಪಡೆಯಲು ಹಕ್ಕುಳ್ಳವನಾಗಿದ್ದ.

(2) ಮೃತನ ವಾರಸುದಾರರಲ್ಲೊಬ್ಬ, ಮೃತನ ಪರವಾಗಿ ಅಥವಾ ವಿರುದ್ಧವಾಗಿ ಹೂಡಬಹುದಾಗಿದ್ದ ಕ್ಲೇಮಿನ ಸಂಬಂಧದಲ್ಲಿ ವಾದಿ ಅಥವಾ ಪ್ರತಿವಾದಿಯಾಗ ಬಹುದಾಗಿತ್ತು.

(3) ಮೃತನಾದವನ ವಿರುದ್ಧ ಅವನ ಒಬ್ಬ ವಾರಸುದಾರನ ಸಮಕ್ಷ ಯಾವನಾದರೂ ತನ್ನ ಹಕ್ಕನ್ನು ಸ್ಥಾಪಿಸಿದರೆ ಸಾಕು, ಆ ನಿರ್ಣಯಕ್ಕೆ ಉಳಿದ ಎಲ್ಲ ವಾರಸು ದಾರರು ಬದ್ಧರಾಗಿದ್ದರು.

(4) ಒಂದು ಸ್ವತ್ತಿನಲ್ಲಿ ವಾರಸುದಾರರಲ್ಲದ ಅನೇಕ ಪಾಲುಗಾರರಿರುವಾಗ ಒಬ್ಬ ಮತ್ತೊಬ್ಬನ ಪ್ರತಿನಿಧಿಯೆಂದು ಗ್ರಹಿಸಲ್ಪಡುತ್ತಿದ್ದಿಲ್ಲ. ಅವನ ಮೇಲೆ ದಾವೆ ಹೂಡಿದಾಗ ಅವನ ಪಾಲಿನ ಮಟ್ಟಿಗೆ ಡಿಕ್ರಿ ಕೊಡಲಾಗುತ್ತಿತ್ತು.

(5) ಸಾರ್ವಜನಿಕ ರಸ್ತೆ ಮೊದಲಾದ ಸೌಕರ್ಯ ವಿಷಯಗಳಲ್ಲಿ ಜನಸಾಮಾನ್ಯರ ಲ್ಲೊಬ್ಬ ಜನಸಾಮಾನ್ಯರ ಪ್ರಯೋಜನಾರ್ಥವಾಗಿ ದಾವೆ ಹೂಡಿ ಡಿಕ್ರಿ ಪಡೆಯ್ಯು ಬಹುದಾಗಿತ್ತು.

---

[1] ಮುದ್ದುವಾ ಎಂದರೆ ಪ್ರಾರ್ಥನೆ, ಬಿನ್ನಹ ಎಂದು ಅರ್ಥ. ಪ್ರಾರ್ಥನೆ ಮಾಡುವವನು ಮುದ್ದಯಿ. ಅದಕ್ಕೆ ಉತ್ತರದಾಯಿಯಾದವನು ಮುದ್ದಾಲಿಯ. 'ಮುದ್ದಯಿ ಲಾಖ್ ಚಾಹೆತೊ ಕ್ಯಾ ಹೋಗಾ ? ವಹಿ ಹೋತಾಹೈ ಜೋ ಮಂಜೂರೆ ಖುದಾ ಹೋತಾಹೈ' ಎಂಬ ಉರ್ದು ಗಾದೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

(೬) ಜಲಮಾರ್ಗ ಅಥವಾ ನದಿಹಳ್ಳಗಳಲ್ಲಿ ಎರಡು ಅಥವಾ ಅದಕ್ಕೂ ಹೆಚ್ಚು ಗ್ರಾಮಗಳ ನಿವಾಸಿಗಳು ಹಿತಾಸಕ್ತಿಯನ್ನು ಹೊಂದಿರುವಾಗ ಆ ಬಗ್ಗೆ ತಮ್ಮ ಹಕ್ಕುಗಳನ್ನು ಸಾರಬೇಕೆಂದು ನ್ಯಾಯಾಲಯವನ್ನು ಕೇಳುವ ದಾವೆಗೆ, ನಿರ್ಧರಿಸಲಾಗದಷ್ಟು ಜನಸಂಖ್ಯೆಯಿರುವಾಗ ಆ ಗ್ರಾಮಗಳಿಂದ ಕೆಲವು ಜನ ಸೇರಿರಬೇಕೆಂದೂ ಪರಿಮಿತ ಜನಸಖ್ಯೆಯಿರುವಾಗ ಅವರೆಲ್ಲರೂ ಸೇರಬೇಕೆಂದೂ ನಿಯಮವಿತ್ತು. ಇವು ಪ್ರಾಚೀನ ಭಾರತದ ಗಡಿವಿವಾದ ಇತ್ಯರ್ಥ ನಿಯಮಗಳನ್ನು ಹೋಲುತ್ತವೆ (ಕೌಟಿಲ್ಯ ಅರ್ಥಶಾಸ್ತ್ರ ನೋಡಿ).

ವಾದಪತ್ರ (ದಾವಾ)

ವಾದಗಳನ್ನು ಮುಖತಃ ಅಥವಾ ಲಿಖಿತರೂಪದಲ್ಲಿ ಮಂಡಿಸಲು ಅವಕಾಶವಿತ್ತು. ಬಾಯಿಮಾತಿನಲ್ಲಿ ಮಂಡಿಸಿದಾಗ ನ್ಯಾಯಾಲಯದ 'ಕಾತಿಬ್'[2] ಅದನ್ನು ಬರೆದುಕೊಳ್ಳುತ್ತಿದ್ದ. ವಾದಪತ್ರದಲ್ಲಿ ಕಕ್ಷಿಗಳ ಮತ್ತು ಸಾಕ್ಷಿದಾರರ ಹೆಸರು, ವಿಳಾಸ ಮತ್ತು ದಾವೆಯ ಪರ್ಯಾಪ್ತ ವಿವರಗಳು, ಹೊಣೆಯ ಕಾರಣಗಳು, ಕ್ರಮಾರ್ಹಕಾರಣ (ವರ್ಸೋ : ದಾವಾ) ಕೇಳುವ ಪರಿಹಾರ ಈ ಅಂಶಗಳಿರಬೇಕೆಂಬ ನಿಯಮವಿತ್ತು.[3] ಹಕ್ಕು ಆಸ್ತಿಗೆ ಸಂಬಂಧಿಸಿದ್ದಾದರೆ ಅದರ ಮೇರೆಗಳನ್ನು, ಸ್ವಾಧೀನಕಾರನನ್ನು, ಆಸ್ತಿಯ ಪ್ರಮಾಣವನ್ನು ಮತ್ತು ಅದು ಸ್ಥಿರಾಸ್ತಿಯೋ ಅಥವಾ ಚರಾಸ್ತಿಯೋ ಎಂಬುದನ್ನು ತಿಳಿಸಬೇಕಾಗುತ್ತಿತ್ತು. ಸಾಲದ ದಾವೆಯಿದ್ದಾಗ ಅದರ ಮೊಬಲಗನ್ನು[4] ತಿಳಿಸಬೇಕಾಗುತ್ತಿತ್ತು.

ದೂರುಗಳ (ಫಿರ್ಯಾದು) ವಿಚಾರಣೆ

ದೂರುಗಳ ವಿಚಾರಣೆಯಲ್ಲಿ ವಾದಿ ಪ್ರತಿವಾದಿ ಇಬ್ಬರೂ ಹಾಜರಿರಬೇಕಾಗುತ್ತಿತ್ತು. ಹನಾಫಿನ್ಯಾಯದ ಪ್ರಕಾರ ಕಾಜಿ ಏಕಪಕ್ಷೀಯ ಡಿಕ್ರಿ ಕೊಡುವಂತಿರಲಿಲ್ಲ. ಹಾಗೆ ಮಾಡಿದಲ್ಲಿ ಪ್ರತಿವಾದಿ ಅದನ್ನು ಪ್ರಶ್ನಿಸಿ ತನ್ನ ಹಕ್ಕನ್ನು ಪಡೆದುಕೊಳ್ಳಲು ಸದಾ ಅವಕಾಶವಿರುತ್ತಿತ್ತು. ಪ್ರತಿವಾದಿ ತನ್ನ ಪ್ರತಿನಿಧಿಯನ್ನು ಕಳಿಸದಿದ್ದರೆ ತಾನೇ ಹಾಜರಾಗುವುದು ಕಡ್ಡಾಯವಾಗಿತ್ತು. ಅವನು ಹಾಜರಾಗುವಂತೆ ಮೂರು ಸಲ ಕರೆಕೊಟ್ಟ ಬಳಿಕವೂ ಅವನು ಹಾಜರಾಗದಿದ್ದರೆ, ನ್ಯಾಯಾಲಯ ಅವನ ಪರವಾಗಿ ಒಬ್ಬ ಪ್ರತಿನಿಧಿಯನ್ನು ನಿಯಮಿಸಿ ಡಿಕ್ರಿ ಮಾಡಬೇಕಾಗುತ್ತಿತ್ತು

ನ್ಯಾಯಾಲಯ ಪ್ರಕ್ರಿಯೆ

ನ್ಯಾಯಾಲಯ ಬಹಿರಂಗವಾಗಿರುತ್ತಿತ್ತು. ಕಾಜಿ ಅದರ ಅಧ್ಯಕ್ಷನಾಗಿರುತ್ತಿದ್ದ. ಪಕ್ಕದಲ್ಲಿಯೇ ಇರುವ 'ಕಾತಿಬ'[5] ವಾದಪ್ರತಿವಾದ ಪತ್ರಗಳನ್ನು ಸ್ವೀಕರಿಸುತ್ತಿದ್ದ ಮತ್ತು ನ್ಯಾಯಾಲಯದ ನಿರ್ದೇಶದ ಮೇರೆಗೆ ಸಾಕ್ಷಿಗಳನ್ನು ಬರೆದುಕೊಳ್ಳುತಿದ್ದ. ಕಾಜಿಯ ಸಮಕ್ಷ ಹಾಜರಿರುವ

---

[2] ಕಾತಿಬ್ ಎಂದರೆ ಬರೆದುಕೊಳ್ಳುವವನು ಎಂದು. ಹಾಗೇ 'ಕುತಬ್' 'ಕಿತಾಬ್' ಎಂದರೆ ಪುಸ್ತಕ. 'ಕಾತಿಬ್' ಎಂದರೆ 'ಲೇಖಕ'. ಕೌಟಿಲ್ಯ ಹೇಳುವ ಲೇಖಕನನ್ನು ಇವನೊಡನೆ ಹೋಲಿಸಬಹುದಾಗಿದೆ.

[3] ಇದು ಕೌಟಿಲ್ಯ ಕೊಡುವ ವಾದ ಪತ್ರದ ವಿವರಣೆಯನ್ನು ಹೋಲುವುದು.

[4] ಮೊಬಲ್ಲಗ್ ಎಂಬುದು ಅರಬ್ಬಿ—ಉರ್ದು ಮೂಲದ ಶಬ್ದ; ಮೊತ್ತ ಹಣ ಎಂದು ಇದರ ಅರ್ಥ. ಇದು ಕರ್ನಾಟಕದ ವಿವಿಧ ಭಾಗಗಳಲ್ಲಿ ಈಗಲೂ ಬಳಕೆಯಲ್ಲಿದೆ.

[5] ಈ 'ಕಾತಿಬ'ನನ್ನು ಕೌಟಲ್ಯನ ಶಾಸನಾಧಿಕಾರಿಕಾ ಕ್ಷಪಣಕನಿಗೆ ಹೋಲಿಸಬಹುದಾಗಿದೆ.

ಉಭಯ ಕಕ್ಷಿಗಳೂ ನ್ಯಾಯದೃಷ್ಟಿಯಲ್ಲಿ ಸಮಾನರಾಗಿರುತ್ತಿದ್ದರು. ವಾದಿ ತನ್ನ ಪ್ರಕರಣವನ್ನು ನಿವೇದಿಸಿದೊಡನೆ ಕಾತಿಬ ಅದನ್ನು ಬರೆದುಕೊಳ್ಳುವುದಲ್ಲದೆ ಹಾಜರುಪಡಿಸಿದ ಸಾಕ್ಷಿಗಳನ್ನು ಅಭಿಲೇಖಿಸಿಕೊಳ್ಳುತ್ತಿದ್ದ. ವಿವಾದದಲ್ಲಿ ಪ್ರಥಮ ನೋಟಕ್ಕೆ ತಥ್ಯಾಂಶವಿದೆಯೆಂದು ಕಂಡು ಬಂದರೆ ಅದಕ್ಕೆ ಉತ್ತರ ಕೊಡುವಂತೆ ಕಾಜಿ ಪ್ರತಿವಾದಿಗೆ ಹೇಳುತ್ತಿದ್ದ. ಪ್ರತಿವಾದಿ ಅದನ್ನು ನಿರಾಕರಿಸಬಹುದಾಗಿತ್ತು. ಅಥವಾ ಬೇರೆಯೇ ಹೇಳಬಹುದಾಗಿತ್ತು. ಇದನ್ನು 'ದಿಫಾ' ಎನ್ನು ತ್ತಿದ್ದರು ; 'ಜವಾಬ್‌ದಾವಾ' ಎಂದೂ ಕರೆಯುತ್ತಿದ್ದರು. ಅಂದರೆ ವಾದಿಯ ಮಾತನ್ನು ನಿರಾಕರಿಸುವ ಬದಲಾಗಿ ಪ್ರತಿವಾದಿ ತನ್ನ ಪ್ರತ್ಯೇಕ ವಾದವನ್ನೇ ಮುಂದೊಡ್ಡುತ್ತಿದ್ದ. ಉದಾ: ತಾನು ಸಾಲ ಹಿಂತಿರುಗಿಸಬೇಕಾಗಿದೆಯೆಂಬ ಕ್ಲೇಮನ್ನು ಒಪ್ಪಿಕೊಳ್ಳುತ್ತ ತಾನು ಅದನ್ನು ಆಗಲೇ ತೀರಿಸಿದ್ದಾಗಿದೆಯೆಂದು ಹೇಳುವುದು ಕಕ್ಷಿಗಳಿಗೆ ಅಗತ್ಯವೆನಿಸಿದರೆ, ಇನ್ನೂ ಹೆಚ್ಚಿನ ಸಾಕ್ಷಿಗಳನ್ನು ಕೊಡಲು ಅವಕಾಶಕೊಡುವುದು ಮತ್ತು ಅದಕ್ಕಾಗಿ ವಿಚಾರಣೆಯನ್ನು ಮುಂದೂಡುವುದು ಕಾನೂನು ಸಮ್ಮತವಾಗಿತ್ತು. ಹೀಗೆ ನ್ಯಾಯನಿರ್ಣಯವಾಗಿ ನ್ಯಾಯಾಲಯ ಆದೇಶ ಮಾಡಿ ದೊಡನೆಯೇ ಅದನ್ನು ಪ್ರಕರಣಗಳ ರಿಜಿಸ್ಟರಿನಲ್ಲಿ ಬರೆದುಕೊಳ್ಳುತ್ತಿದ್ದರು. ತೀರ್ಮಾನಗಳನ್ನು ಮತ್ತು ಡಿಕ್ರಿಗಳನ್ನು ನಿಯಮಗಳಿಗನುಸಾರವಾಗಿ ತಯಾರಿಸಬೇಕಾಗುತ್ತಿತ್ತು.

ಸಾಕ್ಷಿ

ಮಿಥ್ಯಾಕಥನದಿಂದ ನ್ಯಾಯಾಲಯ ಮೋಸಕ್ಕೀಡಾಗದಂತೆ ನೋಡಿಕೊಳ್ಳಲು ನ್ಯಾಯಾಲಯ ಸದಾ ಎಚ್ಚರಿಕೆ ವಹಿಸುತ್ತಿತ್ತೆಂದು ಅಬ್ದುರ್ರಹೀಮ ಬರೆಯುತ್ತಾರೆ. ಸುಳ್ಳುಸಾಕ್ಷ್ಯಕ್ಕೆ ಮಾನ್ಯತೆಯಿರಲಿಲ್ಲ. ಸಂಬಂಧಪಟ್ಟ ಕಕ್ಷಿಯನ್ನು ಆಗ್ರಹಪಡಿಸಿದಾಗ ಮಾತ್ರ ಸಾಕ್ಷ್ಯ ಅಗತ್ಯ ವಾಗುತ್ತಿತ್ತು. ಶಾರೀರಿಕ ದಂಡನೆ ವಿಧಿಸಲು ಸಾಕ್ಷ್ಯದ ಆವಶ್ಯಕತೆಯಿರಲಿಲ್ಲ.

ದಂಡನೆ ಅಥವಾ ಪ್ರತೀಕಾರ ಶಿಕ್ಷೆಗಳ ಸಂಬಂಧದಲ್ಲಿ ಸಾಕ್ಷಿಗಳು ಅಗತ್ಯವಾದಾಗ ಸಾಕ್ಷಿಗಳ ಚಾರಿತ್ರ್ಯಶುದ್ಧಿಯನ್ನು ಗಮನಿಸಲಾಗುತ್ತಿತ್ತು. ಸಾಕ್ಷಿಗಳ ಖಾಸಗಿ ಜೀವನವನ್ನು ಕುರಿತು ವಿಚಾರಿಸಿ ತಿಳಿದುಕೊಳ್ಳುತ್ತಿದ್ದ 'ಮುಜಿಕೀ' ಎಂಬಾತನೇ ಖಾಸಗಿಯಾಗಿ ಪತ್ರ ಬರೆದು ಸಮಾಚಾರ ತರಿಸಿಕೊಳ್ಳುತ್ತಿದ್ದ.

ಸಾಕ್ಷ್ಯದ ರೂಪರೇಷೆ

i) ಪ್ರತ್ಯಕ್ಷ (ಕಣ್ಣಿನಿಂದ ನೋಡಿದ್ದು) ಪರೋಕ್ಷಕ್ಕಿಂತ ಉತ್ತಮವಾದ ಪ್ರಮಾಣ ವಾಗಿತ್ತು. ಪ್ರತ್ಯಕ್ಷ್ಯಸಾಕ್ಷ್ಯ ತೀವ್ರ ಫಲಕಾರಿಯಾಗಿತ್ತು. ಪರೋಕ್ಷ ಸಾಕ್ಷ್ಯದಿಂದ ನ್ಯಾಯ ವಿತರಣೆಗೆ ವಿಳಂಬವಾಗುವುದೆಂಬುದನ್ನು ಜನ ಅರಿತಿದ್ದರು. ಮದುವೆ, ಪಿತೃತ್ವ–ಮಾತೃತ್ವ, ನ್ಯಾಯಸಮ್ಮತವಾದ ಸಂತಾನ, ದಾಂಪತ್ಯಸಂಬಂಧ ಮತ್ತು ಮರಣ ಇತ್ಯಾದಿ ವಿಷಯಗಳಲ್ಲಿ ಮಾತ್ರ ಪರೋಕ್ಷ ಸಾಕ್ಷ್ಯವನ್ನು ಗಮನಿಸಬಹುದಾಗಿತ್ತು. ಇದನ್ನು ಇವನು, 'ಕ'ನ ಮಗ ಎಂದು ನೇರವಾಗಿ ಹೇಳಬೇಕಾಗುತ್ತಿತ್ತು. ಇವನು 'ಕ' ನ ಮಗನೆಂದು ನಾನು ಕೇಳಿದ್ದೇನೆ ಇತ್ಯಾದಿಯಾಗಿ ಬಳಸಿ ಹೇಳುವಂತಿರಲಿಲ್ಲ.

ii) ವಕ್ಫ್ ಇತ್ಯಾದಿಗಳ ಸಂಬಂಧದಲ್ಲಿ ವಸ್ತುಸ್ಥಿತಿಯ ಹೇಳಿಕೆ ಗ್ರಾಹ್ಯವಾಗಿತ್ತು.

iii) ಬುದ್ಧಿಗೆ ಸಮರ್ಪಕವೆನಿಸದ ಅಥವಾ ಮಾನವನ ಅನುಭವಕ್ಕೆ ವಿರುದ್ಧವಾದ ಅಥವಾ ಅಸಹಜವೆಂದೆನಿಸುವ ಸಂಗತಿಗಳನ್ನು ವಾದಗಳಲ್ಲಿ ಗ್ರಹಿಸುತ್ತಿರಲಿಲ್ಲ.

iv) ದಸ್ತಾವೇಜು ಅದನ್ನು ಬರೆದುಕೊಟ್ಟವನಿಗೆ ತಿಳಿಯದ ಭಾಷೆಯಲ್ಲಿದ್ದಾಗ, ಅದಕ್ಕೆ ಸಹಿ ಹಾಕಿದ ಸಾಕ್ಷಿಗಳೇ ಅದನ್ನು ಬರೆದಾದ ಬಳಿಕ ಬರೆದು ಕೊಟ್ಟವನಿಗೆ ಓದಿ ಹೇಳಿಯಾಗಿದೆ ಯೆಂದು ಸಮರ್ಥಿಸಿದ್ದ ಹೊರತು, ಬರೆದುಕೊಟ್ಟವನು ನಿರಾಕರಿಸಿದಲ್ಲಿ, ಅಂಥ ನಿರಾಕರಣೆ ಅಂಗೀಕೃತವಾಗುತ್ತಿತ್ತು.

v) ತಜ್ಞಾಭಿಪ್ರಾಯ (ಮಾಹಿರಾನ್–ಎ–ಫನ್)[6] ಪ್ರಮಾಣವೆಂದು ಪರಿಗಣಿಸ ಲಾಗುತ್ತಿತ್ತು.

vi) ತಮಾಷೆಗಾಗಿ ಅಥವಾ ಟೀಕಾರೂಪವಾಗಿ ಮಾಡಿರದ ಅಥವಾ ಬಲವಂತದಿಂದ ಮಾಡಿರದ ಒಪ್ಪಿಗೆ (ಇಕರಾರ್)[7] ಪ್ರಮಾಣವೆಂದು ಗ್ರಹಿಸಲ್ಪಡುತ್ತಿತ್ತು. ತನ್ನ ಹಿತಾಸಕ್ತಿಗೆ ವಿರುದ್ಧವಾಗಿ ಯಾವನಾದರೂ ಸಾಕ್ಷ್ಯ ಕೊಟ್ಟರೆ ಅದಕ್ಕೆ ಇತರರು ಬದ್ಧರಿರಲಿಲ್ಲ.

vii) ಹೇಳಿಕೆಯಿಂದ ಹಿಂದೆಗೆಯುವುದಾದರೆ ಆದೇಶವಾಗುವುದಕ್ಕಿಂತ ಮುಂಚೆಯೇ ಹಾಗೆ ಮಾಡಬಹುದಾಗಿತ್ತು.

viii) ಸಮರ್ಥಕ ಸಾಕ್ಷ್ಯಗಳು ಅವಶ್ಯವಾಗಿದ್ದುವು. ಸ್ತ್ರೀಯರ ಸಾಕ್ಷ್ಯಗಳಿಗೆ ಅಷ್ಟು ಮಹತ್ವವಿರಲಿಲ್ಲ. ಒಬ್ಬ ಗಂಡಸಿನ ಸಾಕ್ಷ್ಯ ಅಥವಾ ಒಬ್ಬ ಗಂಡಸು ಮತ್ತು ಇಬ್ಬರು ಹೆಂಗಸರ ಸಾಕ್ಷ್ಯ ಒಟ್ಟಾಗಿ ಗ್ರಾಹ್ಯವಾಗಿತ್ತು. ಕ್ರಿಮಿನಲ್ ಮೊಕದ್ದಮೆಗಳಲ್ಲಿ[8] ವಿಶಿಷ್ಟ ಹೆಂಗಸು ಸ್ವೈರಿಣಿ ಯೆಂದು ರುಜುವಾತುಪಡಿಸಲು ನಾಲ್ಕು ಜನ ಗಂಡಸರು ಸಾಕ್ಷಿ ಹೇಳಬೇಕಾಗುತ್ತಿತ್ತು. ಇನ್ನೂ ಕನ್ಯೆಯಾಗಿದ್ದಾಳೆಯೇ ಅಥವಾ ಮಗು ಹೆತ್ತಿದ್ದಾಳೆಯೇ ಎಂಬುದನ್ನು ರುಜುವಾತುಪಡಿಸಲು ಒಬ್ಬ ಹೆಂಗಸಿನ ಸಾಕ್ಷಿಯೂ ಅಗತ್ಯವಾಗಿತ್ತು. ಕಾಜಿ ಸಾಕ್ಷ್ಯವನ್ನು ಗ್ರಹಿಸುವಲ್ಲಿ ಸ್ವತಂತ್ರ ನಾಗಿದ್ದರೂ ಇಂಥ ಸಂದರ್ಭದಲ್ಲಿ ಎಚ್ಚರಿಕೆಯ ಕ್ರಮವೆಂದು ಹೆಂಗಸಿನ ಸಾಕ್ಷ್ಯ ತೆಗೆದುಕೊಳ್ಳ ಲಾಗುತ್ತಿತ್ತು.

ಸಾಕ್ಷಿಗಳ (ಗವಾ) ಅರ್ಹತೆಗಳು

i) ಕುರುಡ, ಹುಚ್ಚ ಅಥವಾ ಮೂಕ, ಅನ್ಯಾಯ ವರ್ತನೆಯವನು ಸಾಕ್ಷಿಗಳಾಗಲು ಅನರ್ಹರಾಗಿದ್ದರು[9]. ಸಾಕ್ಷ್ಯ ಹೇಳಿಯಾದ ತರುವಾಯ, ಸಾಕ್ಷಿಗೆ ಕುರುಡತನ ಬಂದಾಗ್ಯೂ, ಸಾಕ್ಷಿಯ ಸಾಕ್ಷ್ಯ ಅಗತ್ಯ ಷರತ್ತಾದ್ದರಿಂದ ಡಿಕ್ರಿ ಕೊಡಲು ತೊಂದರೆಯುಂಟಾಗುತ್ತಿತ್ತು.

---

6 ಫನ್ ಎಂದರೆ ಯಾವುದೇ ವಿಷಯ, ಶಾಸ್ತ್ರ, ಕಲೆ, ವಿದ್ಯೆ, ಉದ್ಯೋಗ ಎಂದು ಅರ್ಥ. 'ಮಾಹಿರ್' ಅಂದರೆ ತಜ್ಞ. ಇವು ಉರ್ದು ಪದಗಳು.

7 'ಇಕರಾರ್' ಎಂದರೆ ಒಪ್ಪಂದ, ಒಪ್ಪಿಗೆ. 'ಕರಾರ್' ಎಂಬುದೂ ಇದೇ ಅರ್ಥದಲ್ಲಿ ಬಳಕೆಯಲ್ಲಿದೆ. (ಒಪ್ಪಂದ ಎಂಬುದನ್ನು ಇಂಗ್ಲಿಷಿನ agreement ಎಂಬುದಕ್ಕೂ ಕರಾರು ಎಂಬುದನ್ನು contract ಎಂಬುದಕ್ಕೂ ಕನ್ನಡದಲ್ಲಿ ಬಳಸಲಾಗುತ್ತಿದೆ. ಸಂ.)

8 'ಮೊಕದ್ದಮೆ' ಎಂದರೆ ಪ್ರಕರಣ ; ಉರ್ದು ಶಬ್ದ.

9 ಹಿಂದೂಧರ್ಮಶಾಸ್ತ್ರಗಳಲ್ಲಿದ್ದಂತೆ

ii) ಶ್ರದ್ಧಾಹೀನನಾದವನು ಸಾಕ್ಷಿಯಾಗಲು ಅನರ್ಹ. ಆದರೆ ಅವನು ಮುಸಲ್ಮಾನನಾದರೆ ಅರ್ಹನಾಗುತ್ತಿದ್ದ. ಸೇವಕರು ಮತ್ತು ದಾಸವೃತ್ತಿಯಲ್ಲಿರುವವರೂ ಅನರ್ಹರಾಗಿದ್ದರು.

iii) ಶೋಕಪ್ರದರ್ಶನ ವೃತ್ತಿಯಲ್ಲಿರುವವರು, ಗಾಯಕ ವೃತ್ತಿಯವರು, ಕುಡುಕರು, ಜೂಜಾಟವಾಡುವವರು, ಅಸಭ್ಯವರ್ತನೆಯವರು, ಸುಳ್ಳುಹೇಳುವ ಚಟವಿರುವವರು, ಮತಿಗೇಡಿಗಳು ಮತ್ತು ಕ್ರಾಂತಿಕಾರಿ ವಿಚಾರವುಳ್ಳವರು (ಅಂದರೆ ಮುಹಮ್ಮದ್ ಪೈಗಂಬರರ ಅನುಯಾಯಿಗಳನ್ನು ಟೀಕಿಸುವವರು) ಮತ್ತು ಅಪರಾಧಿಕ ಚಟುವಟಿಕೆಗಳಲ್ಲಿ ನಿರತರಾದವರು ಸಾಕ್ಷಿಗಳಾಗಲು ಅನರ್ಹರಾಗಿದ್ದರು. ಮುಸ್ಲಿಮನ ವಿರುದ್ಧವಾಗಿ ಯಾವೊಬ್ಬ ವಿಗ್ರಹಾರಾಧಕನೂ ಕಾಜಿಯ ನ್ಯಾಯಾಲಯದಲ್ಲಿ[10] ಸಾಕ್ಷ್ಯ ನೀಡುವಂತಿರಲಿಲ್ಲ.

ಇಬ್ಬರು ಹಿಂದೂಗಳು ಪರಸ್ಪರ ವಿರುದ್ಧ ಸಾಕ್ಷ್ಯಹೇಳಬಹುದೇ ಎಂಬುದು ವಾದಗ್ರಸ್ತ ವಿಷಯವಾಗಿತ್ತು. 'ಹಿದಾಯಾ' ಪದ್ಧತಿಯ ಪ್ರಕಾರ ಹೇಳಬಹುದಾಗಿತ್ತು.

iv) ಮಗನಿಗೆ ಅನುಕೂಲವಾಗಿ ತಂದೆ, ತಂದೆಗೆ ಅಜ್ಜನಿಗೆ ಅನುಕೂಲವಾಗಿ ಮಗ, ಮೊಮ್ಮಗ, ಗಂಡನಿಗೆ ಅನುಕೂಲವಾಗಿ ಹೆಂಡತಿ, ಗುಲಾಮನಿಗೆ ಅನುಕೂಲವಾಗಿ ಅವನ ಯಜಮಾನ, ಒಬ್ಬ ಪಾಲುದಾರನಿಗೆ ಅನುಕೂಲವಾಗಿ ಮತ್ತೊಬ್ಬ ಪಾಲುದಾರ ಸಾಕ್ಷ್ಯ ನುಡಿಯಲು ಅನರ್ಹರಾಗಿದ್ದರು. ಆದರೆ ಚಿಕ್ಕಪ್ಪ ಇಲ್ಲವೇ ದೊಡ್ಡಪ್ಪ ತನ್ನ ಅಣ್ಣನ ಇಲ್ಲವೆ ತಮ್ಮನ ಮಕ್ಕಳಿಗೆ ಅನುಕೂಲವಾಗಿ ಮತ್ತು ಮಕ್ಕಳು ತಮ್ಮ ಚಿಕ್ಕಪ್ಪದೊಡ್ಡಪ್ಪರಿಗೆ ಅನುಕೂಲವಾಗಿ ಸಾಕ್ಷ್ಯ ಹೇಳಬಹುದಾಗಿತ್ತು. ಅಣ್ಣತಮ್ಮಂದಿರು ಪರಸ್ಪರ ವಿರುದ್ಧ ಸಾಕ್ಷ್ಯ ಹೇಳಬಹುದಾಗಿತ್ತು.

ವಿಶಿಷ್ಟ ಸಂದರ್ಭಗಳಲ್ಲಿ ಅರ್ಹತೆ

ಮಹಾಪರಾಧ ಮಾಡಿದವರು, ಸಮರ್ಪಕ ಕಾರಣಗಳಿಗಾಗಿ 'ಸುನ್ನತಿ'[11] ಆಗದೆ ಇರುವವರು, ಜಾರಜರು, ಷಂಡರು, ಕ್ರೂರರಾಗಿರದ ಆಡಳಿತಗಾರರು ವಿಶಿಷ್ಟ ಸಂದರ್ಭಗಳಲ್ಲಿ ಸಾಕ್ಷಿಗಳಾಗಲು ಅರ್ಹರಾಗಿರುತ್ತಿದ್ದರು.

ಸಾಕ್ಷಿಗಳನ್ನು ಪ್ರತ್ಯೇಕವಾಗಿ ಪರೀಕ್ಷಿಸಲಾಗುತ್ತಿತ್ತು. ಇದನ್ನು ಇಜಹಾರ (ಮುಖ್ಯ ಪರೀಕ್ಷೆ) ಎಂದು ಕರೆಯುತ್ತಿದ್ದರು. ಪ್ರತಿಪಕ್ಷದವರು ಆ ಸಾಕ್ಷಿಗೆ ಪಾಟೀಸವಾಲು ಕೇಳಬಹುದಾಗಿತ್ತು.

ನ್ಯಾಯಾಧೀಶರು ಕಕ್ಷಿಗಳಿಗಾಗಲಿ ಸಾಕ್ಷಿಗಳಿಗಾಗಲಿ ಉತ್ತರ ಸೂಚಕ ಪ್ರಶ್ನೆಗಳನ್ನು (leading questions) ಹಾಕಲು ಬರುತ್ತಿರಲಿಲ್ಲ. ಇದರಿಂದ ಸಾಕ್ಷ್ಯದ ಮಹತ್ವವೇ ಹೊರಟು ಹೋಗುವುದೆಂಬ ಭಯವಿತ್ತು. ಆದರೆ ಸಾಕ್ಷಿ ವಿಫಲನಾದಾಗ, ಭಯ

---

10 ತಾರತಮ್ಯ ಸೂಚಕವಾಗಿದೆ.

11 'ಸುನ್ನತ್'. 'ಸುಂತ್' ಎಂದರೆ ಶಿಶ್ನಚರ್ಮಚ್ಛೇದನ. ಮುಸಲ್ಮಾನರಲ್ಲಿ ಈ ಪದ್ಧತಿಯಿದೆ. ಇದು ಧಾರ್ಮಿಕ ಸಂಸ್ಕಾರ ರೂಪವಾಗಿ ಎಳೆಯ ವಯಸ್ಸಿನಲ್ಲಿಯೇ ಆಗಬೇಕೆಂಬ ನಿಯಮವಿದೆ.

ಗ್ರಸ್ತನಾದಾಗ, ಏನು ಹೇಳಬೇಕೋ ತಿಳಿಯದಾದಾಗ, ನ್ಯಾಯಾಧೀಶ ಮಾರ್ಗದರ್ಶನ ಪ್ರಶ್ನೆಗಳನ್ನು ಕೇಳಬಹುದಾಗಿತ್ತು.

ಘಟನೆಯ ವಿದ್ಯಮಾನ ಮತ್ತು ಸನ್ನಿವೇಶಗಳನ್ನು ವಿವರಿಸುವ ಸಾಕ್ಷ್ಯಗಳನ್ನು ಗಮನಿಸಲಾಗುತ್ತಿತ್ತು. ಆದರೆ ಅವು ನಿರ್ಣಾಯಕ (conclusive) ಮಹತ್ವ ಹೊಂದಿದ್ದರೆ ಮಾತ್ರ ಅವನ್ನು 'ಕತಯಿ'[12] ಎನ್ನುತ್ತಿದ್ದರು.

ಇಸ್ಲಾಮೀ ನ್ಯಾಯಾಲಯಗಳು

'ಕಾಜಿ'ಯೇ ಇಸ್ಲಾಮೀ ನ್ಯಾಯಪದ್ಧತಿಯ ನ್ಯಾಯಾಧೀಶ. ಅವನ ಕಾರ್ಯಾಲಯವೇ ಪ್ರಾರಂಭಿಕ ನ್ಯಾಯಾಲಯವಾಗಿತ್ತು. ಅಪೀಲುಗಳು (ಮುರಾಫಾ) ಮುಂದೆ ದಿವಾನಿ ಸದರ್ ಅದಾಲತಿಗೂ, ಫೌಜ್ದಾರಿ ಸದರ್ ಅದಾಲತಿಗೂ ಹೋಗುತ್ತಿದ್ದುವು. ಅಂತಿಮಘಟ್ಟದಲ್ಲಿ ಬಾದಶಹನೇ ದೊಡ್ಡ ದೊಡ್ಡ ಪ್ರಕರಣಗಳನ್ನು (ಮೊಕದ್ದಮೆ) ತೀರ್ಮಾನಿಸುತ್ತಿದ್ದ. ಅಥವಾ ಅವನ ವಜೀರನಾಗಲಿ ದಿವಾನನಾಗಲಿ ತೀರ್ಮಾನಿಸುತ್ತಿದ್ದ. (ಪ್ರಾಚೀನ ಹಿಂದೂ ನ್ಯಾಯಪದ್ಧತಿಯೂ ಇದೇ ಮಾದರಿಯದಾಗಿತ್ತು.)

ಸಾಕ್ಷಿಯಾಗಲು ಅರ್ಹನಾದವನು, ಅಂದರೆ ಸ್ಥಿರಬುದ್ಧಿಯವನು, ವಯಸ್ಕ, ಮುಸಲ್ಮಾನ ಮತ್ತು ಧರ್ಮನಿಂದೆಯ ದೋಷಕ್ಕೆ ಗುರಿಯಾಗದಿರುವವನು 'ಕಾಜಿ'ಯಾಗಿ ನಿಯುಕ್ತನಾಗಲು ಅರ್ಹನಾಗಿದ್ದ. ಅರ್ಹನಾಗಿರಬಹುದಾಗಿದ್ದರೂ ಅನ್ಯಾಯಪರನಾದವನನ್ನು ನಿಯೋಜಿಸುತ್ತಿರಲಿಲ್ಲ. ನಿಯೋಜಿತನಾದ ಬಳಿಕ ಲಂಚ ತಿನ್ನುವವನನ್ನು ವಜಾ ಮಾಡಬಹುದಾಗಿತ್ತು. ಅವಿದ್ಯಾವಂತನೂ 'ಕಾಜಿ'ಯಾಗಬಹುದಾಗಿತ್ತು. ಆದರೆ 'ಷಫಿ' ಇದನ್ನು ಒಪ್ಪುವುದಿಲ್ಲ. ವಿವಾದಗಳಲ್ಲಡಗಿರುವ ಸೂಕ್ಷ್ಮಾಂಶಗಳನ್ನು ಕುರಿತು 'ಮುಫ್ತಿ'ಕೊಟ್ಟ ತೀರ್ಮಾನದ ಬಗ್ಗೆ 'ಕಾಜಿ' ಅಭಿಪ್ರಾಯ ವ್ಯಕ್ತಮಾಡಬೇಕಾಗುತ್ತಿದ್ದುದರಿಂದ ಅವನು ಅವಿದ್ಯಾವಂತನಾಗಿರುವುದು ಅಸಮಂಜಸ ಎಂಬುದು ಉಳಿದ ಕಾನೂನು ಪಂಡಿತರ ಅಭಿಪ್ರಾಯವಾಗಿತ್ತು. ನಿಯುಕ್ತನಾಗುವವನು ಆತ್ಮವಿಶ್ವಾಸವುಳ್ಳವನಾಗಿರಬೇಕು, ತನ್ನ ಯೋಗ್ಯತೆಯನ್ನರಿತವನಾಗಿರಬೇಕು, ಕುಹಕಿಯಾಗಿರಬಾರದು ಎಂಬ ನಿಯಮಗಳಿದ್ದುವು. 'ಕಾಜಿ'ಯಾಗಲು ಜನರು ಇಚ್ಛೆ ವ್ಯಕ್ತಪಡಿಸುವಂತಿರಲಿಲ್ಲ. ಬಾದಶಹನೇ ಯೋಗ್ಯವ್ಯಕ್ತಿಗಳನ್ನು ನಿಯಮಿಸುತ್ತಿದ್ದ. ನಿಯೋಜನೆಯ ಅನಂತರ ಹಿಂದಿನ 'ಕಾಜಿ'ಯಿಂದ ಎಲ್ಲ ದಾಖಲೆಗಳನ್ನು ಪಡೆದುಕೊಂಡು ಇಬ್ಬರು 'ಅಮೀನ'ರ ಸಹಾಯದಿಂದ ಅವು ಸರಿಯಾಗಿವೆಯೆಂಬುದನ್ನು ಖಾತ್ರಿ ಮಾಡಿಕೊಳ್ಳಬೇಕಾಗುತ್ತಿತ್ತು. ಹಿಂದಿನ 'ಕಾಜಿ'ಗೆ ವೃಥಾ ಆರೋಪ ಬಂದಿರಬಾರದೆಂಬುದೇ ಉದ್ದೇಶ. ಎಷ್ಟು ಜನ ಕೈದಿಗಳಿದ್ದಾರೆ, ವಿವಾದಗ್ರಸ್ತವಾಗಿದ್ದು ನ್ಯಾಯಾಲಯದ ವಶದಲ್ಲಿರುವ ಆಸ್ತಿಪಾಸ್ತಿಗಳೇನು ಎಂಬುದನ್ನೂ ಅಧಿಕಾರಗ್ರಹಣ ಕಾಲದಲ್ಲಿ ಪರಿಶೀಲಿಸಿ ತಿಳಿದುಕೊಳ್ಳುವುದು ಹೊಸ 'ಕಾಜಿ'ಯ ಕರ್ತವ್ಯವಾಗಿತ್ತು.

'ಕಾಜಿ'ಯ ವರ್ತನೆ ಸಂಶಯಾಸ್ಪದವಾಗಿರಕೂಡದು. ಗೆಳೆಯರು ಮತ್ತು ಸಂಬಂಧಿ

---

12 'ಕತಯಿ' (ಅರಬ್ಬೀ ಮೂಲದ ಉರ್ದು ಪದ) ಎಂದರೆ ಅಂತಿಮ ಎಂದು ಅರ್ಥ.

ಗಳಿಂದ ಮಾತ್ರ ಅವನು ಕಾಣಿಕೆಗಳನ್ನು ಸ್ವೀಕರಿಸಬಹುದಾಗಿತ್ತು. ಸಾರ್ವತ್ರಿಕ ಸ್ವರೂಪದ್ದಲ್ಲದ ಯಾವುದೇ ಆಮಂತ್ರಣವನ್ನು ಅವನು ಸ್ವೀಕರಿಸುವಂತಿರಲಿಲ್ಲ. ಕಕ್ಷಿಗಳಲ್ಲೊಬ್ಬನನ್ನು ಅನ್ನಪಾನಾದಿಗಳಿಗೆ ಅವನು ಆಮಂತ್ರಿಸುವಂತಿರಲಿಲ್ಲ. ಸಾಕ್ಷಿಗಳಿಗೆ ಸಹಾಯಕವಾಗುವಂತೆ ಮಾತನಾಡ ಕೂಡದೆಂಬ ನಿಯಮವಿತ್ತು. ಜಾಮೀನಿನ ಮೇಲೆ ಬಿಡಲು ಕಾಜಿಗೆ ಅಧಿಕಾರವಿತ್ತು. ಸಮ್ರಾಟ ಅಥವಾ ಅವನ ವಜೀರ ಮಾತ್ರ ಕಾಜಿಗಳನ್ನು ನೇಮಿಸಬಹುದಾಗಿತ್ತು. ಕಾಜಿಯ ಅಧಿಕಾರವ್ಯಾಪ್ತಿಯನ್ನು ಕೂಡ ಅವರೇ ನಿರ್ಧರಿಸುತ್ತಿದ್ದರು.

ಈಸ್ಟ್ ಇಂಡಿಯ ಕಂಪನಿಯ ಕಾಲದಲ್ಲಿ ಮುಸ್ಲಿಮೇತರ ರಾಜನಿಂದ, ಗವರ್ನರನಿಂದ ಅಥವಾ ವಜೀರನಿಂದ ನಿಯುಕ್ತನಾದ 'ಕಾಜಿ'ಗೂ ಸಾಮಾನ್ಯ ನ್ಯಾಯದ ಪ್ರಕಾರ ವಿಧಿಮಾನ್ಯತೆಯಿತ್ತು.

ಕೆಲಸದ ಹೊರೆ ಹೆಚ್ಚಾಗಿ, 'ಕಾಜಿ'ಗೆ ಅವಶ್ಯವೆನಿಸಿದಾಗ, ನಾಯಬ್[13] 'ಕಾಜಿ'ಗಳನ್ನು ನಿಯಮಿಸಿಕೊಳ್ಳುವ ಅಧಿಕಾರವಿತ್ತು. 'ಕಾಜಿ' ಮರಣಹೊಂದಿದರೆ ನಾಯಬ್ 'ಕಾಜಿ'ಯ ಅಸ್ತಿತ್ವಕ್ಕೆ ಬಾಧೆ ಬರುತ್ತಿರಲಿಲ್ಲ.

(ಮೊಗಲ)ರಾಜನ ಪ್ರಸಾದಪರ್ಯಂತ (during the pleasure) 'ಕಾಜಿ' ಪದಗ್ರಹಣ ಮಾಡಿರುತ್ತಿದ್ದ. ರಾಜನ ಮರಣದಿಂದ 'ಕಾಜಿ'ಯ ನಿಯುಕ್ತಿಗೆ ಭಂಗಬರುತ್ತಿರಲಿಲ್ಲ.

'ಕಾಜಿ' ಇಸ್ಲಾಮೀ ನ್ಯಾಯಕ್ಕನುಸಾರವಾಗಿಯೆ ನ್ಯಾಯಪರಿಪಾಲನೆ ಮಾಡುತ್ತಿದ್ದ. ಇಸ್ಲಾಮೀ ನ್ಯಾಯದಿಂದ ಮಾರ್ಗದರ್ಶನ ದೊರೆಯದ ಸಂದರ್ಭಗಳಲ್ಲಿ ಮಾತ್ರ ಸಾಕಷ್ಟು ತನಿಖೆ ನಡೆಸಿ ಸ್ವಂತ ನಿರ್ಣಯಕ್ಕೆ ಬರುತ್ತಿದ್ದ. ಪೂರ್ವನಿರ್ಣಯಗಳನ್ನು (precedents) ಗಮನಿಸಬಹುದಾಗಿದ್ದರೂ ಅನುಸರಿಸಲು ಅವನು ಬದ್ಧನಿರಲಿಲ್ಲ.

ಸಿವಿಲ್ ಸ್ವರೂಪದ ಅಪರಾಧಗಳ ಸಂದರ್ಭಗಳನ್ನುಳಿದು ಇತರ ಸಂದರ್ಭಗಳಲ್ಲೆಲ್ಲ ವಕೀಲರನ್ನು ನಿಯಮಿಸಿಕೊಳ್ಳಲು ಅವಕಾಶವಿತ್ತು. ಈ ನೇಮಕಗಳೂ ಕೂಡ 'ಕುರಾನ್' ಮತ್ತು 'ಹದೀಸ್' ಆಜ್ಞಾನುಸಾರ ನಡೆಯುತ್ತಿದ್ದುವು. ಆದರೆ ಅವಯಸ್ಕರು, ಹುಚ್ಚರು ಮೊದಲಾದವರು ವಕೀಲರನ್ನು ನಿಯಮಿಸಿಕೊಳ್ಳಲು ಶಕ್ತರಾಗಿರಲಿಲ್ಲ. ವಕೀಲನೂ ಹಾಗೆ ಅನರ್ಹನಾಗಿರಕೂಡದು. ವಕೀಲ ವಾದಗ್ರಸ್ತ ವಿಷಯಗಳ ಬಗ್ಗೆ (ಖಾಸವಾತ್)[14] ನ್ಯಾಯಾಧೀಶನ ಮುಂದೆ (ಹಾಕಿಮ್)[15] ವಾದ ಮಂಡಿಸುತ್ತಿದ್ದ. ಪ್ರಕರಣವನ್ನು ಸರಿಯಾಗಿ ಮಂಡಿಸದಿದ್ದರೆ, ಅಥವಾ ಸುಳ್ಳುವಾದವನ್ನು ಮಂಡಿಸಿದರೆ, ಅವನು ಪಾಪಿಷ್ಠನೆಂದೂ ಅವನಿಗೆ ನರಕದಲ್ಲಿ (ದೋಜಕ್) ಸ್ಥಳ ಕಾದಿದೆಯೆಂದೂ ನಂಬಿಕೆಯಿತ್ತು. ಅವನು ಫೀಜು ತೆಗೆದುಕೊಳ್ಳಬಹುದಾಗಿತ್ತು. ವಕೀಲರು ನ್ಯಾಯದೇವತೆಯ ಅರ್ಚಕರೆಂಬ ಭಾವನೆಯಿತ್ತು. ವೃತ್ತಿ ಉದಾತ್ತವಾಗಿದ್ದು ಗೌರವಿಸಲ್ಪಡುತ್ತಿತ್ತು.

---

13 ನಾಯಬ್ ಎಂದರೆ ಉಪ ಎಂದರ್ಥ, ಡೆಪ್ಯುಟಿ ಎಂದ ಹಾಗೆ

14 'ಖಾಸವಾತ್' (ಉರ್ದು) : ವಿವಾದಾಂಶಗಳು

15 'ಹಾಕಿಮ್' (ಉರ್ದು) : ಹುಕುಮು ಮಾಡುವವನು, ನ್ಯಾಯಾಧೀಶ

ಆಧುನಿಕ ನ್ಯಾಯ ವ್ಯವಸ್ಥೆಯಲ್ಲಿ ಕಂಡುಬರುವ ವಿಬಂಧ (ಬಾಯಿಕಟ್ಟು, estoppel) ಅಧಿಕಾರವ್ಯಾಪ್ತಿ ಪ್ರತಿಬಂಧ (bar of jurisdiction) ಮತ್ತು ಅವಧಿಪರಿಮಿತಿ (limitation) ಮೊದಲಾದ ನ್ಯಾಯಿಕ ಪರಿಕಲ್ಪನೆಗಳು ಇಸ್ಲಾಮೀ ನ್ಯಾಯದಲ್ಲಿಯೂ ಮಹತ್ತ್ವದ ಸ್ಥಾನ ಹೊಂದಿದ್ದುವು. ಹದಿನೈದು ವರ್ಷಗಳೊಳಗಾಗಿ ಹಕ್ಕು ಕೇಳದಿದ್ದರೆ ಹಕ್ಕು ಅಳಿದುಹೋಗುತ್ತಿತ್ತು. ಇದನ್ನು 'ಇಸ್ತಿಹಕುತ್-ಎ-ದಾವಾ' ಎನ್ನುತ್ತಿದ್ದರು. ಆದರೆ ವಕ್ಫ್ ಮತ್ತು ವಾರಸು ದಾವೆಗಳಿಗೆ ಮಾತ್ರ 30 ವರ್ಷಗಳ ಅವಧಿ ದೊರೆಯುತ್ತಿತ್ತು. ಅವಧಿಪರಿಮಿತಿಯಿಂದಾಗಿ ಹಕ್ಕುನಾಶವಾಗಬಾರದೆಂಬುದೇ ಇದರ ಉದ್ದೇಶವಾಗಿತ್ತು. ಪ್ರತಿವಾದಿ ಹಕ್ಕನ್ನು ಒಪ್ಪಿಕೊಂಡರೆ ಅವಧಿಪರಿಮಿತಿ ಅನ್ವಯಿಸುತ್ತಿರಲಿಲ್ಲ.

ನ್ಯಾಯ ಉಚಿತವಾಗಿ ದೊರೆಯುತ್ತಿತ್ತು. ಗೆದ್ದ ಕಕ್ಷಿ ಮಾತ್ರ 'ಇತಲಕ್' (ಫೀಜು) ಕಟ್ಟಬೇಕಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ನ್ಯಾಯಾಲಯದ ವಶದಲ್ಲಿದ್ದ ಆಸ್ತಿಯಿಂದ ಫೀಜನ್ನು ಮುರಿದುಕೊಳ್ಳಲಾಗುತ್ತಿತ್ತು.

ಇಸ್ಲಾಮೀ ನ್ಯಾಯ ಎಷ್ಟೇ ಕಟ್ಟುನಿಟ್ಟಾಗಿದ್ದರೂ, ಅದು ಮಾರ್ಪಾಡು ಹೊಂದಿ ಬೆಳೆಯಲು ಸದಾ ಅವಕಾಶವಿತ್ತು. ಅಕ್ಬರನ ಕಾಲದಲ್ಲಿ ಅದು ಹೊಸ ದಾರಿಯನ್ನೇ ಹಿಡಿಯಿತೆಂದು ಹೇಳಬಹುದು. 'ಇಜ್ಮಾ' (ಒಟ್ಟಭಿಪ್ರಾಯ) ಮತ್ತು 'ಇಜ್ತಿಹಾದ್' (ಜಿಜ್ಞಾಸೆ) ಪದ್ಧತಿಯಿಂದಾಗಿ ಅನೇಕ ಮಾರ್ಪಾಡುಗಳುಂಟಾದುವು.

ಲಕ್ಷ್ಮಣ್ ತೆಲಗಾವಿ

ಚಿತ್ರದುರ್ಗದ ಪಾಳೆಯಗಾರರು ಮತ್ತು ಶ್ರೀ ಕೂಡಲೀ ಶೃಂಗೇರಿ ಸಂಸ್ಥಾನ ಸಂಬಂಧ*

ಚಿತ್ರದುರ್ಗದ ಪಾಳೆಯಗಾರರು ಕರ್ನಾಟಕದ ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಇವರ ಮೂಲಪುರುಷ ಚಿತ್ರನಾಯಕನೆಂದು ಹೇಳಲಾಗಿದೆ. ಆದರೆ ಚಿತ್ರದುರ್ಗದ ಭವ್ಯ ಇತಿಹಾಸ ಪ್ರಾರಂಭಗೊಳ್ಳುವುದು ಕಾಮಗೇತಿ ಮತ್ತಿ ತಿಮ್ಮಣ್ಣನಾಯಕನ ಆಳ್ವಿಕೆಯಿಂದ (1568 ರಿಂದ 1587). ಇವನಿಗೆ 'ಹಗಲು ಕಗ್ಗೊಲೆಯ ಮಾನ್ಯ' ಎಂಬ ಬಿರುದಿತ್ತು ; ಇವನು ಮದಕರಿನಾಯಕನೆಂಬ ಅಭಿಧಾನದಿಂದಲೂ ಕರೆಯಲ್ಪಟ್ಟಿದ್ದಾನೆ. ಇವನ ಆಳ್ವಿಕೆಯ ಕಾಲದಿಂದ, ಅಂದರೆ ವಿಜಯನಗರದವರಿಂದ ಚಿತ್ರದುರ್ಗದ ನಾಯಕನಾಗಿ ಇವನು ನೇಮಕಗೊಂಡ ಅನಂತರ 1568 ರಿಂದ 1779ರ ವರೆಗೆ ಪಾಳೆಯಗಾರರು ಚಿತ್ರದುರ್ಗವನ್ನು ರಾಜಧಾನಿಯನ್ನಾಗಿಸಿಕೊಂಡು ಕೇವಲ ಆ ಜಿಲ್ಲೆಯಲ್ಲಿಯೇ ಅಲ್ಲದೆ ಶಿವಮೊಗ್ಗ, ತುಮಕೂರು, ಬಳ್ಳಾರಿ, ರಾಯದುರ್ಗ ಜಿಲ್ಲೆಗಳಲ್ಲಿಯೂ ತಮ್ಮ ಆಳ್ವಿಕೆ ನಡೆಸಿ, ಸಮಕಾಲೀನ ಪಾಳೆಯಪಟ್ಟು ಗಳಷ್ಟೆ ಧನದಲ್ಲಿಯೂ ಬಲದಲ್ಲಿಯೂ ಸಮರ್ಥರೆನಿಸಿದ್ದರು. ಇತರ ರಾಜ್ಯಗಳೊಂದಿಗೆ ಇವರು ಇಟ್ಟುಕೊಂಡಿದ್ದ ರಾಜಕೀಯ ಮತ್ತು ವೈವಾಹಿಕ ಸಂಬಂಧಗಳು, ನಡೆಸಿದ ಕಾಳಗಗಳು, ನಿರ್ಮಿಸಿದ ಕೋಟೆ ಕೊತ್ತಲ, ದೇವ ಮಂದಿರಗಳು—ಇವನ್ನು ಕುರಿತ ಅವರ ಕಾಲದ ಉಜ್ವಲ ಇತಿಹಾಸ ಕೂತೂಹಲಕಾರಿಯಾಗಿದೆ. ಮರಾಠರೊಡನೆ ಇಟ್ಟುಕೊಂಡಿದ್ದ ಸಂಪರ್ಕ, ಮೈಸೂರಿನ

---

*ಶಿವಮೊಗ್ಗ ಜಿಲ್ಲೆ ಶ್ರೀ ಕೂಡಲೀ ಶೃಂಗೇರಿ ಸಂಸ್ಥಾನದವರು ಆ ಪೀಠದ ಇಪ್ಪತ್ತೆರಡ ನೆಯ ಅಧಿಪತಿಗಳಾದ ಶ್ರೀ ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿಗಳ ಪೀಠಾ ರೋಹಣ ರಜತೋತ್ಸವ ಕಾಣಿಕೆಯಾಗಿ ಸಮರ್ಪಿಸಿದ 'ಪ್ರಾಚೀನ ಶಾಸನ ಲೇಖನ ಸಂಗ್ರಹ' (ಭಾಗ 1, 1965)ವನ್ನು ಆಧಾರವಾಗಿಟ್ಟುಕೊಂಡು ಈ ಲೇಖನವನ್ನು ಬರೆಯಲಾಗಿದೆ. ಈ ಲೇಖನ ಸಂಗ್ರಹದಲ್ಲಿ ಚಿತ್ರದುರ್ಗ ಪಾಳೆಯಗಾರರ ಒಟ್ಟು ಇಪ್ಪತ್ನಾಲ್ಕು ದಾನ ಶಾಸನ ಮತ್ತು ನಿರೂಪಗಳು ಪ್ರಕಟವಾಗಿವೆ. ಅವು ಚಿತ್ರದುರ್ಗ ಪಾಳೆಯಪಟ್ಟಿನ 5ನೆಯ ಅರಸನಾದ ಕಸ್ತೂರಿ ಚಿಕ್ಕಣ್ಣ ನಾಯಕನಿಂದ ಕಡೆಯ ಮದಕರಿನಾಯಕನ ವರೆಗಿನ ಕಾಲಕ್ಕೆ ಸಂಬಂಧಿಸಿದವುಗಳಾಗಿವೆ. ಚಿತ್ರದುರ್ಗವೇ ಅಲ್ಲದೆ ಇತರ 16 ಪಾಳೆಯಪಟ್ಟುಗಳಿಗೆ ಸಂಬಂಧಿಸಿದ ಲೇಖನಗಳೂ ಈ ಸಂಪುಟದಲ್ಲಿ ಅಡಕಗೊಂಡಿವೆ.

ಚಿತ್ರದುರ್ಗದ ಪೂರ್ವ ದಿಕ್ಕಿನಲ್ಲಿ ನೆಲೆಗೊಂಡಿರುವ ಶ್ರೀ ಕೂಡಲೀ ಶೃಂಗೇರಿ ಮಠ ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡಿತು. ಇದೀಗ ಮಠದ ಆಧುನಿಕ ಕಟ್ಟಡ ಆ ಸ್ಥಳದಲ್ಲಿದೆ.

ಹೈದರ್ ಅಲಿಯೊಡನೆ ನಡೆಸಿದ್ದ ವ್ಯವಹಾರ ಇವು ಚಿತ್ರದುರ್ಗ ಪಾಳೆಯಗಾರರ ರಾಜಕೀಯ ಚತುರತೆಗೆ ಸಾಕ್ಷಿಯಾಗಿವೆ. ಅಲ್ಲದೆ ಅವರು ಅನುಸರಿಸಿದ ಆರ್ಥಿಕ, ಸಾಮಾಜಿಕ, ಧಾರ್ಮಿಕ ನೀತಿಗಳೂ ಅವರ ಆಡಳಿತ ಪದ್ಧತಿಯನ್ನು ಖಚಿತವಾಗಿ ಗುರುತಿಸಲು ಸಾಧಕವಾಗಿವೆ.

ಚಿತ್ರದುರ್ಗ ಪಾಳೆಯಗಾರರ ಧಾರ್ಮಿಕ ಇತಿಹಾಸವನ್ನೊಮ್ಮೆ ಅವಲೋಕಿಸಿದಾಗ ಮೂಲದಿಂದಲೂ ಅವರು ವಾಲ್ಮೀಕಿ ಮತದವರಾಗಿದ್ದರು; ಅಹೋಬಳ ನರಸಿಂಹಸ್ವಾಮಿ, ಕಂಪಳದೇವರು, ಸಿದ್ದಯ್ಯ, ರಂಗಯ್ಯ, ಚಿತ್ರದೇವರು ಎಂಬ ಮನೆದೇವರುಗಳನ್ನು ಆರಾಧಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ತಮ್ಮ ಮನೆದೇವರುಗಳ ಹೆಸರಿನಲ್ಲಿ ಅವರು ಗ್ರಾಮಗಳನ್ನು ಕಟ್ಟಿಸಿ ದತ್ತಿಗಳನ್ನು ಬಿಟ್ಟುಕೊಟ್ಟರು. ಪಾಳೆಯಪಟ್ಟಿನ 5ನೆಯ ದೊರೆ ಚಿಕ್ಕಣ್ಣನಾಯಕ ಮತ್ತು 12ನೆಯ ದೊರೆ ಬಿಚ್ಚುಕತ್ತಿ ಭರಮಣ್ಣನಾಯಕರುಗಳ ಕಾಲದಲ್ಲಿ ರಾಜಕುಟುಂಬದ ಕೆಲವರು ವೀರಶೈವ ಮತಾವಲಂಬಿಗಳಾದುದು ಗಮನಕ್ಕೆ ಬರುತ್ತದೆ. ಆದರೆ ಕೆಲವು ಅರಸರು ವೀರಶೈವ ಮತವನ್ನೂ ಆ ಮತದ ಪೀಠಾಧಿಕಾರಿಗಳನ್ನೂ ಕಡೆಗಣಿಸಿದ ಉದಾಹರಣೆಗಳೂ ಇವೆ. ಕೆಲವೊಮ್ಮೆ ಅರಮನೆ–ಗುರುಮನೆಗಳ ನಡುವಣ ಬಾಂಧವ್ಯ ಸುಗಮವಾಗಿರುತ್ತಿರಲಿಲ್ಲ.

ಈ ಪಾಳೆಯಗಾರರು ಮೊದಲಿನಿಂದಲೂ ಬ್ರಾಹ್ಮಣ ಮತಾವಲಂಬಿಗಳಾಗಿದ್ದರೆಂಬುದಕ್ಕೆ, ಅಂದರೆ ಬ್ರಾಹ್ಮಣರನ್ನು ತಮ್ಮ ಗುರುಗಳನ್ನಾಗಿ ಒಪ್ಪಿ ಅವರನ್ನನುಸರಿಸುತ್ತಿದ್ದರೆಂಬುದಕ್ಕೆ ಹಲವು ಆಧಾರಗಳು ಸಿಕ್ಕುತ್ತವೆ. ಇವರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳಲ್ಲಿ ಕಂಡುಬರುವ ಕೆತ್ತನೆಗಳಲ್ಲಿ ಶೈವಮತವನ್ನು ಪ್ರತಿನಿಧಿಸುವ ಪುರುಷಾಮೃಗ ಒಂದು ಮುಖ್ಯ ಉದಾಹರಣೆಯೆನ್ನಬಹುದು. ಇವರಿಗೆ ಯಾವಾಗಲೂ ಪ್ರಧಾನಿಗಳಾಗಿರುತ್ತಿದ್ದವರು ಬ್ರಾಹ್ಮಣರು. ಪ್ರಧಾನರಿಗೂ ಅಗ್ರಹಾರಗಳಿಗೂ ಈ ನಾಯಕರು ಬಿಟ್ಟುಕೊಟ್ಟ ದತ್ತಿ ಧರ್ಮಗಳಿಗೆ ಆಧಾರವಾಗಿ ಶಿಲಾಶಾಸನ, ತಾಮ್ರಪಟ ಶಾಸನಗಳು ಅನೇಕವಿವೆ.

ಪ್ರಸ್ತುತ ಲೇಖನದಲ್ಲಿ ಚಿತ್ರದುರ್ಗ ಪಾಳೆಯಗಾರರು ಶ್ರೀ ಕೂಡಲೀ ಶೃಂಗೇರಿ ಸಂಸ್ಥಾನದೊಡನೆ ಹೊಂದಿದ್ದ ಧಾರ್ಮಿಕ ವ್ಯವಹಾರವನ್ನು ಕುರಿತು ಬೆಳಕು ಚೆಲ್ಲಲು ಯತ್ನಿಸಲಾಗಿದೆ. ಧರ್ಮಗುರುಗಳ ಬಗ್ಗೆ ಈ ಪಾಳೆಯಗಾರರಲ್ಲಿ ಇದ್ದ ಶ್ರದ್ಧೆ ಭಕ್ತಿಗಳನ್ನೂ ಇಲ್ಲಿ ಗುರುತಿಸಲು ಪ್ರಯತ್ನಪಡಲಾಗಿದೆ.

ಶ್ರೀ ಕೂಡಲೀ ಶೃಂಗೇರಿ ಮಠ ಶಿವಮೊಗ್ಗದ ವಾಯವ್ಯಕ್ಕೆ ಸುಮಾರು ಒಂಬತ್ತು ಮೈಲಿಗಳ ದೂರದಲ್ಲಿ ನೆಲೆಗೊಂಡಿರುವ ಪುಣ್ಯಕ್ಷೇತ್ರ. ತುಂಗಾ ಭದ್ರಾ ನದಿಗಳ ಸಂಗಮ ಸ್ಥಳದಲ್ಲಿ ಸ್ಥಾಪಿತವಾಗಿದೆ. ಈ ಮಠವನ್ನು ಕೆಳದಿ ಸಂಸ್ಥಾನದ 6 ನೆಯ ಅರಸು ಹಿರಿಯ ವೆಂಕಟಪ್ಪನಾಯಕನ (1582–1629) ಸಮಕಾಲೀನರಾಗಿದ್ದ ಅಮ್ಮಾಜಿ ಸ್ವಾಮಿಯೆಂಬವರು ಸ್ಥಾಪಿಸಿದರೆಂದೂ 1546ರಿಂದ 1586ರ ವರೆಗೆ ಈ ಮಠದ ಪೀಠಾಧಿಕಾರಿಗಳಾಗಿದ್ದ (ಪ್ರಥಮ) ನರಸಿಂಹ ಭಾರತೀ ಸ್ವಾಮಿಗಳೇ ಇವರೆಂದೂ ಮಠದ ಪೂರ್ವೇತಿಹಾಸದಿಂದಲೂ ಇತರ ಆಧಾರಗಳಿಂದಲೂ ತಿಳಿದುಬರುತ್ತದೆಯೆಂಬುದಾಗಿ ಹೇಳಲಾಗಿದೆ.[1] ಈ ಸಂಸ್ಥಾನ 18 ಮತ್ತು 19 ನೆಯ ಶತಮಾನಗಳಲ್ಲಿ ಮರಾಠಾ ಪೇಶ್ವೆಗಳ ಕಾಲದಲ್ಲಿ ಅತ್ಯುನ್ನತ ಸ್ಥಾನ ಪಡೆದಿತ್ತು.[2]

---

1 M. A. R., 1945, p. 82 ; E. C. VII, Part I, No. 81, p. 83

2 M. A. R., 1945, p. 81

ಚಿಕ್ಕಣ್ಣನಾಯಕ (1675–1686)

ಚಿತ್ರದುರ್ಗದ ಪಾಳೆಯಗಾರರ ಮೂಲ ಗುರುಗಳು ಶ್ರೀಕೂಡಲೀ ಶೃಂಗೇರಿ ಜಗದ್ಗುರುಗಳೆಂದೇ ತಿಳಿದುಬರುತ್ತದೆ.[3] ಪಾಳೆಯಪಟ್ಟಿನ 5ನೆಯ ದೊರೆ ಕಸ್ತೂರಿ ಚಿಕ್ಕಣ್ಣನಾಯಕನ ಕಾಲದಿಂದ ಶ್ರೀ ಕೂಡಲೀ ಶೃಂಗೇರಿ ಸಂಸ್ಥಾನಕ್ಕೆ ಈ ಪಾಳೆಯಗಾರರು ಭಕ್ತಿಭಾವದಿಂದ ನಡೆದುಕೊಳ್ಳಲಾರಂಭಿಸಿದರೆಂದು ತೋರುತ್ತದೆ. ಏಕೆಂದರೆ ಮಠದ ಅಧೀನದಲ್ಲಿರುವ ನಿರೂಪ, ದಾನಶಾಸನಗಳು ಈ ನಾಯಕನ ಕಾಲದಿಂದ ಲಭ್ಯಗೊಳ್ಳುತ್ತವೆ. ಅವನಿಗಿಂತಲೂ ಹಿಂದಿನ ಅರಸರು ಮಠದೊಂದಿಗೆ ಸಂಬಂಧವಿರಿಸಿಕೊಂಡಿದ್ದರೇ, ಇಲ್ಲವೇ ಎಂಬುದನ್ನು ಕುರಿತು ಬೆಳಕು ಹಾಯಿಸಲು ಪ್ರಯತ್ನಿಸಬೇಕಾಗಿದೆ.

ಚಿಕ್ಕಣ್ಣನಾಯಕ ಚಿತ್ರದುರ್ಗ ಸಂಸ್ಥಾನವನ್ನು ಸುಮಾರು ಹನ್ನೊಂದು ವರುಷಗಳ ಕಾಲ ಪಾಲಿಸಿದ. ಈ ಅವಧಿಯಲ್ಲಿ ಅವನು ಷಂಷೇರ್‌ಖಾನ್, ರಣದುಲ್ಲಾಖಾನ್ ಇವರೇ ಮೊದಲಾದ ಮೊಗಲ್ ಅಧಿಕಾರಿಗಳೊಡನೆ ಹೋರಾಟ ನಡೆಸಿದನಲ್ಲದೆ, ಅಕ್ಕಪಕ್ಕದ ಸಂಸ್ಥಾನಗಳಾದ ಹರಪನಹಳ್ಳಿ, ಇಕ್ಕೇರಿ, ರಾಯದುರ್ಗ, ಗೋಲ್ಕೊಂಡ ಮತ್ತು ತರೀಕೆರೆ ಈ ಪ್ರದೇಶಗಳ ಅರಸರುಗಳ ವಿರುದ್ಧವೂ ಯುದ್ಧ ಸಾರಿದ ; ಜಯ ಗಳಿಸಿದ.

ಆದರೆ ಧಾರ್ಮಿಕವಾಗಿ ಇವನ ಕಾಲದಲ್ಲಾದ ಬದಲಾವಣೆ ಇತಿಹಾಸದೃಷ್ಟಿಯಿಂದ ಮುಖ್ಯವಾದುದು. ಚಿಕ್ಕಣ್ಣನಾಯಕನೂ ಸೇರಿದಂತೆ ರಾಜ ಕುಟುಂಬದವರು 1678ರಲ್ಲಿ ಜಂಗಮರ ಕೈಯಿಂದ ಶಿವದೀಕ್ಷೆಯನ್ನು ತೆಗೆದುಕೊಂಡು ಲಿಂಗವನ್ನು ಕಟ್ಟಿಸಿಕೊಂಡರು. ಇವರುಗಳಿಗೆ ಪಾದಪಾಲಿಸುವುದಕ್ಕೆ ಉಗ್ರ ಚನ್ನವೀರ ದೇವರೆಂಬ ವಿರಕ್ತ ಜಂಗಮರಿಗೆ ಗೊತ್ತು ಮಾಡಿ ಲಾಳಕೋಟೆ ಬಾಗಿಲಲ್ಲಿ (ಚಿತ್ರದುರ್ಗ ಕೋಟೆಯ ದಕ್ಷಿಣ ದಿಕ್ಕಿಗಿರುವ ನರಸಿಂಹನ ಬಾಗಿಲಲ್ಲಿ) ಇವರಿಗೆ ಒಂದು ಕಲ್ಲುಮಠ ಕಟ್ಟಿಸಿಕೊಟ್ಟಿದ್ದರು. ಆದರೆ ಅದೇ ವರುಷ ವೀರಶೈವ ಮತ ಸರಿಬೀಳದೆ ಹೋದುದರಿಂದ ರಾಜಪರಿವಾರದವರೆಲ್ಲರೂ ಲಿಂಗವನ್ನು ತೆಗೆದುಬಿಟ್ಟರು.[4]

ಇದರಿಂದ ತಿಳಿದುಬರುವುದೇನೆಂದರೆ, ಚಿತ್ರದುರ್ಗದಲ್ಲಿ ಇಮ್ಮಡಿ ಮುರುಘ ರಾಜೇಂದ್ರರು ಬೃಹನ್ಮಠವನ್ನು ಸ್ಥಾಪಿಸುವ ಮೊದಲೆ ಕೆಲವು ಜಂಗಮರು ಇಲ್ಲಿ ನೆಲೆಸಿದ್ದು, ರಾಜ ಮತ್ತು ಅವನ ಪರಿವಾರವನ್ನು ವೀರಶೈವ ಮತಾವಲಂಬಿಗಳಾಗುವಂತೆ ಪ್ರಭಾವ ಬೀರಿದ್ದರು. ಅನಂತರ ರಾಜನೊಂದಿಗೆ ಅವನ ಕುಟುಂಬದವರು ಆ ಮತವನ್ನು ತ್ಯಜಿಸಿದುದರ ಹಿನ್ನೆಲೆಯಾಗಲಿ, ಕಾರಣವಾಗಲಿ ತಿಳಿದುಬರುವುದಿಲ್ಲ. ಈ ಧಾರ್ಮಿಕ ವ್ಯವಹಾರದಲ್ಲಿ ಉಗ್ರ ಚನ್ನವೀರ ದೇವರ ಪಾತ್ರವನ್ನು ಪರಿಶೀಲಿಸುವುದು ಸೂಕ್ತವೆಂದು ತೋರುತ್ತದೆ.

1678 ರಲ್ಲಿ ಚಿಕ್ಕಣ್ಣನಾಯಕ ಶ್ರೀ ಕೂಡಲೀ ಶೃಂಗೇರಿ ಮಠಕ್ಕೆ ಲೇಖನ ನೀಡುವ ಕಾಲಕ್ಕೆ ಮಠಕ್ಕೆ ಗುರುಪರಂಪರೆಯಲ್ಲಿ 7ನೆಯ ಪಟ್ಟಾಧಿಕಾರಿಗಳಾಗಿದ್ದವರು (ದ್ವಿತೀಯ)

---

[3] ರಾಜಾ ಬಿಚ್ಚುಕತ್ತಿ ಪರಶುರಾಮನಾಯ್ಕ–ಚಿತ್ರದುರ್ಗದ ಗಜಕೇಸರಿ (ಭಾಗ 1) 1961, ಪು. 137

[4] ಎಂ. ಎಸ್. ಪುಟ್ಟಣ್ಣ–ಚಿತ್ರದುರ್ಗದ ಪಾಳೆಯಗಾರರು, 1924, ಪು. 29 ; *Chitradurga District Gazetteer* (Ed B. N. Sri Sathyan), 1967, p. 55 ಚಿತ್ರದುರ್ಗ ಇತಿಹಾಸದ ಅಪ್ರಕಟಿತ ದಾಖಲೆಗಳಲ್ಲೂ ಈ ಸಂಗತಿ ಉಕ್ತವಿದೆ.

ಶ್ರೀ ಶಂಕರ ಭಾರತೀ ಸ್ವಾಮಿಗಳವರು (1673–1714) ಲೇಖನದ ಪ್ರಕಾರ ನಾಯಕ 1678 ರಲ್ಲಿ ಚಿತ್ರದುರ್ಗ ಪಾಳೆಯಪಟ್ಟಿಗೆ ಸೇರಿದ ಬಾಗೂರು ಸೀಮೆಯೊಳಗಿನ ಮಾರಬಗಟ್ಟೆ ಎಂಬ ಗ್ರಾಮವನ್ನು ಸಂಸ್ಥಾನಕ್ಕೆ ದಾನಮಾಡಿದ.[5] ಈ ಲೇಖನದ ಪ್ರಾರಂಭದಲ್ಲಿ ಶೃಂಗೇರಿ ಶ್ರೀ ವಿದ್ಯಾಶಂಕರ ದೇವರನ್ನು ಹೊಗಳಿ, ಅವರ ಶ್ರೀಪಾದ ಪದ್ಮಾರಾಧಕರಾದ ಶ್ರೀ ನರಸಿಂಹಭಾರತೀ ಸ್ವಾಮಿಗಳನ್ನು ಸ್ತುತಿಸಿ, ಕಡೆಗೆ ಅವರ 'ಕರಕಮಲ ಸಂಜಾತರಾದ ಶೃಂಗೇರೀ ಶ್ರೀ ಶಂಕರ ಭಾರತೀ ಸ್ವಾಮಿಗಳ್ಳಿಯ್ಯನವರ ದಿವ್ಯ ಶ್ರೀಪಾದಪದ್ಮಂಗಳಿಗೆ'—ಎಂದು ಗೌರವದಿಂದ ಸಂಬೋಧಿಸಿ, ಅನಂತರ ದಾನಕೊಟ್ಟಿರುವುದರ ಬಗ್ಗೆ ಉಲ್ಲೇಖಿಸಲಾಗಿದೆ. ಮಾರಬಗಟ್ಟೆಯನ್ನು ದಾನಕೊಡುವ ಮೊದಲು ಸ್ವಾಮಿಗಳು ಕಳುಹಿಸಿದ ಉಡುಗೊರೆ, ವಿಭೂತಿ, ಪ್ರಸಾದವನ್ನು ಸ್ವೀಕರಿಸಿ, ಮಾರಬಗಟ್ಟೆ ಗ್ರಾಮವನ್ನು 'ಕೃಷ್ಣಾರ್ಪಣವಾಗಿ ಧಾರೆನೆರೆದು' ನಾಲ್ಕು ಮೂಲೆಗೂ ವಾಮನ ಮುದ್ರೆಕಲ್ಲು ನಡೆಸಿ ದಾನಪಟ್ಟೆಯನ್ನು ಬರೆಸಿಕೊಟ್ಟು ಸಂಗಡ ಸ್ವಾಮಿಗಳಿಗೆ ಉಡುಗೊರೆಯನ್ನೂ—ಸ್ವಾಮಿಗಳಿಂದ ಉಡುಗೊರೆ, ವಿಭೂತಿ, ಪ್ರಸಾದಗಳನ್ನು ತಂದ ಬ್ರಹ್ಮಭಟ್ಟರೆಂಬುವರೊಂದಿಗೆ—ಕಳುಹಿಸಿಕೊಡುತ್ತಾನೆ.

ಬಿಚ್ಚುಕತ್ತಿ ಭರಮಣ್ಣನಾಯಕ (1689–1720)

ಬಿಚ್ಚುಕತ್ತಿ ಭರಮಣ್ಣನಾಯಕ ಸುಮಾರು 31 ವರ್ಷಗಳ ಕಾಲ ಚಿತ್ರದುರ್ಗ ಸಂಸ್ಥಾನದ 12 ನೆಯ ದೊರೆಯಾಗಿ ಆಳ್ವಿಕೆ ನಡೆಸಿದ. ಇವನು ಪಟ್ಟಕ್ಕೆ ಬರುವ ಮುನ್ನ ಚಿತ್ರದುರ್ಗದಲ್ಲಿ ದುರಾಡಳಿತ ಪ್ರಾರಂಭವಾಗಿತ್ತು; ರಕ್ತಕ್ರಾಂತಿ ಆರಂಭಗೊಂಡಿತ್ತು. ಮುದ್ದಣ್ಣನೆಂಬ ದಳವಾಯಿ ಬಲಿಷ್ಠನಾಗಿ ಅರಸನನ್ನು ಮೂಲೆಗೊತ್ತಿ ತಾನೇ ಸರ್ವಾಧಿಕಾರಿಯಾಗಿದ್ದ. ಇವನ ಹಿಂಸಾಕೃತ್ಯಗಳಿಂದ ಹೇಸಿದ, ರೋಚ್ಚಿಗೆದ್ದ ಕೆಲವು ನಿಷ್ಠಾವಂತ ದಳವಾಯಿಗಳು ಸಮಯ ಸಾಧಿಸಿ, ಉಪಯಾಂತರದಿಂದ ಮುದ್ದಣ್ಣನನ್ನೂ ಅವನ ತಮ್ಮಂದಿರನ್ನೂ ಸೆರೆಹಿಡಿದು ಕೊಂದುಹಾಕಿದರು. ಮುದ್ದಣ್ಣನ ಉಪಟಳದಿಂದ ತಾತ್ಕಾಲಿಕವಾಗಿ ಬಿಳಿಚೋಡು ಗ್ರಾಮದಲ್ಲಿ ತಲೆಮರೆಸಿಕೊಂಡಿದ್ದ ಚಿತ್ರದುರ್ಗದ ಸಿಂಹಾಸನಕ್ಕೆ ಹಕ್ಕುದಾರನಾದ ಭರಮಣ್ಣ ನಾಯಕನನ್ನು ಕರೆತಂದು ಪಟ್ಟಗಟ್ಟಿದರು. ಈ ಹಿನ್ನೆಲೆಯಲ್ಲಿ ಭರಮಣ್ಣನಾಯಕ ಚಿತ್ರದುರ್ಗದ ಅರಸನಾಗಲು ವೀರಶೈವ ಮಠದ ಗುರುಗಳು ಆಶೀರ್ವಾದ ಮಾಡಿದರೆಂದು ತಿಳಿದುಬರುತ್ತದೆ.

ಭರಮಣ್ಣನಾಯಕ ಮತ್ತು ವೀರಶೈವ ಗುರುಗಳ ಸಂಬಂಧವನ್ನು ಕೆಲವು ಮಾತುಗಳಲ್ಲಿ ಇಲ್ಲಿ ಪ್ರಸ್ತಾಪಿಸುವುದು ಉಚಿತವಾಗಿ ತೋರುತ್ತದೆ. ಭರಮಣ್ಣನನ್ನು ಚಿತ್ರದುರ್ಗದ ರಾಜನಾಗುವೆಯೆಂದು ಆಶೀರ್ವದಿಸಿದವರು ಚಿತ್ರದುರ್ಗ ಬೃಹನ್ಮಠದ ಪರಂಪರೆಯಲ್ಲಿ ಎಂಟನೆಯವರಾಗಿ ಪಟ್ಟಾಧಿಕಾರವನ್ನು ಹೊಂದಿದ ಮುರಿಗೇಂದ್ರ ರಾಜೇಂದ್ರರು (ಸು.

---

5 ಪ್ರಾಚೀನ ಶಾಸನ ಲೇಖನ ಸಂಗ್ರಹ—ಲೇಖನ 98, ಪು. 73

1640–1710).[6] ಅನಂತರ ಮುರಿಗೇಂದ್ರರು ಮೈಸೂರು, ದೆಹಲಿ, ಹೈದರಾಬಾದ್ ಈ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡು ಹತ್ತಾರು ವರ್ಷಗಳ ತರುವಾಯ ಚಿತ್ರದುರ್ಗಕ್ಕೆ ಹಿಂತಿರುಗಿದಾಗ ಭರಮಣ್ಣನಾಯಕ ಅರಸನಾಗಿ ಆಡಳಿತ ನಿರ್ವಹಿಸುತ್ತಿದ್ದ. ಇವನು ಮುರಿಗೇಂದ್ರರನ್ನು ಗೌರವದಿಂದ ಸ್ವಾಗತಿಸಿ, ಅವರ ಮೇಲಿನ ಪೂಜ್ಯಭಾವದಿಂದ ಬೆಟ್ಟದ ಮೇಲಿನ ಸಂಪಿಗೆ (ಚಂಪಕ) ಸಿದ್ಧೇಶ್ವರ ದೇವಾಲಯದ ಪಕ್ಕದಲ್ಲೇ ಕುಸರಿಕಲೆಯ ಕಲ್ಲಿನ 360 ಅಂಕಣಗಳ ವಿಸ್ತಾರವುಳ್ಳ ಒಂದು ದೊಡ್ಡ ಮಠವನ್ನು ಕಟ್ಟಿಸಿಕೊಟ್ಟ.[7] ಅನಂತರ ಬೆಟ್ಟದಿಂದ ಅನತಿ ದೂರದಲ್ಲಿ ಅವರಿಗಾಗಿ (ಇಂದು ಶ್ರೀ ಬೃಹನ್ಮಠ ಸಂಸ್ಥಾನವೆಂದು ಕರೆಯಲ್ಪಡುತ್ತಿರುವ) ಮತ್ತೊಂದು ಮಠವನ್ನು ನಿರ್ಮಿಸಲಾಯಿತು.[8] ಅಲ್ಲದೆ ಭರಮಣ್ಣನಾಯಕ ತನ್ನ ಏಳು ಮಂದಿ ಮಕ್ಕಳ ಪೈಕಿ ಒಬ್ಬನನ್ನು ಮುರುಘರಾಜೇಂದ್ರ ಮಠಕ್ಕೆ ಕೊಟ್ಟ.[9] ಇದರಿಂದಲೂ ಮುರಿಗೇಂದ್ರರ ಬಗ್ಗೆ ನಾಯಕ ಇಟ್ಟಿದ್ದ ಗೌರವಾದರಾಭಿಮಾನಗಳು ವ್ಯಕ್ತಪಡುತ್ತವೆ.

ವೀರಶೈವ ಜಗದ್ಗುರುಗಳವರಲ್ಲಿ ಭಕ್ತಿಭಾವದಿಂದ ನಡೆದುಕೊಂಡಂತೆಯೇ ಶ್ರೀ ಕೂಡಲೀ ಶೃಂಗೇರಿ ಜಗದ್ಗುರುಗಳವರಲ್ಲಿಯೂ ಪೂಜ್ಯಭಾವದಿಂದ ನಾಯಕ ವರ್ತಿಸುತ್ತಿದ್ದ. 1689ರಲ್ಲಿ, ಅಂದರೆ ಅವನು ಪಟ್ಟಕ್ಕೆ ಬಂದ ವರ್ಷವೇ, ಚಿತ್ರದುರ್ಗ ಸೀಮೆಯ ಜಾಜೂರು ಹೋಬಳಿಯೊಳಗಿನ ಹನುಮನಪಳ್ಳಿ ಎಂಬ ಗ್ರಾಮವನ್ನು ಶೃಂಗೇರಿ ಮಠಕ್ಕೆ ಬಿಟ್ಟುಕೊಟ್ಟು ದಾನಪತ್ರವನ್ನು ಬರೆಯಿಸಿಕೊಡುತ್ತಾ,[10] ತನ್ನ ಹಿರಿಯರುಗಳಿಗೆ ಪುಣ್ಯಸುಕೃತವಾಗಬೇಕೆಂದು ಸ್ವಾಮಿಗಳನ್ನು ಬರಮಾಡಿಕೊಂಡು, ಪಾದಪೂಜೆಯನ್ನು ಮಾಡಿ, ಮುತ್ತು ರತ್ನಾಭರಣಗಳನ್ನು ಅರ್ಪಿಸಿ ಅನಂತರ ಮೇಲ್ಕಂಡ ಗ್ರಾಮವನ್ನು ದಾನವಾಗಿತ್ತನೆಂದು ತಿಳಿಯುತ್ತದೆ.[11] ಈ ದಾನಶಾಸನದಲ್ಲಿ ನಾಯಕ ವಂಶಪಾರಂಪರ್ಯವಾಗಿ ಬಂದ 'ವಾಲ್ಮೀಕಿಗೋತ್ರದ ಶ್ರೀಮನ್ಮಹಾನಾಯಕಾಚಾರ್ಯ' ಎಂಬ ತನ್ನ ಗೋತ್ರವನ್ನೂ ಬಿರುದನ್ನೂ ಬಳಸುತ್ತಾನೆ ; ತನ್ನ ಕಾಮಗೇತಿ ವಂಶವನ್ನೂ ಪ್ರಸ್ತಾಪಿಸುತ್ತಾನೆ.

---

6 ಎಲ್. ಬಸವರಾಜು (ಸಂ), 'ಮಹಾದೇವನ ಮಹಾಲಿಂಗೇಂದ್ರ ವಿಜಯ', 1971, ಪೀಠಿಕೆ, ಪು. 63-69; ಚಿತ್ರದುರ್ಗದ ಪಾಳೆಯಗಾರರು, ಪು. 37-38; ಚಿತ್ರದುರ್ಗದ ಗಜಕೇಸರಿ, ಪು. 114—ಈ ಗ್ರಂಥಗಳಲ್ಲಿ ಭರಮಣ್ಣನಾಯಕ ಚಿತ್ರದುರ್ಗದ ಅರಸನಾದ ಬಗ್ಗೆ ಬೇರೆ ಬೇರೆ ಹಿನ್ನೆಲೆಗಳನ್ನು ಕೊಡಲಾಗಿದೆ. ಆದರೆ ಅವನು ಮುರುಘರಾಜೇಂದ್ರರ ಆಶೀರ್ವಾದದಿಂದ ಅರಸನಾಗಿ ಪಟ್ಟಾಭಿಷಿಕ್ತನಾದನೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.

7 ಮಹಾದೇವನ ಮಹಾಲಿಂಗೇಂದ್ರ ವಿಜಯ, ಪೀಠಿಕೆ, ಪು. 70 ; ಬೃಹನ್ಮಠವೆಂದು ಹೆಸರು ಬರಲು ಇದೇ ಕಾರಣವೆಂಬುದು ಡಾ. ಬಸವರಾಜು ಅವರ ಅಭಿಪ್ರಾಯ.

8 ಅದೇ

9 ಹುಲ್ಲೂರು ಶ್ರೀನಿವಾಸ ಜೋಯಿಸ್ (ಸಂ), 'ಚಿತ್ರದುರ್ಗದ ಬಖೈರ್', 1968, ಪು. 51

10 ಪ್ರಾ. ಶಾ. ಲೇ. ಸಂ, ದಾನಶಾಸನ 99, ಪು. 74

11 ಚಿತ್ರದುರ್ಗದ ಗಜಕೇಸರಿ, ಪು. 141

ಹಿರೇಮದಕರಿನಾಯಕ (1720–1748)

ಭರಮಣ್ಣನಾಯಕನ ಅನಂತರ ಚಿತ್ರದುರ್ಗದ ಅರಸನಾದವನು ಹಿರೇಮದಕರಿನಾಯಕ. ಇವನೂ ಶ್ರೀ ಶಂಕರ ಭಾರತೀ ಸ್ವಾಮಿಗಳಲ್ಲಿ ಗೌರವಾದರಗಳಿಂದ ನಡೆದುಕೊಳ್ಳುತ್ತಿದ್ದ. ಈತ ಅಸಾಧಾರಣ ಪರಾಕ್ರಮಶಾಲಿಯೂ ದೈವಭಕ್ತನೂ ಆಗಿದ್ದ. ಚಂದ್ರ ಮೌಳೀಶ್ವರ ಎಂಬ ಸ್ಫಟಿಕದ ಲಿಂಗವನ್ನು ಮಾಡಿಸಿ ಬಹು ಭಕ್ತಿಯಿಂದ ಅದನ್ನು ಪೂಜಿಸುತ್ತಿದ್ದ.

ಈತನ ಕಾಲದಲ್ಲಿ ಚಿತ್ರದುರ್ಗ ಮತ್ತು ಬಿದನೂರುಗಳ ನಡುವೆ ಹಾಗೂ ಇನ್ನಿತರ ಪಾಳೆಯಗಾರರ ಮಧ್ಯೆ ಉತ್ತಮ ಸಂಬಂಧವಿರಲಿಲ್ಲ. ಸದಾ ಕಾಳಗಗಳು ನಡೆಯುತ್ತಿದ್ದವು. ಬಿದನೂರು ಅರಸರು 1741 ರಲ್ಲಿ ಚಿತ್ರದುರ್ಗ ಸಂಸ್ಥಾನಕ್ಕೆ ಸೇರಿದ ರಾಮಗಿರಿ ಕೋಟೆಯನ್ನು ಹಿಡಿದರು. 1748ರಲ್ಲಿ ಹರಪನಹಳ್ಳಿ, ರಾಯದುರ್ಗ, ಸವಣೂರು ಪಾಳೆಯಗಾರರು ಬಿದನೂರು ಅರಸರ ಸೂಚನೆಯಂತೆ ಮಾಯಕೊಂಡದ ಕೋಟೆಗೆ ಮುತ್ತಿಗೆ ಹಾಕಿದರು. ಹಿರೇಮದಕರಿ ನಾಯಕ ಅವರೊಡನೆ ಶೌರ್ಯದಿಂದ ಕಾದಿದ. ಹರಪನಹಳ್ಳಿ ಪಾಳೆಯಗಾರ ಸೋಮಶೇಖರ ನಾಯಕನೊಡನೆ ಹೋರಾಡುವ ಕಾಲದಲ್ಲಿ ಅವನಿಂದ ಹತನಾದ. ಈ ಕಾಳಗದ ಒಂದು ವೈಶಿಷ್ಟ್ಯವೆಂದರೆ ಆರ್ಕಾಟಿನ ನವಾಬನಾಗಲು ಪ್ರಯತ್ನಿಸುತ್ತಿದ್ದ ಚಂದಾಸಾಹೇಬ ತನ್ನ ಮಗ ನೊಂದಿಗೆ ಕಾಳಗದಲ್ಲಿ ಭಾಗವಹಿಸಿ, ಮದಕರಿಯ ಪರವಾಗಿ ಹೋರಾಡಿದ. ಆದರೆ ಅವನ ಮಗ ಕಾಳಗದಲ್ಲಿ ಕೊಲ್ಲಲ್ಪಟ್ಟ.[12] ಅವನ ಸಮಾಧಿ ಮಾಯಕೊಂಡದ ಬಳಿಯಿರುವ ದೊಡ್ಡಮಾಗಡಿ ಎಂಬ ಗ್ರಾಮದಲ್ಲಿದೆ. ಹಿರೇಮದಕರಿನಾಯಕ ಮರಣಹೊಂದಿದ ಅನಂತರ ಅವನ ಮಗ ಕಸ್ತೂರಿ ರಂಗಪ್ಪನಾಯಕ ಅದೇ ವರ್ಷ ಚಿತ್ರದುರ್ಗದ ಅರಸನಾಗಿ ಪಟ್ಟಾಭಿಷಿಕ್ತನಾದ. ಗುತ್ತಿ ಮತ್ತು ಆದವಾನಿಯ ಸುಬೇದಾರರನ್ನು ತನ್ನ ಕಡೆ ಮಾಡಿಕೊಂಡು ಮಾಯಕೊಂಡದ ಕೋಟೆಗೆ ಮುತ್ತಿಗೆ ಹಾಕಿದ ಶತ್ರುಗಳನ್ನು ಹೊಡೆದೋಡಿಸಿದ.

ಹಿರೇಮದಕರಿನಾಯಕ ಶ್ರೀ ಕೂಡಲೀ ಶೃಂಗೇರಿ ಮಠಾಧೀಶರೊಡನೆ ಇಟ್ಟುಕೊಂಡಿದ್ದ ಸಂಬಂಧ, ಗೌರವಾದರ ಮೊದಲಾದವು ಮುಂದಿನ ದಾನಪತ್ರಗಳಿಂದ ವ್ಯಕ್ತಪಡುತ್ತದೆ. 1729 ರಲ್ಲಿ ಇವನು ತನ್ನ ಗಿಡಗಳ ನಾಯಕ ದಳವಾಯಿ ನಾಡಗೌಡರಿಗೆ ಶ್ರೀ ನರಸಿಂಹಭಾರತಿ ಸ್ವಾಮಿ ಗಳನ್ನು ಚಿತ್ರದುರ್ಗದ ಗಡಿಯೊಳಕ್ಕೆ ಬಿಡಲು ರಹದಾರಿ ಪತ್ರವನ್ನು ಬರೆದು,[13] ಸ್ವಾಮಿ ಗಳನ್ನು ಸ್ವಾಗತಿಸಿ ಆದರಿಸಿ ಸತ್ಕರಿಸಿದ. ಬಾಗೂರು ಸೀಮೆಯ ಮಾರಬಗಟ್ಟೆ ಗ್ರಾಮವನ್ನು ದಾನಮಾಡಿ, ದಾನಪತ್ರವನ್ನೂ ಬರೆಸಿಕೊಟ್ಟ.[14] ಬಾಗೂರು ಗ್ರಾಮವನ್ನು ತಾನು ಸ್ವಾಮಿ

---

[12] P. Setu Madhava Rao, *Eighteenth Century Deccan*, 1963, p. 28

[13] ಪ್ರಾ. ಶಾ. ಲೇ. ಸಂ–ನಿರೂಪ 100, ಪು. 74

[14] ಅದೇ, ದಾನಶಾಸನ 101, ಪು. 75 ; ಮಾರಬಗಟ್ಟೆ ಗ್ರಾಮ ಚಿತ್ರದುರ್ಗ ಪ್ರಾಂತ್ಯದ ಬಾಗೂರು ಸೀಮೆಯಲ್ಲಿ ಇತ್ತು. ಅದು ಈ ನಾಯಕನ ದೊಡ್ಡಪ್ಪ ಚಿಕ್ಕಣ್ಣ ನಾಯಕನ ಕಾಲದಲ್ಲಿ (1675–1686) ಶ್ರೀ ಕೂಡಲೀ ಶೃಂಗೇರಿ ಸಂಸ್ಥಾನಕ್ಕೆ ದಾನವಾಗಿ ಕೊಡಲ್ಪಟ್ಟಿತು. ಮಧ್ಯೆ ಯಾವುದೋ ಕಾರಣದಿಂದ ಅದು ಸಂಸ್ಥಾನಕ್ಕೆ ಸೇರದೆ ಇದ್ದು,

ಗಳಿಗೆ ದಾನವಾಗಿ ಇತ್ತದ್ದನ್ನು ಕುರಿತು ಬಾಗೂರು ಸೀಮೆ ನಾಡಿಗ ಕೆಂಚನಾಗಯ್ಯ, ಶ್ಯಾನುಭೋಗ ನಾರಾಣಪ್ಪ ಇವರಿಗೂ, ಅದೇ ಸೀಮೆಯ ಮಾರಬಗಟ್ಟೆ ಗೌಡರಿಗೂ ನಿರೂಪಗಳನ್ನು ಕಳುಹಿಸಿ, "ಈ ಗ್ರಾಮವನ್ನು ಸ್ವಾಮಿಗಳ ಬಗ್ಗೆ ಬ್ರಾಹ್ಮಣರ ವಶಕ್ಕೆ ತೋರಣಾ ಹಾಕಿಸಿ ಕೊಡಿಸಿ...ಸುರಕ್ಷಿತವಾಗಿ ಸಾರೋದ್ಧಾರವಾಗಿ ನಡೆಸಿಕೊಂಡು ಬಾಹುದು"—ಎಂದು ತಾಕೀತು ಮಾಡಿದ.[15]

1746 ರಲ್ಲಿ ಗಟಪರ್ತಿಯ ಶ್ಯಾನುಭೋಗ ಅಚ್ಚಣ್ಣನಿಗೆ ನಿರೂಪವೊಂದನ್ನು ಬರೆಯಿಸಿ, ಗಟಪರ್ತಿಯ ಸುಂಕದ ರುಸುಮಿನಲ್ಲಿ ಹೇರು ಒಂದಕ್ಕೆ ವೀಸದ ಪ್ರಕಾರ ಮಠಕ್ಕೆ ಕೊಡುವಂತೆ ಏರ್ಪಡಿಸಲು ಅದರಲ್ಲಿ ಆಜ್ಞಾಪಿಸುತ್ತಾನೆ.[16] ಮತ್ತು ಅದೇ ವರ್ಷ ಬಸವಾಪಟ್ಟಣದ ಸೀಮೆಯ ದೇಶಾಯಿಕೆ ಮುತಾಲಿಕ ದೇಶಪಾಂಡೆ ಕೃಷ್ಣಯ್ಯಗೆ ನಿರೂಪವೊಂದನ್ನು ಕಳುಹಿಸಿ, ಮಲೆಬೆನ್ನೂರು ಸೀಮೆ ಮೂಕರಗೊಂದಿ (ಮೂಗನಗೊಂದಿ) ಗ್ರಾಮವನ್ನು ಹಿಂದೆ ಮಠಕ್ಕೆ ನಡೆಸಿಕೊಂಡಂತೆಯೇ ಇನ್ನು ಮುಂದೆಯೂ ಗ್ರಾಮದ ಸರದೇಸಾಯಿಕೆ, ದೇಸಾಯಿಕೆ, ನಾಡತಳವಾರಿಕೆ ಮುಂತಾದ ವರ್ತನೆ ಹೊಲಗಳನ್ನು ನಡೆಯುವಂತೆ ನಿರ್ದೇಶಿಸುತ್ತಾನೆ.[17]

1749 ರಲ್ಲಿ ಗಟಪರ್ತಿಯ ವೀರಯ್ಯ, ಮಲ್ಲಯ್ಯ, ಪದ್ಮಯ್ಯ, ಹನುಮಂತಯ್ಯ ಇವರುಗಳಿಗೆ ನಿರೂಪವೊಂದನ್ನು ಕಳುಹಿಸಿ ಗಟಪರ್ತಿಯ ಸುಂಕದಕಟ್ಟೆಯಲ್ಲಿ ಹಿಂದೆ ಮಠಕ್ಕೆ ಮೇಲುಗಾಸು ನಡೆಯುತ್ತಿದ್ದು, ತಾತ್ಕಾಲಿಕವಾಗಿ ನಿಂತುಹೋಗಿದ್ದ ಆ ಪದ್ಧತಿಯನ್ನು ಪುನಃ ಪ್ರಾರಂಭಿಸಿ ಮಠಕ್ಕೆ ಮೇಲುಗಾಸನ್ನು ನಡೆಸಿಕೊಡುವಂತೆ ಅವರಿಗೆ ಅಪ್ಪಣೆಮಾಡುತ್ತಾನೆ.[18]

ಶ್ರೀ ಕೂಡಲೀ ಶೃಂಗೇರಿ ಮಠಾಧೀಶರಿಗೆ ಈ ನಾಯಕ ತನ್ನ ಗೌರವವನ್ನು ತೋರಿಸಿದಂತೆಯೇ ಚಿತ್ರದುರ್ಗ ಬೃಹನ್ಮಠದ 10ನೆಯ ಪೀಠಾಧಿಕಾರಿಗಳಾಗಿದ್ದ ಸ್ವಾದಿಯ ಚೆನ್ನಬಸವ ಸ್ವಾಮಿಗಳಿಗೂ (1725–1730) ತನ್ನ ಭಕ್ತಿಯನ್ನು ಪ್ರದರ್ಶಿಸಿದ. ಅವರ ಸೇವೆಗೆಂದು ತನ್ನ ತಮ್ಮ ಗಂಗಣ್ಣನಾಯಕನನ್ನು ನಿಲ್ಲಿಸಿದ್ದ.[19]

ಅನಂತರ 1729 ರಲ್ಲಿ ಪುನಃ ಹಿರೇಮದಕರಿನಾಯಕ ಅದನ್ನು ದಾನಮಾಡಿದ. ಇವನು ಬರೆಸಿ ಕೊಟ್ಟ ದಾನಪತ್ರದಲ್ಲಿ "...ನಮ್ಮ ದೊಡ್ಡಪ್ಪ ಚಿಕ್ಕಣ್ಣನಾಯಕರ ವಿದ್ಯಮಾನದಲ್ಲಿ ನಿಮ್ಮ ಮಠಕ್ಕೆ ಕೊಟ್ಟುಯಿದ್ದಲ್ಲಿ..." ಎಂಬುದನ್ನು ಸ್ಪಷ್ಟವಾಗಿ ಪ್ರಸ್ತಾಪಿಸುತ್ತಾನೆ. ಬಹುಶಃ ಈತ ತನ್ನ ತಂದೆ ರಾಜಾ ಭರಮಣ್ಣನಾಯಕನ 8ನೆಯ ವರ್ಷದ ಮೃತ ತಿಥಿಕಾಲದಲ್ಲಿ ಆತನಿಗೆ ಮತ್ತು ತನ್ನ ಹಿರಿಯರುಗಳಿಗೆ ಪುಣ್ಯವಾಗಲೆಂಬ ಸದುದ್ದೇಶದಿಂದ ದಾನಮಾಡಿದನೆಂದು ತಿಳಿಯುತ್ತದೆ.

15 ಅದೇ, ನಿರೂಪ 103, 104 ; ಪು. 76

16 ಅದೇ, ನಿರೂಪ 105, ಪು. 76

17 ಅದೇ, ನಿರೂಪ 106, ಪು. 77

18 ಅದೇ ನಿರೂಪ 107, ಪು. 77

19 ಚಿತ್ರದುರ್ಗದ ಪಾಳೆಯಗಾರರು, ಪು. 53

ಕಡೇ ಮದಕರಿನಾಯಕ (1754-1779)

ಚಿತ್ರದುರ್ಗ ಸಂಸ್ಥಾನವನ್ನಾಳಿದ ಇತರ ಎಲ್ಲ ಅರಸರುಗಳಿಗಿಂತ ಬಲಶಾಲಿಯೂ ಬುದ್ಧಿವಂತನೂ ಆಗಿದ್ದವನೆಂದರೆ ಕಡೇ ಮದಕರಿನಾಯಕ. ರಾಜಾ ಮದಕರಿನಾಯಕನೆಂಬ ಅಭಿಧಾನದಿಂದ ಇವನು ಇಪ್ಪತ್ತೈದು ವರ್ಷಗಳ ಕಾಲ ಆಡಳಿತ ನಡೆಸಿದ. ಒಂದು ಕಡೆ ಮರಾಠರು, ಮತ್ತೊಂದು ಕಡೆ ಹೈದರ್‌ಅಲಿ ಇವರಿಬ್ಬರೂ ಇವನಿಂದ ಸಹಾಯ ಹೊಂದಿ ತಮ್ಮ ಸಾಮ್ರಾಜ್ಯಗಳನ್ನು ವಿಸ್ತರಿಸಲು ಪ್ರಯತ್ನಪಡುತ್ತಿದ್ದರು. ಇವರೀರ್ವರಲ್ಲಿ ನಿಜವಾದ ಶತ್ರು ಯಾರು ಎಂಬ ಅರಿವು ಮದಕರಿನಾಯಕನಿಗಿತ್ತು. ಇವರಿಬ್ಬರ ಮಧ್ಯೆ ಜಾಣ್ಮೆಯಿಂದ ವ್ಯವಹರಿಸಿ ಸ್ವಲಾಭವನ್ನು ಪಡೆಯಲು ಮತ್ತು ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಇವನು ತುಂಬ ಹೆಣಗಿದ. ಇವನು ಪರಾಕ್ರಮಿಯೂ ಸ್ನೇಹಮಯಿಯೂ ಆಗಿದ್ದ. ಆದರೆ ಶತ್ರುಗಳನ್ನು ಒಮ್ಮೆ ಹಿಂಸಿಸಲು ಪ್ರಾರಂಭಿಸಿದನೆಂದರೆ ತನಗೆ ತೃಪ್ತಿಯಾಗುವವರೆಗೂ ಹಿಂಸಿಸುತ್ತಿದ್ದ ; ನೆತ್ತರ ಹೊಳೆಯನ್ನೇ ಹರಿಸುತ್ತಿದ್ದ. ಈ ಕಾರಣಗಳಿಂದ ಇವನು ಕ್ರೂರನೂ ದುಷ್ಟನೂ ಮಹಾ ನರಹಂತಕನೂ ಆಗಿದ್ದನೆಂದು ಕೆಲವರು ಬರೆದಿದ್ದಾರೆ.

ಸ್ವಾಭಿಮಾನಿಯಾಗಿದ್ದ ನಾಯಕ ಹೈದರನೊಂದಿಗೆ ಅತೀವ ಸ್ನೇಹ ವಿಶ್ವಾಸಗಳನ್ನಿಟ್ಟುಕೊಂಡಿದ್ದರೂ ಹೈದರನ ಸಾಮ್ರಾಜ್ಯವಿಸ್ತಾರಣಾಕಾಂಕ್ಷೆ ಮತ್ತು ಕಪಟತನಗಳು ನಾಯಕನನ್ನು ಅವನ ವಿರುದ್ಧ ತಿರುಗಿ ಬೀಳುವಂತೆ ಪ್ರಚೋದಿಸಿದ್ದುವು. ಲಂಚಕೋರ ಮರಾಠಾ ಸೇನಾಧಿಕಾರಿಗಳು ನಾಯಕನಿಗೆ ದ್ರೋಹ ಬಗೆದುದರಿಂದಲೂ ಧರ್ಮದ ಹೆಸರಿನಲ್ಲಿ ಚಿತ್ರದುರ್ಗ ಕೋಟೆಯಲ್ಲಿದ್ದ ಮುಸಲ್ಮಾನ ಯೋಧರೆಲ್ಲರೂ ಒಂದುಗೂಡಿ ಹೈದರನಿಗೆ ಸಹಾಯ ಮಾಡಿದುದರಿಂದಲೂ 1779 ರಲ್ಲಿ ನಡೆದ ಕಡೆಯ ಯುದ್ಧದಲ್ಲಿ ನಾಯಕ ಸೆರೆಸಿಕ್ಕ ; ಚಿತ್ರದುರ್ಗದ ಕೋಟೆ ಹೈದರ್ ಅಲಿಯ ವಶವಾಯಿತು.

ಈ ನಾಯಕ ಶೂರನೂ ಕ್ರೂರನೂ ಆಗಿದ್ದರೂ ಅಸಾಮಾನ್ಯ ದೈವಭಕ್ತಿಯುಳ್ಳವನಾಗಿದ್ದ. ಗುರುಹಿರಿಯರನ್ನು ಮನ್ನಿಸುತ್ತಿದ್ದ. ಆದರೆ ಚಿತ್ರದುರ್ಗ ಬೃಹನ್ಮಠದ 13ನೆಯ ಪೀಠಾಧಿಕಾರಿಗಳಾಗಿದ್ದ ಮೂರು ಸಾವಿರದ ಗುರುಪಾದ ದೇಶಿಕರು (1760-1779) ಮತ್ತು ನಾಯಕನ ನಡುವೆ ಹೊಂದಾಣಿಕೆ ಇರಲಿಲ್ಲ.[20]

ಇವನು ಶ್ರೀ ಕೂಡಲೀ ಶೃಂಗೇರಿ ಮಠಕ್ಕೆ ಬಹಳ ಗೌರವಾದರಗಳಿಂದ ನಡೆದುಕೊಳ್ಳುತ್ತಿದ್ದನೆಂದು ಮಠಕ್ಕೆ ಇವನು ಕೊಟ್ಟಿರುವ ನಿರೂಪಗಳಿಂದಲೂ ಅವುಗಳಲ್ಲಿ ತಾನು ವ್ಯಕ್ತಪಡಿಸಿರುವ ಅತಿಶಯ ಭಕ್ತಿಗಳಿಂದಲೂ ಗೊತ್ತಾಗುತ್ತದೆ.

ನಾಯಕ ಚಿತ್ರದುರ್ಗದರಸನಾಗಿ ಅಧಿಕಾರ ವಹಿಸಿಕೊಂಡಾಗ ತೃತೀಯ ಶ್ರೀ ಶಂಕರ ಭಾರತೀ ಸ್ವಾಮಿಗಳವರೇ ಪೀಠಾಧಿಕಾರಿಗಳಾಗಿದ್ದರು. 1754 ರಲ್ಲಿ ತರೀಕೆರೆ ನಾಯಕರೊಂದಿಗೆ ಸಂಬಂಧ ಬೆಳೆಸಿ ಲಕ್ಕಾಂಬೆಯನ್ನು ತಾನು ವಿವಾಹವಾದ ಸಂದರ್ಭದಲ್ಲಿ ನಾಯಕ ತನ್ನ ಹಿರಿಯರಿಗೆ ಪುಣ್ಯ ಸುಕೃತವಾಗಬೇಕೆಂಬ ಉದ್ದೇಶದಿಂದ ಸ್ವಾಮಿಗಳಿಗೆ ಗುಂಟನೂರು ಮಲ್ಲಪ್ಪನ ಬಾವಿ

---

20 ಮಹಾದೇವನ ಮಹಾಲಿಂಗೇಂದ್ರ ವಿಜಯ, ಪೀಠಿಕೆ, ಪು. 95

ತೋಟದ ಭೂಮಿಯನ್ನು ಧಾರೆಯೆರೆದು ಭೂದಾನ ಪಟ್ಟಿಯನ್ನು ಬರೆಯಿಸಿ ಕೊಡುತ್ತಾನೆ.[21]

ರಾಜ್ಯಕಾರ್ಯಗಳಲ್ಲಿ ಮಗ್ನನಾದ ನಾಯಕನಿಗೆ ಸ್ವಾಮಿಗಳು ತಮ್ಮ ಸಂದೇಶಗಳನ್ನು, ಉಡುಗೊರೆಗಳನ್ನು ಆಗಾಗ್ಗೆ ಕಳುಹಿಸುತ್ತಿದ್ದು, 1757 ರಲ್ಲಿ ನಾಯಕನಿಗೆ ಸ್ವಾಮಿಗಳು ಆಶೀರ್ವಾದ ಪತ್ರಿಕೆಯನ್ನೂ ಕೆಲವು ಉಡುಗೊರೆಗಳನ್ನೂ ಮಠದ ಮಾಧವಭಟ್ಟ ಮಾಣಿಕೇಶ್ವರ ಭಟ್ಟ ಎಂಬವರ ಮುಖಾಂತರ ಕಳುಹಿಸಿಕೊಟ್ಟರು. ನಾಯಕ ವಿನಮ್ರಭಾವದಿಂದ ಅವನ್ನು ಸ್ವೀಕರಿಸಿ 'ಫಲಪ್ರಸಾದವಿಭೂತಿ ಮಂತ್ರಾಕ್ಷತೆಯೇ ಸಾಲದೆ ಉಡುಗರೆ ಕಳುಹಿಸಬೇಕೆಂಬುದೇನಿತ್ತು' ಎಂದು ತನ್ನ ವಿನಯವನ್ನು ಪ್ರಕಟಿಸಿ, ಬಂದಂಥವರೊಡನೆ ಉಡುಗೊರೆಯನ್ನು ಕೊಟ್ಟು, ಮುಂದೆಯೂ ಇದೇ ರೀತಿಯಲ್ಲಿ 'ಕ್ಷೇಮಾದಿ ಶುಭೋದಯಗಳಿಗೆ ಆಶೀರ್ವಾದ ಪತ್ರಿಕೆಯನ್ನು ಕಳುಹ ಕಟ್ಟುಮಾಡಿಸಬೇಕು' ಎಂಬ ಪ್ರಾರ್ಥನೆಯೊಡನೆ ನಿರೂಪ ಬರೆಯಿಸಿ ಕಳುಹಿಸಿಕೊಡುತ್ತಾನೆ.[22]

1759ರಲ್ಲೂ ಸ್ವಾಮಿಗಳಿಂದ ಬಂದ ಉಡುಗೊರೆಯನ್ನು ನಾಯಕ ಸ್ವೀಕರಿಸಿ, ಮಠದಿಂದ ಮಾಣಿಕೇಶ್ವರ ಭಟ್ಟ ಮತ್ತು ಮಹಾದೇವಭಟ್ಟರೆಂಬವರೊಡನೆ ಮರುಪತ್ರ(ನಿರೂಪ) ಮತ್ತು ಬದಲು ಉಡುಗೊರೆಗಳನ್ನು ಕಳುಹಿಸಿಕೊಟ್ಟದಕ್ಕೆ ಲೇಖನವಿದೆ. ಈ ಲೇಖನದಲ್ಲೂ ಮಠದ ಬಗ್ಗೆ ತನಗಿರುವ ಅಭಿಮಾನವನ್ನು ವ್ಯಕ್ತಪಡಿಸಿದ.[23]

ಮದಕರಿನಾಯಕನ ಏಕೈಕ ಸಹೋದರನ ಹೆಸರು ಪರಶುರಾಮನಾಯಕನೆಂದು 1760ರಲ್ಲಿ ನಾಯಕ ಮಠಕ್ಕೆ ಕೊಟ್ಟ ಲೇಖನದಲ್ಲಿ, ಈ ಪರಶುರಾಮನಾಯಕನ ವಿವಾಹ ಸಂದರ್ಭದಲ್ಲಿ ಸ್ವಾಮಿಗಳು ವಸ್ತ್ರ ಹಾಗೂ ಮಂತ್ರಾಕ್ಷತೆಯನ್ನು ಕಳುಹಿಸಿಕೊಟ್ಟದ್ದರ, ನಾಯಕ ಬದಲು ವಿವಾಹತದಂಗ ವಸ್ತ್ರ ಉಡುಗೊರೆಯನ್ನು ಮಠದಿಂದ ಆಗಮಿಸಿದ ಮಾಧವಭಟ್ಟ ಮತ್ತು ಮಾಣಿಕಭಟ್ಟರ ಸಂಗಡ ಕಳುಹಿಸಿಕೊಟ್ಟದ್ದರ[24] ಪ್ರಸ್ತಾಪವಿದೆ.

ಸುಮಾರು 1763ರಲ್ಲಿ ಈ ನಾಯಕ ಮಠಕ್ಕೆ ಕೊಟ್ಟ ಲೇಖನದಲ್ಲಿ ತನ್ನ ದಿಗ್ವಿಜಯದ ಬಗ್ಗೆ ಹೇಳಿದ್ದಾನೆ.[25] 1762ರಲ್ಲಿ ಪ್ರಥಮಬಾರಿಗೆ ಹೈದರ್ ಅಲಿ ತನ್ನ ಒಂದು ಲಕ್ಷ ದಂಡಿನೊಡನೆ ಚಿತ್ರದುರ್ಗಕ್ಕೆ ಮುತ್ತಿಗೆ ಹಾಕಲು ಬಂದ. ಸದ್ಯಕ್ಕೆ ಬಂದ ಗಂಡಾಂತರ ತಪ್ಪಿದರೆ ಸಾಕೆಂದುಕೊಂಡು ಚಿತ್ರದುರ್ಗ ಸಂಸ್ಥಾನದ ಸರದಾರರೂ ಸೇನಾಧಿಪತಿಗಳೂ ಮುನ್ಸಬ್‌ದಾರರೂ ಆಪ್ತಾಲೋಚನೆಮಾಡಿ ವರ್ಷಕ್ಕೆ ಒಂದು ಲಕ್ಷ ವರಹ ಖಂಡಣಿ ಕೊಡುವುದಾಗಿ ಅವನೊಡನೆ ಒಪ್ಪಂದ ಮಾಡಿಕೊಂಡರು. ಹೈದರ್ ಅಲ್ಲಿಂದ ಸವಣೂರಿನ ನೈಋತ್ಯಕ್ಕಿರುವ

---

21 ಪ್ರಾ. ಶಾ. ಲೇ. ಸಂ.—ದಾನಶಾಸನ 108, ಪು. 77

22 ಅದೇ, ಲೇಖನ 109, ಪು. 78

23 ಅದೇ, ಲೇಖನ 110, ಪು. 78–79

24 ಅದೇ, ಲೇಖನ 111, ಪು. 79 ; ಈ ಲೇಖನದಲ್ಲಿ ಪರಶುರಾಮನಾಯಕನ ವಿವಾಹ ಯಾವ ಸಂಸ್ಥಾನದ ಕನ್ಯೆಯೊಡನೆ ನಡೆಯಿತೆಂಬುದರ ಬಗ್ಗೆ ವಿವರವಿಲ್ಲ ; ಚಿತ್ರದುರ್ಗ ಇತಿಹಾಸಕ್ಕೆ ಸಂಬಂಧಿಸಿದಂತೆ ಉಪಲಬ್ಧವಿರುವ ದಾಖಲೆಗಳಲ್ಲೂ ಸಿಕ್ಕುವುದಿಲ್ಲ.

25 ಪ್ರಾ. ಶಾ. ಲೇ. ಸಂ. ಲೇಖನ 112, ಪು. 80

ಬಂಕಾಪುರದತ್ತ ತನ್ನ ಪ್ರಯಾಣವನ್ನು ಮುಂದುವರಿಸಿ, ಅಲ್ಲಿನ ಕೋಟೆಯನ್ನು ಹಿಡಿಯಲಾಗದೆ ಸಹಾಯಕ್ಕಾಗಿ ಮದಕರಿನಾಯಕನನ್ನು ಕೇಳಿಕೊಂಡ. ಚಿತ್ರದುರ್ಗದ ಸೇನೆ ಬಂಕಾಪುರವನ್ನು ಮುತ್ತಿ ಸ್ವಾಧೀನಪಡಿಸಿಕೊಂಡು ಹೈದರನಿಗೆ ಬಿಟ್ಟುಕೊಟ್ಟಿತು[26] ಮದಕರಿನಾಯಕನ ಸಾಹಸಕ್ಕೆ ಬೆರಗಾದ ಹೈದರ್ ಒಂದು ಆನೆ, ಎರಡು ಕುದುರೆ, ಅರಳೆಮುತ್ತಿನ ಸರ, ವಜ್ರದ ಹುಮಾಗಿರಿ, ಶಿರಪೇಷ ಇತ್ಯಾದಿಗಳನ್ನು ಕೊಟ್ಟು ಗೌರವಿಸಿದ. ನಾಯಕ ಅಲ್ಲಿಂದ ಹಿಂದಿರುಗಿ ಬರುವಾಗ ಹೊಳಲು ಮತ್ತು ಮೈಲಾರಗಳನ್ನು ತನ್ನ ವಶಪಡಿಸಿಕೊಂಡು ಬಂದ.[27] ಈ ಸಂದರ್ಭದಲ್ಲಿ (ಮೇಲಿನ ಲೇಖನದಲ್ಲಿ) ಶಂಕರಭಾರತೀ ಸ್ವಾಮಿಗಳು ನಾಯಕನನ್ನು ಅಭಿನಂದಿಸಿದ್ದಕ್ಕೆ, ಮತ್ತು ಹಿಂದೆ ತಮ್ಮ ಮಠಕ್ಕೆ ನಡೆಯುತ್ತಿದ್ದ ಮೈಲಾರಗ್ರಾಮ ಶತ್ರುವಶವಾಗಿದ್ದು, ಇದೀಗ ನಾಯಕ ಅದನ್ನು ಪುನಃ ಆಕ್ರಮಿಸಿಕೊಂಡಿದ್ದರಿಂದ ಆ ಗ್ರಾಮವನ್ನು ಹಿಂದಿನಂತೆ ಮಠಕ್ಕೆ ನಡೆಯುವಂತೆ ಏರ್ಪಡಿಸಲು ಅವನಿಗೆ ಕೇಳಿದ್ದಕ್ಕೆ, ನಾಯಕ ಸಂತೋಷದಿಂದ 'ಯೇನೊಂದು ಆಗುವ ಶ್ರೇಯಸ್ಸೂ ತಮ್ಮ ಆಶ್ವೀರ್ವಾದಾನುಗ್ರಹದಿಂದಲ್ಲದೆ ಯಿತರವಲ್ಲ. ಹೀಗಿರುವಲ್ಲಿ ಹೊಳಲುಯಾದರ ಮೈಲಾರ ಯಾರಡು ಸಕಲವೂ ತಮ್ಮದೇನೆ ಇದ್ದೀತು' ಎಂದು ವಿನಯಪೂರ್ವಕವಾಗಿ ನಿರೂಪ ಬರೆಯಿಸಿ, ಮಠದಿಂದ ಬಂದಿದ್ದ ದೇವಗಿರಿ ಮಲ್ಲಭಟ್ಟರೆಂಬುವರೊಡನೆ ಉಡುಗೊರೆಯನ್ನು ಕಳುಹಿಸಿಕೊಟ್ಟ.

'ಶ್ರೀ ಮೈಲಾರಲಿಂಗ'ವೆಂಬ ಅಂಕಿತದಲ್ಲಿ 1766ರಲ್ಲಿ ಮಠಕ್ಕೆ ಕೊಟ್ಟ ನಿರೂಪದಲ್ಲಿ, ಮೈಲಾರಗ್ರಾಮ ಮತ್ತು ಮೇಲುಗಾಸಿನ ಬಗ್ಗೆ ಪ್ರಸ್ತಾಪಿಸಿ, ಗ್ರಾಮವನ್ನು ಪೂರ್ವ ಪ್ರಕಾರದಂತೆ ನಡೆಸಿಕೊಂಡು ಬರುವಂತೆ ಪ್ರಾರ್ಥಿಸಿ 'ಮಠದ ಧರ್ಮಕ್ಕೆ ಶಿವಾರ್ಪಿತವಾಗಿ' ಕೊಟ್ಟ.[28]

ಇದೇ ವರ್ಷದಲ್ಲಿ ಕೊಟ್ಟಿರುವ ಲೇಖನವೊಂದು ಬಾಗೂರು ಸೀಮೆಯಲ್ಲಿ ಮಾರಬಗಟ್ಟೆ ಗ್ರಾಮಕ್ಕೆ ಸಂಬಂಧಿಸಿದುದಾಗಿದೆ. ಬಾಗೂರು ಸೀಮೆಯ ನಾಡಗೌಡ ಹಲಗಯ್ಯನೆಂಬುವನಿಗೆ ನಿರೂಪ ಬರೆದು, ಹಿಂದೆ ಆ ಗ್ರಾಮವನ್ನು ಮಠಕ್ಕೆ ನಡೆಯುವಂತೆ ಏರ್ಪಾಟು ಮಾಡಿದ್ದು, ಹಿಂದಿನಂತೆಯೇ ಮಠಕ್ಕೆ ನಡೆಸಿಕೊಡಬೇಕೆಂದು ನಾಯಕ ತಾಕೀತು ಮಾಡಿದ.[29]

---

26 ಚಿತ್ರದುರ್ಗದ ಪಾಳೆಯಗಾರರು, ಪು. 65-66

27 ಚಿನ್ನದ ಮನೆ ರಾಮಪ್ಪನೆಂಬವನು ಬರೆದ 'ಚಿನ್ಮೂಲಾದ್ರಿ ಗಿರಿದುರ್ಗದಲ್ಲಿ ಆಳಿದ ಹಿಂದಿನ ಅರಸರುಗಳು' ಎಂಬ ಕೈಬರವಣಿಗೆಯ ಅಪ್ರಕಟಿತ ದಾಖಲೆ

28 ಪ್ರಾ.ಶಾ.ಲೇ.ಸಂ.-ನಿರೂಪ 113, ಪು. 80

29 ಅದೇ, ಲೇಖನ 114, ಪು. 81 ; ಈ ಹಿಂದೆ ಪ್ರಸ್ತಾಪಿಸಿರುವ 98, 101, 103 ಮತ್ತು 104 ಸಂಖ್ಯೆಯ ನಿರೂಪ, ದಾನಶಾಸನಗಳಲ್ಲಿ ಮೇಲಿನಂತೆಯೇ ಮಾರಬಗಟ್ಟೆ ಗ್ರಾಮವನ್ನು ಮಠಕ್ಕೆ ದತ್ತಿಬಿಟ್ಟುಕೊಟ್ಟ ಬಗ್ಗೆ ಉಲ್ಲೇಖವಿದೆ. ಕಡೆಯ ಮದಕರಿನಾಯಕನ ಕಾಲಕ್ಕೆ ಪುನಃ ಆ ಗ್ರಾಮವನ್ನು ಮಠಕ್ಕೆ ನಡೆಯುವಂತೆ ವ್ಯವಸ್ಥೆ ಮಾಡುತ್ತಾರೆ. ಇದಕ್ಕೆ ಕಾರಣವಾದರೂ ಶಂಕರಭಾರತೀ ಸ್ವಾಮಿಗಳು ಆ ವರುಷದಲ್ಲಿ (1766) ಮೃತಪಟ್ಟು, ಅವರ ಶಿಷ್ಯರಾದ ಪಂಚಮ ನರಸಿಂಹಭಾರತೀ ಸ್ವಾಮಿಗಳು ಗುರುಗಳಾಗಿ ನೇಮಕಗೊಂಡಿದ್ದರಿಂದ ಮಾರಬಗಟ್ಟೆ ಗ್ರಾಮವನ್ನು ಮತ್ತೊಮ್ಮೆ ಅವರ ಹೆಸರಿನಲ್ಲಿ ದಾನ ಮಾಡುವ ಪ್ರಸಂಗ ಒದಗಿ ಬಂದಿತೆಂದು ತೋರುತ್ತದೆ.

ತೃತೀಯ ಶ್ರೀ ಶಂಕರ ಭಾರತೀ ಸ್ವಾಮಿಗಳವರು 1766ರಲ್ಲಿ ಚಿತ್ರದುರ್ಗದಲ್ಲಿ ಬ್ರಹ್ಮೀಭೂತರಾದರು. ಮದಕರಿನಾಯಕ ಅವರ ಸಮಾಧಿಗೆ ಏರ್ಪಾಡು ಮಾಡಿದ.[30] ಶ್ರೀ ಮಠದಲ್ಲಿ ಇಂದಿಗೂ ಅವರ ಸಮಾಧಿಯನ್ನು ನಾವು ನೋಡಬಹುದು.

ಶಂಕರ ಭಾರತೀ ಸ್ವಾಮಿಗಳ ಶಿಷ್ಯರಾದ ಶ್ರೀ ನರಸಿಂಹಭಾರತೀ ಸ್ವಾಮಿಗಳು (1753–1772) ಆರಾಧನೆ ತೀರಿಸಿಕೊಂಡು ಸಂಚಾರ ಹೊರಡುವ ಮುನ್ನ ಸಂಸ್ಥಾನದ ಪಾರುಪತ್ತೆಗಾರರು ನಾಡಗೌಡರು ಮತ್ತು ಶ್ಯಾನಭೋಗರಿಗೆ ನಾಯಕ ನಿರೂಪ ಬರೆಯಿಸಿ ಸ್ವಾಮಿಗಳ ದಿಗ್ವಿಜಯದ ಬಗ್ಗೆ ತಿಳಿಸಿದ. ಸ್ವಾಮಿಗಳು ಅವರಲ್ಲಿಗೆ ಬಂದಾಗ ಕಾಯಿ, ಸೊಪ್ಪು, ಹಾಲು, ಮೊಸರು, ಕುಂಬಾರ ಸ್ವರೂಪು, ಅಡಿಗಬ್ಬು, ಹುಲ್ಲು ಮುಂತಾದುವನ್ನು ಪರಾಮರಿಕೆ ಮಾಡಿ ಸುರಕ್ಷಿತವಾಗಿ ಮುಂದಕ್ಕೆ ಕಳುಹಿಸಿಕೊಡಬೇಕೆಂದು ಸೂಚಿಸಿದ.[31]

ಇದೇ ವರ್ಷದಲ್ಲಿ (1766) ಕೊಟ್ಟಿರುವ ಮತ್ತೊಂದು ನಿರೂಪದಲ್ಲಿ ಸ್ವಾಮಿಗಳು ದಿಗ್ವಿಜಯ ಹೊರಟ ಕಾಲಕ್ಕೆ ಏನೇನು ವ್ಯವಸ್ಥೆ ಮಾಡಬೇಕೆಂದು ಸಂಸ್ಥಾನದ ಗಡಿಗಳ ನಾಯಕ ದಳವಾಯಿ ಮತ್ತು ರಾಣಿವೆಗುರಿಕಾರರಿಗೆ ನಾಯಕ ಅಪ್ಪಣೆ ನೀಡಿರುವ ವಿಚಾರ ಉಕ್ತವಾಗಿದೆ. ಸ್ವಾಮಿಗಳ ದಿಗ್ವಿಜಯಕಾಲದಲ್ಲಿ ವಾಲಗ ಭಜಂತ್ರಿಯೊಡನೆ ಅವರನ್ನು ಸ್ವಾಗತಿಸಿ, ಕೋಟೆಯಲ್ಲಿ ಸುರಕ್ಷಿತವಾಗಿರುವ ಒಳ್ಳೆಯ ಮನೆಯಲ್ಲಿ ಅವರಿಗೆ ವ್ಯವಸ್ಥೆ ಮಾಡುವಂತೆ ನಾಯಕ ನಿರ್ದೇಶಿಸಿದ. ನಾಡಿಗರ ಮುಖಾಂತರ ಅವರಿಗೆ ಆವಶ್ಯಕವಿರುವ ಸಾಮಗ್ರಿಯೆಲ್ಲವನ್ನೂ ತರಿಸಿಕೊಡಿಸಿ, ಸ್ವಾಮಿಗಳು ಅಲ್ಲಿಂದ ಹೋಗುವಾಗ ಅವರ ಸಂಗಡ ಉತ್ತಮರಾದ ಇಪ್ಪತ್ತೈದು ಮಂದಿ ವಾಲೇಕಾರರನ್ನು ಕೊಟ್ಟು ಸುರಕ್ಷಿತವಾಗಿ ಕಳುಹಿಸಿ ಕೊಡಬೇಕೆಂದೂ ಸ್ವಾಮಿಗಳು ಇಚ್ಛೆಪಟ್ಟರೆ ಇನ್ನೂ ನಾಲ್ಕು ದಿವಸ ಊರಿನಲ್ಲಿಯೇ ಇಟ್ಟುಕೊಂಡು ಅವರನ್ನು ನೋಡಿಕೊಳ್ಳುವುದೆಂದೂ ತಿಳಿಸಿದ.[32]

1767ರಲ್ಲಿ ನೀಡಿರುವ ನಿರೂಪದಲ್ಲಿ ಚಿತ್ರದುರ್ಗ ಸೀಮೆಯ ಗಡಿಗಳ ನಾಯಕ ದಳವಾಯಿ ಮತ್ತು ರಾಣಿವೆಗುರಿಕಾರರಿಗೆ ಮಠದಿಂದ ಬಂದ ಬ್ರಾಹ್ಮಣರನ್ನು ತಮ್ಮ ಶಿಷ್ಯರಿಂದ ದೀಪಾರಾಧನ ಭಿಕ್ಷಾ, ಪಾದಪೂಜೆಹಣ ತೆಗೆದುಕೊಳ್ಳುವುದಕ್ಕೋಸ್ಕರ ಅವರನ್ನು ಊರಿನಲ್ಲಿ ಬಿಟ್ಟುಕೊಳ್ಳಬೇಕೆಂದು ಅಪ್ಪಣೆ ನೀಡಲಾಗಿದೆ.[33] ಈ ವರುಷವೇ ಕೊಟ್ಟಿರುದ ಇನ್ನೊಂದು ನಿರೂಪದಲ್ಲಿ ಗಟ್ಟಿಪರ್ತೆ ಗ್ರಾಮದ ಮಾರ್ಗಸುಂಕದ ಕಲ್ಲಯ್ಯ, ಕಟ್ಟಿ ಮಣೇಗಾರ ಮತ್ತು ಶ್ಯಾನುಭೋಗರಿಗೆ ನಿರೂಪವೊಂದನ್ನು ಕಳುಹಿಸಿ, ಅದುವರೆಗೂ ಆ ಕಟ್ಟೆಯಿಂದ ಮಠಕ್ಕೆ ಮೇಲುಗಾಸು ನಡೆಯುತ್ತಿದ್ದು, ಆ ವರುಷದಲ್ಲೇ ಹುಟ್ಟುವಳಿ ಆದಂತಹುದನ್ನು ನಿಗದಿ ಮಾಡಿ ಸಾರೋದ್ಧಾರವಾಗಿ ನಡೆಯಿಸಿಕೊಂಡು ಬರಲು ವ್ಯವಸ್ಥೆ ಮಾಡುವಂತೆ ತಿಳಿಸುತ್ತಾನೆ.[34]

---

30 ಅದೇ : ಪ್ರಸ್ತಾವನೆ, ಪು. 29

31 ಅದೇ : ನಿರೂಪ 115, ಪು. 81

32 ಅದೇ : ನಿರೂಪ 116, ಪು. 81

33 ಅದೇ : ನಿರೂಪ 117, ಪು. 82

34 ಅದೇ : ನಿರೂಪ 118, ಪು. 82

ಚಿತ್ರದುರ್ಗ ರಾಜಧಾನಿಯಿಂದ ಮಠಕ್ಕೆ ಕಳುಹಿಸಿಕೊಟ್ಟ ನಿರೂಪಗಳಲ್ಲಿ ಕಡೆಯ ಮೂರು ಲೇಖನಗಳು[35] ಸ್ವಾಮಿಗಳ ಬಗ್ಗೆ ನಾಯಕ ಇಟ್ಟಿದ್ದ ಭಕ್ತಿ ವಿಶ್ವಾಸಗಳ ದ್ಯೋತಕವಾಗಿವೆ; ಹಾಗೂ ಸಾಮ್ರಾಜ್ಯದ ಅಳಿಗಾಲದ ವರೆವಿಗೂ ಎರಡು ಸಂಸ್ಥಾನಗಳ ನಡುವೆ (ಅಥವಾ ಅರ ಮನೆ–ಗುರುಮನೆಗಳ ನಡುವೆ) ಉಳಿದುಬಂದಿದ್ದ ಸಂಬಂಧವನ್ನು ಗುರುತಿಸಲು ಸಹಾಯಕ ವಾಗಿವೆ.

ಕಡೆಯದಾಗಿ ಇನ್ನೊಂದು ವಿಚಾರವನ್ನು ಇಲ್ಲಿ ಪ್ರಸ್ತಾಪಿಸಬಹುದು. ಶ್ರೀ ಕೂಡಲೀ ಶೃಂಗೇರಿ ಮಠಾಧೀಶರು ಮತ್ತು ಚಿತ್ರದುರ್ಗದ ವೀರಶೈವ ಗುರುಗಳೊಂದಿಗೆ ಪಾಳೆಯಗಾರರು ಯಾವ ರೀತಿಯಲ್ಲಿ ಧಾರ್ಮಿಕ ಸಂಬಂಧವನ್ನು ಹೊಂದಿದ್ದರೆಂಬುದನ್ನು ಸಂಕ್ಷಿಪ್ತವಾಗಿಯಾದರೂ ಈವರೆಗೆ ಅರಿತುಕೊಂಡಿದ್ದಾಗಿದೆ. ಈಗ ಮೇಲ್ಕಂಡ ಧಾರ್ಮಿಕ ಗುರುಗಳು ಅದೆಷ್ಟರಮಟ್ಟಿಗೆ ನಾಯಕರ ಆಡಳಿತ ವ್ಯವಹಾರದಲ್ಲಿ ಪಾಲ್ಗೊಳ್ಳುತ್ತಿದ್ದರೆಂಬುದನ್ನು ಇಲ್ಲಿ ವಿವೇಚಿಸುವುದು ಸೂಕ್ತವೆನಿಸುತ್ತದೆ.

ಚಿತ್ರದುರ್ಗ ಪಾಳೆಯಗಾರರು ಕಾಲ ಕಾಲಕ್ಕೆ ದಾನ, ದತ್ತಿಗಳನ್ನು ಮಠಗಳಿಗೆ ಬಿಟ್ಟು ಕೊಡುತ್ತ ಭಕ್ತ್ಯಾತಿಶಯಗಳನ್ನು ವ್ಯಕ್ತಪಡಿಸುತ್ತ ಬಂದಿದ್ದರೂ, ಮಠಾಧೀಶರು ತಮ್ಮ ಮೆಚ್ಚಿಗೆ ಯನ್ನು ಆಶೀರ್ವಾದದ ಮೂಲಕ, ಮರು ನಿರೂಪಗಳನ್ನು ಬರೆಯಿಸಿಕೊಡುವುದರ ಮೂಲಕ, ಉಡುಗೊರೆಗಳನ್ನು ಕಳುಹಿಸಿಕೊಡುವುದರ ಮೂಲಕ ವ್ಯಕ್ತಪಡಿಸುತ್ತಿದ್ದರೂ ರಾಜಕೀಯ ವ್ಯವ ಹಾರಗಳಲ್ಲಿ ನೇರವಾಗಿ ಭಾಗವಹಿಸುತ್ತಿದ್ದುದು ಅಪರೂಪವೆನ್ನಬಹುದು. ಶ್ರೀ ಕೂಡಲೀ ಶೃಂಗೇರಿ ಮಠಾಧೀಶರ ವಿಚಾರದಲ್ಲಿ ಹೇಳುವುದಾದರೆ ಪಾಳೆಯಗಾರರ ರಾಜಕೀಯದಲ್ಲಿ ಅವರು ಪ್ರತ್ಯಕ್ಷ ಪ್ರವೇಶಿಸಿದ್ದು ಇಲ್ಲವೆಂದೇ ಹೇಳಬೇಕಾಗುತ್ತದೆ. ಆದರೂ ಕಾಲಕಾಲಕ್ಕೆ ತಮ್ಮ ಸಲಹೆ-ಸೂಚನೆಗಳನ್ನು ನಾಯಕರಿಗೆ ನೀಡುತ್ತಿದ್ದಿರಬೇಕೆಂದು ಭಾವಿಸಿಕೊಳ್ಳಬಹುದು.

ಆದರೆ ಅದೇ ಸಮಯದಲ್ಲಿ ಚಿತ್ರದುರ್ಗ ಬೃಹನ್ಮಠದ ವೀರಶೈವ ಜಗದ್ಗುರುಗಳ ಮತ್ತು ಪಾಳೆಯಗಾರರ ಧಾರ್ಮಿಕ ಸಂಬಂಧದೊಂದಿಗೆ ರಾಜಕೀಯ ಸಂಬಂಧವನ್ನೂ ನಾವು ಗುರುತಿಸ ಬಹುದಾಗಿದೆ. ಬೃಹನ್ಮಠಾಧೀಶರು ನಾಯಕರ ಆಡಳಿತದಲ್ಲಿ ಮಧ್ಯೆ ಪ್ರವೇಶಿಸಿ ಸಲಹೆಗಳನ್ನೂ ಹಿತವಚನಗಳನ್ನೂ ನೀಡುತ್ತಿದ್ದು ಕೆಲವೊಮ್ಮೆ ಅರಸ ಮತ್ತು ಮಠಾಧಿಕಾರಿಗಳ ನಡುವೆ ಒಮ್ಮತ ವಿಲ್ಲದಿದ್ದ ಸಂದರ್ಭದಲ್ಲಿ ಅರಮನೆ–ಗುರುಮನೆಗಳ ನಡುವೆ ವಿರಸ ಮೂಡುತ್ತಿತ್ತು. ಅತ್ಯಂತ ಸ್ವಾಭಿಮಾನಿಗಳಾಗಿದ್ದ ಗುರುಗಳು ತಮ್ಮ ಮಠವನ್ನೂ ರಾಜಧಾನಿಯನ್ನೂ (ಚಿತ್ರದುರ್ಗ) ಬಿಟ್ಟು ದೂರ ಹೋದುದುಂಟು. ಮತ್ತೆ ಆದರದ ಕರೆ ಬಂದಾಗಲೂ ವಿಚಲಿತರಾಗದೆ ತಮ್ಮ ತನವನ್ನು ಕಾಪಾಡಿಕೊಂಡುದುಂಟು. ಇದಕ್ಕೆ ದೃಷ್ಟಾಂತವಾಗಿ, ಚಿತ್ರದುರ್ಗವನ್ನಾಳುತ್ತಿದ್ದ ಇಮ್ಮಡಿ ಕಸ್ತೂರಿ ರಂಗಪ್ಪನಾಯಕ (1748–1754) ಮತ್ತು ಆಗ ಬೃಹನ್ಮಠದ ಹನ್ನೆರಡನೆಯ ಪೀಠಾಧಿಕಾರಿಗಳಾಗಿದ್ದ ಗುರುಪಾದ ದೇಶಿಕರು (ಸು. 1750–1760) ಇವರು ಚಿತ್ರದುರ್ಗ ಸೀಮೆಗೆ ಸೇರಿದ್ದ ಕೋಗುಂಟೆ ಎಂಬ ಗ್ರಾಮದಲ್ಲಿದ್ದ ಒಬ್ಬ ವೇಶ್ಯೆಯ ಸಂಬಂಧದಲ್ಲಿ ಅಲ್ಲಿಯ ವೃದ್ಧರು ಮತ್ತು ಯುವಕರು ಮಾಡಿದ ಆರೋಪ ಮತ್ತು ಪ್ರತ್ಯಾರೋಪಗಳ ವಿಚಾರದಲ್ಲಿ

---

[35] ಅದೇ : ಲೇಖನ 119, 120, 121, ಪು. 82–84

ಮಧ್ಯೆ ಪ್ರವೇಶಿಸಿ, ಅಭಿಪ್ರಾಯಭೇದದಿಂದ ಈರ್ವರ ನಡುವೆ ವೈಮನಸ್ಯ ಉಂಟಾದುದನ್ನೂ ಅರಸು ಮುನಿದುದರಿಂದ ಗುರುಪಾದ ದೇಶಿಕರು ಚಿತ್ರದುರ್ಗವನ್ನು ತೊರೆದು ಕರ್ಜಗಿ ತಾಲ್ಲೂಕಿನ ಗುಣಮೆಟ್ಟುಕಲ್ಲು ಎಂಬ ಊರಿಗೆ ಹೊರಟು ಕಡೆಗೆ ಅಲ್ಲಿಯೇ ಶಿವೈಕ್ಯರಾದುದನ್ನೂ ಉಲ್ಲೇಖಿಸಬಹುದು.[36]

ಅಂತೆಯೇ ಚಿತ್ರದುರ್ಗ ಪಾಳೆಯಪಟ್ಟಿನ ಕಡೆಯ ಅರಸನಾಗಿದ್ದ ರಾಜಾ ವೀರ ಮದಕರಿ ನಾಯಕನೂ (1754–1779) ಗುರುಪಾದ ದೇಶಿಕರ ತರುವಾಯ ಪೀಠಾಧಿಕಾರಿಗಳಾಗಿ ಬಂದ ಮೂರುಸಾವಿರದ ಗುರುಪಾದದೇಶಿಕರೊಂದಿಗೆ (ಸು. 1760–1779) ದ್ವೇಷ ಕಟ್ಟಿಕೊಂಡ. ಇದಕ್ಕೆ ಕಾರಣವಾದರೂ ಇಮ್ಮಡಿ ಕಸ್ತೂರಿ ರಂಗಪ್ಪನಾಯಕನ ಅನಂತರ ಚಿತ್ರದುರ್ಗದ ಸಿಂಹಾಸನಕ್ಕೆ ಯಾರು ಹಕ್ಕುದಾರರಾಗಬೇಕೆಂಬ ವಿಚಾರದಲ್ಲಿ ಗುರುಪಾದದೇಶಿಕರು ತನ್ನ ಹೆಸರನ್ನು ಸೂಚಿಸದಿದ್ದುದರಿಂದ ಅದು ಮದಕರಿನಾಯಕನನ್ನು ರೇಗಿಸಿತ್ತಲ್ಲದೆ ಅವರ ಅನಂತರ ಬಂದ ಮೂರುಸಾವಿರದ ಗುರುಪಾದದೇಶಿಕರೊಂದಿಗೆ ಅವನು ಉತ್ತಮ ಸಂಬಂಧವನ್ನು ಬೆಳೆಸಲಿಚ್ಛಿಸಲಿಲ್ಲವೆಂದು 'ಮಹಾಲಿಂಗೇಂದ್ರ ವಿಜಯ'ದಲ್ಲಿ ಹೇಳಿದೆ.[37]

ಹೀಗೆ ಧಾರ್ಮಿಕ ವಿಚಾರಗಳಲ್ಲೂ ರಾಜಕೀಯ ವ್ಯವಹಾರಗಳಲ್ಲೂ ಚಿತ್ರದುರ್ಗ ಬೃಹನ್ಮಠದ ಅಧಿಪತಿಗಳು ತಮಗೆ ಸಾಧ್ಯವಾದಷ್ಟು ರೀತಿಯಲ್ಲಿ ಭಾಗವಹಿಸುತ್ತಿದ್ದು ಅರಸರಿಗೆ ಸಹಾಯ ಮಾಡುತ್ತಿದ್ದರು. ಈ ದೃಷ್ಟಿಯಿಂದ ಅವರ ಕಾರ್ಯ ಸ್ತುತ್ಯಾರ್ಹವಾಗಿದೆ. ಈ ದಿಶೆಯಲ್ಲಿ ಶ್ರೀ ಕೂಡಲೀ ಶೃಂಗೇರಿ ಮಠಾಧೀಶರ ವರ್ತನೆಯನ್ನು ಮತ್ತೊಂದು ಬಾರಿ ಪರಿಶೀಲಿಸುವುದು ಆವಶ್ಯಕವೆಂದೆನಿಸುತ್ತದೆ.

---

[36] ವಿವರಗಳಿಗೆ : ಮಹಾದೇವನ ಮಹಾಲಿಂಗೇಂದ್ರ ವಿಜಯ, ಪೀಠಿಕೆ, ಪು. 95–94

[37] ಪೀಠಿಕೆ, ಪು. 94–96

ಸಂಸ್ಕೃತಿ ಸಾಮಾನ್ಯವಾಗಿ ಕಲಿಕೆಯಿಂದ ಬಂದುದೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅದು ಮಾನವ ತನ್ನ ನೈಸರ್ಗಿಕ ಪರಿಸರಕ್ಕೆ ಹೊಂದಿಕೊಳ್ಳಲು ಸಹಾಯಕವಾಗಿದೆ. ಅದು ಪರಿವರ್ತನಶೀಲವಾದುದು ಮತ್ತು ಅದು ಸಂಸ್ಥೆಗಳು, ವಿಚಾರ ರೂಪಿಕೆಗಳು ಹಾಗೂ ಭೌತ ವಸ್ತುಗಳಲ್ಲಿ ಸುವ್ಯಕ್ತವಾಗುತ್ತದೆ ಎಂಬ ವಿಷಯದಲ್ಲೂ ಸಾಮಾನ್ಯ ಒಮ್ಮತವಿದೆ. ಹಿಂದಿನ ಅತ್ಯುತ್ತಮ ವ್ಯಾಖ್ಯೆಗಳಲ್ಲಿ ಒಂದನ್ನು ಇ. ಬಿ. ಟೈಲರ್ ನೀಡಿದ್ದಾನೆ. ಅವನ ವ್ಯಾಖ್ಯೆಯ ಪ್ರಕಾರ "ಸಂಸ್ಕೃತಿ ಅಥವಾ ನಾಗರಿಕತೆಯು ಜ್ಞಾನ, ನಂಬಿಕೆ, ಕಲೆ, ನೈತಿಕ ನಿಯಮಗಳು, ಕಾಯ್ದೆ ಪದ್ಧತಿಗಳು ಹಾಗೂ ಮಾನವನು ಸಮಾಜದ ಸದಸ್ಯನಾಗಿದ್ದುಕೊಂಡು ಗಳಿಸಿದ ಇನ್ನಾವುದಾದರೂ ಯೋಗ್ಯತೆಗಳು ಮತ್ತು ಅಭ್ಯಾಸಗಳನ್ನೊಳಗೊಂಡ ಅಖಂಡ ಸಮ್ಮಿಶ್ರಣ ವಾಗಿದೆ." ರಾಲ್ಫ್ ಲಿಂಟನ್ ಎಂಬವನ ಅಭಿಪ್ರಾಯದಲ್ಲಿ "ವಿಶಿಷ್ಟ ಸಮಾಜವೊಂದರ ಸದಸ್ಯರು ಪಾಲುಗೊಂಡು ವಂಶಪಾರಂಪರ್ಯವಾಗಿ ಸಾಗಿಸುವ ಜ್ಞಾನ, ಮನೋಭಾವಗಳು ಮತ್ತು ರೂಢಿ ಯಾದ ವರ್ತನಾರೂಪಿಕೆಗಳ ಒಟ್ಟು ಮೊತ್ತವೇ ಸಂಸ್ಕೃತಿ." ರಾಬರ್ಟ್ ಎಚ್. ಲೋಯಿ ಸಂಸ್ಕೃತಿಯನ್ನು "ಅಖಂಡ ಸಾಮಾಜಿಕ ಸಂಪ್ರದಾಯ" ಎಂದು ಕರೆದಿದ್ದಾನೆ.

—ಡಿ. ಎಚ್. ಮಲ್ಲಿನಾಥಯ್ಯ*

---

* 'ಸಾಂಸ್ಕೃತಿಕ ಮಾನವಶಾಸ್ತ್ರ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾ ನಿಲಯ, ಮೈಸೂರು (1974), ಪು. ೧೪–೧೫

ಜಿ. ಟಿ. ನಾರಾಯಣರಾವ್

ಸಹಕಾರದಲ್ಲಿ ಒಂದು ಪ್ರಯೋಗ

ಸಹಕಾರ ಸಂಘದ ಆವಶ್ಯಕತೆ

ಮಡಿಕೇರಿಯ ಸರ್ಕಾರೀ ಕಾಲೇಜು ಅಂದಿನ ಕೊಡಗು ಸರ್ಕಾರದ ವತಿಯಿಂದ 1949ರಲ್ಲಿ ಆರಂಭವಾಯಿತು. ಆಗ ಕೊಡಗು ಕೇಂದ್ರ ಸರ್ಕಾರದ ಆಡಳಿತೆಗೆ ಒಳಪಟ್ಟಿದ್ದ ಸಿ ವಿಭಾಗದ ರಾಜ್ಯವಾಗಿತ್ತು. ಇದರ ಮುಖ್ಯ ಆಡಳಿತಾಧಿಕಾರಿ ಚೀಫ್ ಕಮಿಷನರ್ ಜನರ ಬಹು ವರ್ಷಗಳ ಬೇಡಿಕೆಗಳನ್ನು ಸಹಾನುಭೂತಿಯಿಂದ ಗ್ರಹಿಸಿ ಕಾಲೇಜಿನ ಸ್ಥಾಪನೆಯಲ್ಲಿ ಅಗ್ರಪಾತ್ರವನ್ನು ವಹಿಸಿದ್ದರು. ಜನರ ಸಹಕಾರ ಮತ್ತು ಸರ್ಕಾರದ ಬೆಂಬಲ ಎರಡೂ ವಿಪುಲವಾಗಿ ದೊರೆತ ಈ ಕಾಲೇಜು "ಶೀಲಂ ಸರ್ವಸ್ಯ ಭೂಷಣಂ" ಎನ್ನುವ ಉನ್ನತಾದರ್ಶವನ್ನು ಇರಿಸಿಕೊಂಡು ಮೈ ದಳೆಯಿತು. ಇದರ ಪ್ರಧಾನ ನಿರ್ಮಾಣ ಘಟಕಗಳಾದ ಅಧ್ಯಾಪಕರನ್ನು ಆಯುವಲ್ಲಿ ಚೀಫ್ ಕಮಿಷನರ್ ತುಂಬ ಮುತುವರ್ಜಿ ವಹಿಸಿದ್ದರು. ವಿದ್ವತ್ತು, ಸಂವಹನ ಸಾಮರ್ಥ್ಯ ಹಾಗೂ ಶೀಲ ಹಿರಿಯ ಮಟ್ಟದಲ್ಲಿದ್ದ ಅನುಭವೀ ವ್ಯಕ್ತಿಗಳಿಗೆ ಆಕರ್ಷಕ ಆರ್ಥಿಕ ಸವಲತ್ತುಗಳನ್ನು ನೀಡಿ ಅಲ್ಲಿ ನೇಮಿಸಲಾಗಿತ್ತು. ಇವರಿಗೆ ಪೂರಕವಾಗಿ ಗ್ರಂಥ ಭಂಡಾರ, ಪ್ರಯೋಗ ಮಂದಿರ, ಆಟೋಟಗಳ ಸೌಲಭ್ಯ ಮೊದಲಾದವು ಅಲ್ಲಿದ್ದುವು. ಕೊಡಗಿನ ಬೇರೆ ಬೇರೆ ಮೂಲೆಗಳಿಂದ ಮತ್ತು ನೆರೆಯ ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಭಾಗಗಳಿಂದ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಈ ಕಾಲೇಜಿಗೆ ಬಂದರು. ಇವರೆಲ್ಲರೂ ಸಾಧಾರಣವಾಗಿ ಒಳ್ಳೆಯ ಆರ್ಥಿಕ ಸ್ಥಿತಿ ಸಂಪನ್ನರು, ಶಿಸ್ತುಗಾರರು. ಹೀಗೆ 1949ರ ಆ ಮಹಾ ವರ್ಷರ್ತುವಿನ ಮುಸಲಧಾರೆಗಳ ತೀವ್ರ ಪ್ರಹಾರ ಪ್ರಾರಂಭವಾದಾಗ ಮಡಿಕೇರಿಯ ಸರ್ಕಾರೀ ಇಂಟರ್ಮೀಡಿಯೆಟ್ ಕಾಲೇಜ್ ಮಹಾ ಬಾಜಣೆ ಸಮೇತ ಕಾರ್ಯಪ್ರವೃತ್ತವಾಯಿತು.

ಹೊಸ ಕಾಲೇಜು ಮಡಿಕೇರಿಯ ಮಾರುಕಟ್ಟೆಯ ಮೇಲೆ ಹೊಸ ಬೇಡಿಕೆಗಳನ್ನು ಹೇರಿತು : ಮುಖ್ಯವಾಗಿ ವಿದ್ಯಾರ್ಥಿಗಳ ಪಠ್ಯಪುಸ್ತಕಗಳು, ಸಾದಿಲ್ವಾರು ಮುಂತಾದವು ಮತ್ತು ಕಾಲೇಜು ಗ್ರಂಥ ಭಂಡಾರದ ಆವಶ್ಯಕತೆಗಳು. ಆ ತನಕ ಶಾಲೆಗಳಿಗೆ ಮಾತ್ರ ಪುಸ್ತಕ ಗಳನ್ನು (ಇವುಗಳ ಬಿಡಿ ಬೆಲೆಗಳು ಹೇಗೂ ನಿಯಮಿತವಾದವು ಮತ್ತು ಬಲು ಅಗ್ಗದವು) ಪೂರೈಸುತ್ತಿದ್ದ ಒಂದೆರಡು ಅಂಗಡಿಗಳು ಈ ಹೊಸ ನೆಲದಲ್ಲಿ ಅತಿ ಲಾಭದ ಸದವಕಾಶವನ್ನು ಸಹಜವಾಗಿ ಕಂಡುವು. ಕಾಲೇಜ್ ವಿದ್ಯಾರ್ಥಿಗಳ ಪಠ್ಯ ಮತ್ತು ಸಹಾಯಕ ಪುಸ್ತಕಗಳನ್ನು ಮುದ್ರಿತ ಬೆಲೆಗಳಿಗಿಂತ ಜಾಸ್ತಿ ಆಗಿಯೇ ಮಾರುವುದು ವಾಡಿಕೆ ಆಯಿತು. "ಪುಸ್ತಕಗಳ ಮೇಲೆ ಮುದ್ರಿಸಿರುವುದು ಪ್ರಕಾಶಕರಿಗೆ ನಾವು ತೆರಬೇಕಾದ ಬೆಲೆಯನ್ನು. ಇನ್ನು ನೋಡಿ, ಮದರಾಸು ಬೆಂಗಳೂರು ಮೊದಲಾದ ಕಡೆಗಳಿಂದ ಭಾಂಗಿಗಳನ್ನು ತರಿಸಲು ನಮಗೆ ಎಷ್ಟು

ವೆಚ್ಚ ಶ್ರಮ ಆಗುವುದಿಲ್ಲ : ಮಾರಾಟವಾಗದ ಪುಸ್ತಕಗಳು ನಮಗೆ ಪೂರ್ಣ ನಷ್ಟದ ಬಾಬೇ" ಎಂಬ ಸೋಗಿನ ನಿಜ ಸಮಜಾಯಿಷಿಯನ್ನು ಅಂಗಡಿ ಮಾಲಿಕರು ಒಪ್ಪಿಸಿದಾಗ 2 ರೂಪಾಯಿ ಬೆಲೆಯ ಪುಸ್ತಕಕ್ಕೆ $2\frac{1}{4}$ ರೂಪಾಯಿ ಪಾವತಿಸುವುದು ಖಂಡಿತ ಹೆಚ್ಚಲ್ಲ, ಬದಲು, ನಮಗೇ ಲಾಭದಾಯಕ ಎಂದು ಯಾವ ಗಣಿತ ಶ್ರೀಮಂತನಿಗೆ ಅನ್ನಿಸಿದ್ದರೂ ಅಚ್ಚರಿ ಏನೂ ಇರಲಿಲ್ಲ. ಇತರ ವಿಶೇಷ ಅವಶ್ಯಕತೆಗಳಿಗೆ—ಪ್ರಯೋಗ ಮಂದಿರದ ದಾಖಲೆ ಪುಸ್ತಕಗಳು, ವಿಶೇಷ ಡ್ರಾಯಿಂಗ್ ಹತ್ಯಾರುಗಳು, ಉಪಕರಣ ಪೆಟ್ಟಿಗೆಗಳು, ಇತ್ಯಾದಿ—ಅಂಗಡಿಗಾರರು ವಿಧಿಸಿದ ಬೆಲೆಗಳನ್ನು ಮರುಸೊಲ್ಲಿಲ್ಲದೆ ವಿದ್ಯಾರ್ಥಿಗಳು ತೆರುವುದು ಮಾಮೂಲಾಯಿತು. ನೆರೆಯ ಹಿರಿ ಪಟ್ಟಣಗಳಾದ ಮೈಸೂರು ಮಂಗಳೂರುಗಳ ಪೈಪೋಟಿ ಮಾರುಕಟ್ಟೆಗಳಲ್ಲಿ ಸಲ್ಲುತ್ತಿದ್ದ ಬೆಲೆಗಳಿಗೂ ಮಡಿಕೇರಿಯ ಏಕಸ್ವಾಮ್ಯ ಮಾರುಕಟ್ಟೆಯಲ್ಲಿ ಗಿರಾಕಿಗಳನ್ನು ಕೊಲ್ಲುತ್ತಿದ್ದ ಬೆಲೆಗಳಿಗೂ ನಡುವೆ ಯಾವುದೇ ವೈಜ್ಞಾನಿಕ ಹೊಂದಾಣಿಕೆ ಇರಲಿಲ್ಲ. ಅತಿ ಲಾಭಕೋರತನದ ದುರಾಸೆಯಲ್ಲಿ ಮುಳುಗಿರುವ ಮನಸ್ಸಿನ ಅಪರಿಮೇಯತೆಯನ್ನು ಯಾವ ಶಾಸ್ತ್ರವೂ ಎಂದೂ ಯಾವುದೇ ಚೌಕಟ್ಟಿನೊಳಗೂ ಹಿಡಿದಿಟ್ಟು ಅರ್ಥವಿಸುವುದು ಸಾಧ್ಯವಾಗದು.

ಕಾಲೇಜಿಗೆ ನಾಲ್ಕು ವರ್ಷಗಳಾಗುವಾಗ, 1953, ಮಳೆಗಾಲದ ಆರಂಭದಲ್ಲಿ ಅದನ್ನು ಪ್ರಥಮ ದರ್ಜೆಯ ಕಾಲೇಜಾಗಿ ಬಡ್ತಿ ನೀಡಿ ಊರ ಹೊರಗಿನ ಗಾಳಿ ಬೀಡಿನ ಹೊಸ ಕಟ್ಟಡಗಳಿಗೆ ಜರೂರು ವರ್ಗ ಮಾಡಲಾಯಿತು. ತೆಂಕಣ ಗಾಳಿ ಮಡಿಕೇರಿಯ ಬೋಗುಣಿಗೆ ಮಳೆ ಹೊತ್ತು ಸುಯ್ಯಲಿಡುತ್ತ ಭರದಿಂದ ನುಗ್ಗುವ ಹೆಬ್ಬಾಗಿಲೇ ಗಾಳಿಬೀಡು. ಆ ಗುಡ್ಡದ ಕೊಡಿಯ ಮೇಲಿನ ಕಾವಲುಗಾರನಾಗಿ ನಿಂತಿತ್ತು ಕಾಲೇಜು. ಇನ್ನು ಅಲ್ಲಿ ಮಳೆರಾಯನ ಪ್ರತಾಪ ಲೀಲೆ ಹೇಳಬೇಕೇ ? ''ಚೆಲ್ಲಿದರನಿತೂ ತೀರದ ನೀರಿನ ಜಡದೇಹದ ಕರ್ಮುಗಿಲೇನು ? . . . . ಮರಗಳ ಕೀಳುತ ಬಂಡೆಯ ಹೋಳುತ ಜಗಜಟ್ಟಿಯ ತೆರನಾಡುವುದು.'' ಮಡಿಕೇರಿಯ ನಾಗರಿಕ ನೆಲೆಗಳಿಂದ ಕಾಲೇಜಿನ ದೂರ ಸುಮಾರು ಒಂದೂವರೆ ಮೈಲು. ಇಷ್ಟು ದೂರವೂ ಇರಿಚಲಿನ ಚುಚ್ಚುಗೋಡೆಯನ್ನು ಒಡೆದುಕೊಂಡೇ ಕಾಲೇಜಿನ ಸಮಸ್ತರೂ ನಡೆಯಬೇಕಾಗಿತ್ತು. ಯಾವ ಸೂರ್ಯಛಾಪಿನ ಕೊಡೆಯೂ ಆ ಥಂಡಿಯನ್ನು ಹಿಂಗಿಸುತ್ತಿರಲಿಲ್ಲ. ಯಾವ ಜಿಂಕೆ ಮುದ್ರೆಯ ಛತ್ರಿಗೂ ಆ ಮಳೆ ಓಟ ಸೋಲುತ್ತಿರಲಿಲ್ಲ. ಇನ್ನು ಬಾತುಬೆನ್ನು ಮಳೆಕೋಟುಗಳಾಗಲಿ ಗಮ್ ಬೂಟುಗಳಾಗಲಿ ಒಳಗಿನ ನರಪೇತಲನಿಗೆ ಬರಿಸದ ಆಟೋಪದ ಎದುರು ಕಾಪು ನೀಡುತ್ತಿರಲಿಲ್ಲ. ಕಾಲೇಜು ತಲಪುವ ವೇಳೆಗೆ ಮಜ್ಜೆ ತನಕ ಕೋಟ ಕೋಡದಿದ್ದರೆ ಅದು ಗಾಳಿಬೀಡೇ ಅಲ್ಲ ಅನ್ನುವ ಸ್ಥಿತಿ. ಆದರೆ ನಿಸರ್ಗದ ರುದ್ರಬಲಗಳೊಡನೆ ಸಹಜೀವನ ನಡೆಸುತ್ತ ಅವುಗಳಿಂದ ಶಿವಫಲಗಳನ್ನೇ ಪಡೆದು ಅಭಿವರ್ಧಿಸಿರುವ ಕೊಡಗಿನ ವಿದ್ಯಾರ್ಥಿವೃಂದಕ್ಕೆ ಇವು ಮಾಮೂಲು ಪ್ರಕೃತಿ ವ್ಯಾಪಾರಗಳಾದುವೇ ವಿನಾ ಅ–ಸಹ್ಯ ಪ್ರತಿರೋಧಗಳಾಗಲಿಲ್ಲ. ಅವರು ಅಂಜಿದ್ದು ಹಿಂಜರಿದದ್ದು ಮನುಷ್ಯ ವ್ಯಾಪಾರಗಳಿಗೆ, ಕೃತಕ ಪ್ರತಿರೋಧಗಳಿಗೆ, ಡೊಂಗಿ ಮಂದಿಯ ಕೋಡಂಗಿತನಕ್ಕೆ.

ನೀರಡಕೆ, ಬಾಯಾರಿಕೆ ಪದಗಳ ನಡುವೆ ಒಂದು ಸೂಕ್ಷ್ಮ ವ್ಯತ್ಯಾಸ ಉಂಟು : ಬಾಹ್ಯ ಪರಿಸರದ ಪ್ರಭಾವದಿಂದ ಮೊದಲನೆಯದು ಕಾಣಿಸಿಕೊಂಡರೆ ಆಂತರಿಕ ಸ್ಥಿತಿಗತಿಗಳ ಪರಿಣಾಮವಾಗಿ ಎರಡನೆಯದು ತಲೆದೋರುವುದು. ಬಿಸಿಲಲ್ಲಿ ಹಾದಿ ಸವೆಸಿದಾಗ ಬಳಲಿಸುವುದು ನೀರಡಕೆ. ಜ್ವರದ ಕಾಪು ತಟ್ಟಿದಾಗ ತೊಳಲಿಸುವುದು ಬಾಯಾರಿಕೆ. ನೀರು ಕುಡಿದು ನೀರಡಕೆ

ಯನ್ನು ತಣಿಸಬಹುದಾದರೆ ಬೇನೆ ಚಿಕಿತ್ಸೆಯೊಂದೇ ಬಾಯಾರಿಕೆಯನ್ನು ಶಂಪಿಸುವ ಹಾದಿ. ಮಡಿಕೇರಿಯ ಪಟ್ಟಭದ್ರರಿಗೆ ತೀವ್ರ ಬಾಯಾರಿಕೆ ಏರಿದ್ದು ಸಹಜವೇ—ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು, ಹೆಚ್ಚು ಬೆಲೆಯ ಪುಸ್ತಕಗಳಿಗೆ ತುಂಬ ಬೇಡಿಕೆ, ಪೈಪೋಟಿ ಇಲ್ಲದ ನಿರಾತಂಕ ಸನ್ನಿವೇಶ—ಕಿಚ್ಚು ಪಚ್ಚಿಂದ ಸ್ವರ್ಗಕ್ಕೆ ! ಪುಸ್ತಕ ಬೇಡಿ ದುಡ್ಡು ಹಿಡಿದು ದೇಹಿ ಎಂದು ನಿಂತ ಜ್ಞಾನದಾಹಿಗಳಿಗೆ ದೊರೆತದ್ದು ಗರಿಷ್ಠ ಮೌಲ್ಯಕ್ಕೆ ಕನಿಷ್ಠ ಸರಕು (ಮತ್ತು ಋಣಾತ್ಮಕ ಸೇವೆ). ಅನೇಕ ವಿದ್ಯಾರ್ಥಿಗಳು ವ್ಯಾಪಾರ ಅಂದರೆ ಹೀಗೆಯೇ ಇರಬೇಕು ಎಂಬುದಾಗಿ ಪರಿಸ್ಥಿತಿಗೆ ಹೊಂದಿಕೊಂಡರು. ಮತ್ತೆ ಕೆಲವರು ಬೇರೆ ಏನೂ ವಿಧಿ ಇಲ್ಲದೆ ಈ ಲುಕ್ಸಾನನ್ನೂ ಕಟುಕ ರೋಹಿಣಿಯನ್ನೂ ನುಂಗಿಕೊಂಡರು. ಇನ್ನುಳಿದವರು ಇವೆಲ್ಲವೂ ವಿದ್ಯಾರ್ಜನೆಯ ತಪಸ್ಸಿನ ಒಂದು ಅಂಗ ಎಂಬ ನಿರ್ವಿಣ್ಣ ಭಾವದಿಂದ ಉದಾಸೀನರಾದರು. ಸುಲಭ ಶ್ರಮದಿಂದ ವಾಮ ಮಾರ್ಗದಲ್ಲಿ ಗಳಿಕೆ ಆದ ಲಾಭ ವ್ಯಾಪಾರಿಗಳ ರೋಗವನ್ನು ಉಲ್ಬಣಿಸಿ ಅವರ ಬಾಯಾರಿಕೆ ಯನ್ನು ಅತಿಯಾಗಿ ವರ್ಧಿಸಿತು ; ಮತ್ತಷ್ಟು ತನಿರಸವನ್ನು ಅದಕ್ಕೆ ಎರೆಯುವುದು ಅವರ ದೃಷ್ಟಿಯಿಂದ ಅನಿವಾರ್ಯವಾಯಿತು. ಆದರೆ ವಿದ್ಯಾರ್ಥಿಗಳ ದೃಷ್ಟಿಯಿಂದಲೋ ? ವ್ಯಾಧಿ ನಿರ್ಮೂಲನವೊಂದೇ ಇದಕ್ಕಿದ್ದ ಮದ್ದು.

1953ರ ಕರಿಮುಗಿಲಿನ ಒನಕೆ ಮಳೆಯ ಕುಟ್ಟಣೆ ಮುಗಿದು ದಟ್ಟ ಹಸಿರಿನ ಪಚ್ಚಡ ಇಡೀ ಮಡಿಕೇರಿಯ ಮೇಲೆ ಹಾಸಿದಂತಿತ್ತು. ಬತ್ತದ ಗದ್ದೆಗಳಲ್ಲಿ ಕದಿರೊಡೆಯುವ ಕಾಲ ಸನ್ನಿಹಿತವಾಗಿತ್ತು. ಪಚ್ಚೆ ಮಣಿಗಳನ್ನು ನಿಬಿಡವಾಗಿ ಧರಿಸಿ ಅವುಗಳ ಭಾರದಿಂದ ಇಡೀ ಕಾಫಿ ತೋಟದ ಹರವೇ ತೊನೆಯುತ್ತಿತ್ತು. ಯಾಲಕ್ಕಿಯ ನರುಗಂಪನ್ನು ಹೊತ್ತು ಎಲ್ಲೆಡೆಗೂ ಮೆಲುಬೀಸಿನಿಂದ ಪಸರಿಸುತ್ತಿದ್ದ ಪ್ರಾಣವಾಯು ಆ ನಡುಹಗಲ ಹೂಬಿಸಲ ಹಿತಲೇಪನದ ವೇಳೆ ನಮ್ಮನ್ನು ಸ್ವಯಂಪ್ರಭೆಯ ಲೋಕಕ್ಕೆ ಕೊಂಡೊಯ್ಯುತ್ತಿತ್ತು. ವಿದ್ಯಾರ್ಥಿಗಳ ಎಂದೂ ಬತ್ತದ ಹುರುಪಿಗೆ ಹೊಸ ಕಳೆ ಬಂದಿತ್ತು. ಹಿರಿಯ ಆದರ್ಶವನ್ನು ಇರಿಸಿಕೊಂಡು ಕಾಲೇಜಿನ ಸರ್ವಾಂಗೀಣ ಅಭ್ಯುದಯಕ್ಕಾಗಿ ಅಹರ್ನಿಶೆ ದುಡಿಯುತ್ತಿದ್ದ ಪ್ರಾಂಶುಪಾಲರು ತಮ್ಮ ಅಕ್ಷಯ ಬತ್ತಳಿಕೆಯಿಂದ ಇನ್ನೂ ಒಂದು ಹೊಸ ಅಸ್ತ್ರವನ್ನು ಹೊರತೆಗೆದರು.

ಸಹಕಾರ ಸಂಘದ ಸ್ಥಾಪನೆ

ಅದೇ ಕಾಲೇಜ್ ವರ್ಷದ ಆರಂಭದಲ್ಲಿ (ಜುಲೈ 1953) ಹಲವಾರು ತರುಣ ಉಪನ್ಯಾಸ ಕಾರರನ್ನು ಕಾಲೇಜಿಗೆ ನೇಮಿಸಲಾಗಿತ್ತು. ಇವರಲ್ಲಿ ನಾನೂ ಒಬ್ಬ. ನಮ್ಮನ್ನೆಲ್ಲ ಪ್ರಾಂಶುಪಾಲರು ತಮ್ಮ ಕೊಠಡಿಗೆ ಕರೆಸಿ ಅವರ ಮನಸ್ಸಿನಲ್ಲಿದ್ದ ಹಲವಾರು ಯೋಜನೆ ಯೋಚನೆಗಳನ್ನು ವಿವರಿಸಿ ದರು. ಇವುಗಳ ಪೈಕಿ ಮುಖ್ಯವಾದ ಒಂದನ್ನು ಅವರು ತಮ್ಮ ಮಿಂದುಳಕೂಸು, ತಮ್ಮ ಬಾಳಹಂಬಲ ಎಂಬ ಆತ್ಮೀಯತೆಯಿಂದ ನಮ್ಮ ಮುಂದೆ ಇಟ್ಟರು : "ಕಾಲೇಜಿನ ವಿದ್ಯಾರ್ಥಿ ಗಳಿಗೆ ಅವರ ಸಕಲಾವಶ್ಯಕತೆಗಳೂ ಇಲ್ಲಿಯೇ ದೊರೆಯುವಂತೆ ಒಂದು ಸಹಕಾರ ಸಂಘವನ್ನು ಒಡನೆ ಸ್ಥಾಪಿಸಬೇಕು. ಕ್ರಮೇಣ ಇದನ್ನು ವಿಸ್ತರಿಸಿ ಇದೊಂದು ಸರ್ವ ವಸ್ತು ಭಂಡಾರ ಆಗುವಂತೆ ಮಾಡಬೇಕು. ಕಾಲೇಜಿನ ಸುಪುಷ್ಟ ಅಭಿವರ್ಧನೆಗೆ ಪಾಠ ಪ್ರವಚನ, ಗ್ರಂಥ ಭಂಡಾರ ಮುಂತಾದವುಗಳಷ್ಟೇ ಅಗತ್ಯವಾದ್ದು ಇಂಥ ಒಂದು ಸಾಮಾಜಿಕ ಕೇಂದ್ರವಾದ

ಸಹಕಾರ ಸಂಘ.'' ಇದಿಷ್ಟು ಅವರ ಮಾತಿನ ಸಾರ, ಅವರು ಮುಂದುವರಿದು ನಮ್ಮ (ಅಂದರೆ ತರುಣ ಅಧ್ಯಾಪಕರ) ಪೈಕಿ ಒಬ್ಬರು ಈ ಹೊಣೆ ಹೊರಲು ಮುಂಬರಬೇಕೆಂದು ಬಯಸಿದರು. ನೆರೆದಿದ್ದವರ ದೃಷ್ಟಿ ಬಿದ್ದದ್ದು ನನ್ನ ಮೇಲೆ. ನನಗೆ ಯಾವ ಭಾವನೆಯೂ ಇರಲಿಲ್ಲ. ಕಾರಣ, ಸಹಕಾರ ನನಗೆ ಪರಕೀಯ ಕ್ಷೇತ್ರ. ಅಲ್ಲದೇ ನಾನಾಗ ಕಾಲೇಜಿನ ಸಮಾಜ ಸೇವಾ ಸಂಘದ ಕಾರ್ಯ ನಿರ್ವಾಹಕನಾಗಿ ತಲೆತುಂಬ ಯೋಜನೆಗಳನ್ನೂ ಕೈ ತುಂಬ ಕೆಲಸ ಗಳನ್ನೂ ಹಮ್ಮಿಕೊಂಡಿದ್ದೆ.

''ನಿಮ್ಮ ಅಭಿಪ್ರಾಯ ಏನು ?'' ಎಂಬುದಾಗಿ ಪ್ರಾಂಶುಪಾಲರು ನನ್ನನ್ನು ಕೇಳಿದಾಗ ಉಳಿದವರು ಅವರ ಇಂಗಿತವರಿತು ''ನೀವೇ ಈ ಮುಂದಾಳುತನ ವಹಿಸಲು ಸರಿಯಾದವರು'' ಎಂದು ದನಿಗೂಡಿಸಿದರು.

ನನ್ನಲ್ಲಿ ಸ್ವಭಾವಜನ್ಯ ದೌರ್ಬಲ್ಯವೊಂದುಂಟು : ನಾಲ್ಕು ಜನ ಸೇರಿ ವಿಶ್ವಾಸದಿಂದ ''ಈ ಕೆಲಸ ನಿಮ್ಮಿಂದ ಆಗಬೇಕು'' ಎಂದಾಗ ಹಿಂದೆ ಮುಂದೆ ನೋಡದೆ ಧುಮುಕುವುದು. ಅದೂ ಆ ಎಳೆ ಹರೆಯದಲ್ಲಿ (27) ಈ ದೌರ್ಬಲ್ಯ ತೀವ್ರವಾಗಿತ್ತು. ಆ ಗಳಿಗೆಯಲ್ಲಿ ನಾನು ತರ್ಕಾತೀತ ಭಾವಾವಿಷ್ಟನಾಗಿ ''ನಿಮ್ಮ ಇಚ್ಛೆಯಂತೆ ಆಗಲಿ. ಆದರೆ ಮಾರ್ಗದರ್ಶನಕ್ಕೆ ಹಿರಿಯ ಪ್ರಾಧ್ಯಾಪಕರು ಯಾರಾದರೊಬ್ಬರು ಮುಂದಿರಲಿ. ನಾನು ಹಿಂದೆ ನಿಂತು ಕೆಲಸ ಮಾಡುತ್ತೇನೆ'' ಎಂದೆ.

''ಇಲ್ಲ ಅಂಥ ಏರ್ಪಾಡು ಎಂದೂ ಸರಿ ಆಗದು. ನಿಮ್ಮ ದುಡಿಮೆ ನಿಮಗೂ ನಿಮ್ಮ ಮೂಲಕ ನಮ್ಮ ಕಾಲೇಜಿಗೂ ಹೆಸರು ತರಬೇಕು. ಮಾರ್ಗದರ್ಶನ ನೀವೇ ಮಾಡಿಕೊಂಡು ಹೊಸ ಜಾಡಿನಲ್ಲಿ ಸಾಗಿ. ನಾವೆಲ್ಲ ನಿಮ್ಮ ಬೆಂಬಲಕ್ಕೆ ಇದ್ದೇವೆ'' ಎಂದು ಪ್ರಾಂಶುಪಾಲರು ಮುಕ್ತಾಯ ನುಡಿಸಿದರು.

ಜಾಗ ನೋಡದೆ ಲಾಗ ಹೊಡೆದಾತನಿಗೆ ಒದಗುವ ಸಮಸ್ತ ಅನುಭವವೂ ಮುಂದೆ ನನ್ನದಾಯಿತು. ಸಹಕಾರ ಕ್ಷೇತ್ರ ಅಂದರೇನು ? ಇದರಲ್ಲಿ ಸಂಘ ಸ್ಥಾಪನೆಯ ವಿಧಿ ಹೇಗೆ ? ವ್ಯಾಪಾರದ ಹಿಕ್ಮತ್ತುಗಳು ಯಾವುವು ? ಬಂಡವಾಳವನ್ನು ಎಲ್ಲಿಂದ ದೊರಕಿಸುವುದು ? ಸಾಮಗ್ರಿಗಳ ಪೂರೈಕೆ ಎಂತು ? ಗಲ್ಲಾದಲ್ಲಿ ಕುಳಿತು ವ್ಯಾಪಾರ ಮಾಡುವವರು ಯಾರು ? ಲೆಕ್ಕಪುಸ್ತಕಗಳ ವಿಲೆವಾರಿ ಏನು ? ನನ್ನ ಪಾಠಾಧ್ಯಯನಗಳ ಮತ್ತು ಸಂಘದ ವ್ಯವಹಾರಗಳ ನಡುವೆ ಹೊಂದಾಣಿಕೆ ಸಾಧಿಸುವುದು ಹೇಗೆ ? ಇವೇ ಮೊದಲಾದ ನೂರಾರು ಪ್ರಶ್ನೆಗಳು ನನ್ನನ್ನು ಆ ಗಳಿಗೆಯಿಂದ ಕಾಡತೊಡಗಿದುವು. ಆವೇಶಭರದಲ್ಲಿ ಸ್ವಸಾಮರ್ಥ್ಯವನ್ನು ಗ್ರಹಿಸದೆ ನೀಡಿದ ಆಶ್ವಾಸನೆ ಸಿಂದಬಾದ ನಾವಿಕನ ಮುದುಕ "ಮಿತ್ರ" ನಂತೆ ನನ್ನ ಬೆನ್ನೇರಿ ತನ್ನ ಹೆಣ ಭಾರದಿಂದ ನನ್ನನ್ನು ಜಗ್ಗತೊಡಗಿತು. ಕಾಲೇಜಿನಲ್ಲಿ ಈ ವಿಚಾರಗಳನ್ನು ಚರ್ಚಿಸಬಲ್ಲ ಅನು ಭವಿಗಳು ಯಾರೂ ಇರಲಿಲ್ಲ.

ಪ್ರಥಮ ಪ್ರಜಾಸರ್ಕಾರ ಈ ವೇಳೆಗೆ ಕೊಡಗಿನಲ್ಲಿ ಅಸ್ತಿತ್ವಕ್ಕೆ ಬಂದು ತುಂಬ ಸಮರ್ಥ ವಾಗಿ ಮತ್ತು ಆತ್ಮೀಯವಾಗಿ ಕೆಲಸವೆಸಗುತ್ತಿತ್ತು. ಮಂತ್ರಿದ್ವಯರಿಗೂ ಕೊಡಗಿನ ಹೆಸ ರನ್ನು ಸರ್ವರಂಗಗಳಲ್ಲಿ ಮುಂದೆ ತರಬೇಕೆಂಬ ತೀವ್ರಾಸಕ್ತಿ ಇತ್ತು. ಸಾರ್ವಜನಿಕ ಜೀವನದಲ್ಲಿ ಲವಲವಿಕೆ ಮತ್ತು ಅರ್ಥಪೂರ್ಣತೆ ತುಂಬಿ ತುಳುಕುತ್ತಿದ್ದುವು. ಆ ಮೊದಲೇ ಆಳವಾಗಿಯೂ ಅಗಲವಾಗಿಯೂ ಕೊಡಗಿನಲ್ಲಿ ನೆಲೆಸಿದ್ದ ಸಹಕಾರಾಂದೋಳನಕ್ಕೆ ಈ ಹೊಸ ಅನುಕೂಲ ಸನ್ನಿ

ವೇಶ ಅಧಿಕ ಚೈತನ್ಯವನ್ನು ನೀಡಿತು. ಇತ್ತ ವೈಯಕ್ತಿಕವಾಗಿ ನನಗೆ ಒಂದು ವಿಶೇಷ ಸೌಕರ್ಯವೂ ಇತ್ತು : ನನ್ನ ತಂದೆ ಕೊಡಗಿನ ಸಹಕಾರ ರಂಗದಲ್ಲಿ ಹಿರಿಯ ಅಧಿಕಾರಿಗಳಾಗಿದ್ದರು. ಹೀಗಾಗಿ ತೀರ ಎಳವೆಯಿಂದಲೇ ನನಗೆ ಗ್ರಾಮ ಸಹಕಾರ ಸಂಘಗಳ ನಡವಳಿಕೆಗಳನ್ನು ನೋಡುವ ಅವಕಾಶ ಲಭಿಸಿತ್ತು. ನಾನು ಪ್ರೌಢಶಾಲೆಯ ವಿದ್ಯಾರ್ಥಿ ಆಗಿದ್ದಾಗ ನನ್ನ ತಂದೆಯವರೇ ಅಧಿಕಾರನಿಮಿತ್ತ ಹಿರಿತನ ವಹಿಸಿ ಮಡಿಕೇರಿಯಲ್ಲಿ ಪ್ರಥಮವಾಗಿ ಸ್ಥಾಪಿಸಿದ ಗ್ರಾಹಕ ಸಹಕಾರ ಸಂಘದ ಕ್ಷಿಪ್ರಾಭಿವರ್ಧನೆಯನ್ನು ಕಂಡಿದ್ದೆ. ಸದ್ಯ ಅವರು ಕೊಡಗಿನ ಕೇಂದ್ರ ಸಹಕಾರ ಬ್ಯಾಂಕಿನ ಪ್ರಧಾನಾಧಿಕಾರಿಗಳಾಗಿದ್ದುದರಿಂದ ಅಂಗೈ ಅಗಲದ ಕೊಡಗಿನ ನೆಲದಲ್ಲಿ ಸಹಕಾರ ಇಲಾಖೆಯ ಸಕಲ ಅಧಿಕಾರಿಗಳೂ ನನಗೆ ಪರಿಚಿತರಾಗಿದ್ದರು. ಈ "ರಕ್ತ ಸಂಬಂಧ"ವನ್ನು ನಗದಿಸಲು ನಾನು ಮುಂದಾದೆ.

ಸಹಕಾರ ಸಂಘಗಳ ರಿಜಿಸ್ಟ್ರಾರ್ ವಿದ್ಯಾರ್ಥಿಗಳ ಗ್ರಾಹಕ ಸಹಕಾರ ಸಂಘದ ಸ್ಥಾಪನೆಗೆ ಬೇಕಾದ ಪೂರ್ತಿ ತಾಂತ್ರಿಕ ಮಾಹಿತಿಯನ್ನು ಒದಗಿಸಿದರು. ಆ ಪ್ರಕಾರ ಮೊದಲ ಹೆಜ್ಜೆಯಾಗಿ ನಾವು ನಿಗದಿ ಪಾಲು ಬಂಡವಾಳವನ್ನೂ ಪ್ರವರ್ತಕ ಸದಸ್ಯ ಸಂಖ್ಯೆಯನ್ನೂ ಕಲೆಹಾಕಬೇಕಾಗಿತ್ತು. ಪ್ರತಿ ಸದಸ್ಯ ಕೊಡಬೇಕಾಗಿದ್ದ ಕನಿಷ್ಠ ಮೊಬಲಗು ನಾಲ್ಕೂವರೆ ರೂಪಾಯಿಗಳು. ಆ ದಿನಗಳಲ್ಲಿ ವಿದ್ಯಾರ್ಥಿಗಳ ದೃಷ್ಟಿಯಿಂದ ಇದು ಕಡಿಮೆ ಮೊತ್ತವೇನೂ ಆಗಿರಲಿಲ್ಲ. ಹಣವಾಗಲಿ ಸದಸ್ಯ ಸಂಖ್ಯೆಯಾಗಲಿ ನಮ್ಮ ಉತ್ಸಾಹದ ದುಡಿಮೆಗೆ ಅನುಪಾತೀಯವಾಗಿ ಹರಿಯಲಿಲ್ಲ. ಈ ಸಾರ್ವಜನಿಕ ಭಿಕ್ಷಾಟನೆಯಲ್ಲಿ ದೊರೆತ ಅನುಭವಗಳನ್ನು ಸಾರೀಕರಿಸಿ ಇಷ್ಟು ಹೇಳಬಹುದು :

ಯಾವುದೇ ಕಾರ್ಯ ಅಂತಿಮವಾಗಿ ತಮ್ಮ ಒಳಿತಿಗಾಗಿಯೇ ಇದೆ ಎಂದು ಜನರಿಗೆ ಖಾತ್ರಿ ಆದಾಗ್ಯೂ ಹಣ ಹರಿಯುವುದು ತುಂಬ ದಾಕ್ಷಿಣ್ಯದಿಂದ. ವಿಚಾರವಂತರು ಸಂಘಟಕರ ಪ್ರಾಮಾಣಿಕತೆ ಮತ್ತು ಕಾರ್ಯದಕ್ಷತೆಗಳನ್ನು ಚೆನ್ನಾಗಿ ವಿಮರ್ಶಿಸಿ ಪರ್ಯಾಲೋಚಿಸಿ ಹಣ ನೀಡುವರು. ಇಂಥವರ ಸಂಖ್ಯೆ ಕಡಿಮೆ. ಉಳಿದವರು (ನಮ್ಮಲ್ಲಿ ವಿದ್ಯಾರ್ಥಿಗಳೇ ಬಹುತೇಕ "ಕಚ್ಚಾ ಸಾಮಗ್ರಿ" ಮತ್ತು ಬೇಡುವವ ಖುದ್ದು ಅವರ ಓರ್ವ ಅಧ್ಯಾಪಕ ಆಗಿದ್ದುದರಿಂದ) ನಾಲ್ಕು ಸಲ ಕಾಡುವಾಗ ''ಪೀಡೆ ತೊಲಗಲಿ'' ಎಂದು ಮನಸ್ಸಿನೊಳಗೆ ಶಪಿಸುತ್ತ ಸದಸ್ಯ ಶುಲ್ಕವನ್ನು ಪಾವತಿಸಿದರು. ವಾದ ಮಾಡಲು ಅರ್ಹತೆ ಇದ್ದಂಥ ಸಮಾನಸ್ಕಂಧರ ಪೈಕಿ ಒಳ್ಳೆಯ ಮಾತಾಡಿ ಹುರಿದುಂಬಿಸಿ ಆದರೆ ಸಾಕಷ್ಟು ಸತಾಯಿಸಿ ಮತ್ತೆ ಅನಿವಾರ್ಯವಾಗಿ ಮೊಬಲಗು ತೆತ್ತವರು ಹಲವರು. ಇನ್ನು ಕೆಲವರು ''ಆಗ ಬಾ ಈಗ ಬಾ ಹೋಗಿ ಬಾ'' ಎಂದು ಪರಿ ಪರಿ ವಿಧದಿಂದ ಸತಾಯಿಸಿ ಮತ್ತೆ ಈ ಕೆಲಸ ಹೇಗೆ ವಿಫಲವಾದೀತೆಂಬ ವಿಚಾರ ಉದ್ದುದ್ದ ಭಾಷಣ ಬಿಗಿದು ಕೊನೆಗೂ ಸದಸ್ಯರಾಗದೇ ನಾಲ್ಕೂವರೆ ರೂಪಾಯಿಗಳನ್ನು ದಕ್ಕಿಸಿಕೊಂಡರು. ಆದ್ದರಿಂದ ಇಲ್ಲೆಲ್ಲ ಕಲಿತ ಪಾಠ ಒಂದೇ : ''ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ.'' ಆದರೇನು ಮಾಡುವುದು ? ಕೈ ಹಾಕಿದ ಕೆಲಸದಲ್ಲಿ ರಾಗಭಾವಗಳನ್ನು ತರದೇ ದುಡಿಯುವ ದಿವ್ಯ ನಿರ್ಲಕ್ಷ್ಯ ಭಾವವಾಗಲಿ ಬೋರ್ಗಲ್ಲತನವಾಗಲಿ ಈ ಜೀವದ ಪ್ರವೃತ್ತಿ ಅಲ್ಲ.

ರಿಜಿಸ್ಟ್ರಾರರು ವಿಧಿಸಿದ್ದ ಕನಿಷ್ಠ ಅಡಚಣೆಗಳನ್ನು ಅಂತೂ ಇಂತೂ ನೋವು ಗಾಸಿ

ಏನೂ ಇಲ್ಲದೆ ದಾಟಿ ಎರಡನೆಯ ಸುತ್ತಿನ ಮಾತಿಗೆ ಅವರನ್ನು ಕಾಣಹೋದೆ. ಅವರು ಸೂಚಿಸಿದ್ದ ಮಾದರಿ ಉಪನಿಬಂಧನೆಗಳ ಪೈಕಿ ಬಹುತೇಕ ಎಲ್ಲವನ್ನೂ ಚಾಚೂ ತಪ್ಪದೆ ಒಪ್ಪಿಕೊಂಡಿದ್ದೆವು (ಹೆಚ್ಚಿನವು ನಮಗೆ ಅರ್ಥವಾಗಿರಲಿಲ್ಲ). ಕಾರ್ಯನಿರ್ವಾಹಕ ಸಮಿತಿಯ ವಿಚಾರದಲ್ಲಿ ಮಾತ್ರ ನಮ್ಮ ವ್ಯಕ್ತಿತ್ವಕ್ಕೆ ಅನುಗುಣವಾಗಿ ಕೆಲವು ಮುಖ್ಯ ಮಾರ್ಪಾಡುಗಳನ್ನು ಸೂಚಿಸಿದ್ದೆವು. ಗೌರವ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯ ನಿರ್ವಾಹಕನಾದ ಗೌರವ ಕಾರ್ಯದರ್ಶಿ ಇವರಿಬ್ಬರು ಮಾತ್ರ ವಿದ್ಯಾರ್ಥಿಗಳೇ ಬಹು ಸಂಖ್ಯೆಯಲ್ಲಿ ಇರುವಂಥ ಮಹಾಸಭೆಯಿಂದ ಚುನಾಯಿತರಾಗತಕ್ಕದ್ದಲ್ಲ ; ಬದಲು, ಕಾಲೇಜಿನ ಪ್ರಾಂಶುಪಾಲರೇ ಪದನಿಮಿತ್ತ ಗೌರವ ಅಧ್ಯಕ್ಷರಾಗಿರತಕ್ಕದ್ದು ; ಮತ್ತು ಕಾಲೇಜಿನ ಪ್ರಾಂಶುಪಾಲರೇ ಅಧ್ಯಾಪಕ ಸದಸ್ಯರ ಪೈಕಿ ಒಬ್ಬರನ್ನು ಗೌರವ ಕಾರ್ಯದರ್ಶಿಯಾಗಿ ನಾಮಕರಿಸತಕ್ಕದ್ದು ; ಕಾರ್ಯನಿರ್ವಾಹಕ ಮಂಡಳಿಯ ಅಧ್ಯಾಪಕ ಸದಸ್ಯನನ್ನು ಅಧ್ಯಾಪಕ ಸದಸ್ಯರು ಮಾತ್ರ ಚುನಾಯಿಸಬೇಕು.

ರಿಜಿಸ್ಟ್ರಾರರು ಮೊದಲಿನ ಸೂಚನೆಯನ್ನು ಒಪ್ಪಿದರು, ಆದರೆ ಉಳಿದೆರಡನ್ನು ತಳ್ಳಿಹಾಕಿದರು. ಅವು ಸಹಕಾರ ತತ್ತ್ವಗಳಿಗೆ ಅನುಗುಣವಾಗಿಲ್ಲ, ಮಹಾಸಭೆಯ ಅಧಿಕಾರ ವ್ಯಾಪ್ತಿಗೆ ಸರ್ವಸದಸ್ಯರೂ ಒಳಪಟ್ಟಿರಬೇಕು ಎಂಬುದಾಗಿ ವಾದಿಸಿದರು. ಅಲ್ಲದೇ ಸರ್ವಾನುಮತದಿಂದ ನಾನು ಗೌರವ ಕಾರ್ಯದರ್ಶಿಯಾಗಿ ಚುನಾಯಿತನಾಗುವ ವಿಚಾರದಲ್ಲಿ ತಮಗೆ ಒಂದಿನಿತು ಸಂದೇಹವೂ ಇಲ್ಲ ಎಂಬುದಾಗಿ ನನ್ನ ಬೆನ್ನು ತಟ್ಟಿದರು. ನಾನು ಸ್ಪಷ್ಟವಾಗಿ ನಮ್ಮ ನಿಲುವನ್ನು ವಿವರಿಸಿದೆ (ಸ್ವಲ್ಪ ಕಾವು ಕೂಡ ಬೆರೆತಿತ್ತು) : "ಸಹಕಾರ ತತ್ತ್ವ ಅನ್ನುವುದು ನಮ್ಮ ಅಳವಿಗೆ ಮೀರಿದ ನಿಸರ್ಗನಿಯಮ ಏನೂ ಅಲ್ಲ. ಪರಿಸ್ಥಿತಿಗೆ ಅನುಗುಣವಾಗಿ ಇದನ್ನು ಮಾರ್ಪಡಿಸದಿದ್ದರೆ ಅದು ದಫ್ತರಗಳಲ್ಲಿ ಕೀಟಾಹಾರವಾಗಿ ಉಳಿದೀತು, ಅಷ್ಟೆ. ಇದೀಗ ತಾನೇ ಹುಟ್ಟಲಿರುವ ನಮ್ಮ ಸಹಕಾರ ಸಂಘಕ್ಕೆ ಯಾರು ಗೌರವ ಕಾರ್ಯದರ್ಶಿ ಆಗುವರೆಂಬುದು ಮುಖ್ಯ ಅಲ್ಲ. ಆ ಅಧಿಕಾರ ಆ ವ್ಯಕ್ತಿಗೆ ಹೇಗೆ ಪ್ರಾಪ್ತವಾಗುವುದು ಎನ್ನುವುದು ಮುಖ್ಯ. ಇಲ್ಲಿ ವಿದ್ಯಾರ್ಥಿ ಸದಸ್ಯರ ಮಹಾಸಭೆಗೆ ಅಧ್ಯಾಪಕರಿಂದ ಇಬ್ಬರನ್ನು ಚುನಾಯಿಸುವ ಅಧಿಕಾರ ನೀಡುವುದು ಬೀದಿ ರಾಜಕೀಯವನ್ನು ದೇಗುಲದೊಳಕ್ಕೆ ಎಳೆದು ತಂದಂತೆ. ಕಾಲೇಜಿಗೆ ಸಹಕಾರ ಸಂಘವಿಲ್ಲದಿದ್ದರೂ ಅಡ್ಡಿ ಇಲ್ಲ, ಈ ಹೊಸ ಗೆದ್ದಲನ್ನು ಒಳಕರೆಯುವುದು ಬೇಡ."

ಅವರೂ ದನಿ ಏರಿಸಿ ಹೇಳಿದರು : "ನಿಮ್ಮ ಷರತ್ತುಗಳಿಗೆ ಅನುಗುಣವಾಗಿ ಈ ಸಂಘವನ್ನು ನೋಂದಾಯಿಸಲು ಸಾಧ್ಯವಾಗುವುದಿಲ್ಲ."

"ಸಹಕಾರ ಸಂಘಗಳ ಸ್ಥಾಪನೆ ಪೋಷಣೆಗಳಿಗೆಂದೇ ಮೀಸಲಾಗಿರುವ ಈ ಇಲಾಖೆ ನಾವಾಗಿಯೇ ಒಂದು ಸಂಘ ಸಸಿಯನ್ನು ನಿಮ್ಮ ಯಾವ ನೆರವೂ ಇಲ್ಲದೆ ನೆಟ್ಟು ಬೆಳೆಸಿ ಮೇಲೆ ತರುವೆವೆಂದು ಕೋರಿ ಬಂದಿರುವಾಗ ನಮ್ಮನ್ನು ತೆರೆದ ಮನದಿಂದ ಸ್ವಾಗತಿಸಿ ಪ್ರೋತ್ಸಾಹಿಸುವುದು ಬಿಟ್ಟು ಗಾಲಿಗಳ ಅರಗಳ ನಡುವೆ ಸಲಾಕಿ ತೂರುವುದು ಸರಿಯೆ ? ನಿಮ್ಮ 'ಸಹಕಾರ' ವಿಶೇಷಣದ ಬೆಂಬಲ ಇಲ್ಲದೆಯೂ ನಾವು ಸಂಸ್ಥೆಯೊಂದನ್ನು ಕಟ್ಟಿ ವಿದ್ಯಾರ್ಥಿ ಸೇವೆಯನ್ನು ಮಾಡುವುದಂತೂ ಖರೆ, ನೋಡಿ ಬೇಕಾದರೆ" ಎಂಬುದಾಗಿ ಹೇಳಿ ನಾನು ಅಲ್ಲಿಂದ ಹೊರಟೆ, ದಾಕ್ಷಾಯಣಿಯಂತೆ.

ಪ್ರಾಂಶುಪಾಲರಿಗೆ ಯಥಾವತ್ತು ವರದಿ ಒಪ್ಪಿಸಿ ಎರಡು ಅಂಶಗಳನ್ನು ಸ್ಪಷ್ಟಪಡಿಸಿದೆ : ಒಂದು, ರಿಜಿಸ್ಟ್ರಾರರ ಅಸಹಜ ಷರತ್ತುಗಳಿಗೆ ಮಣಿದು ಕಾಲೇಜು ಸಹಕಾರ ಸಂಘದ ಸ್ಥಾಪನೆ ಆಗಲೇಬೇಕೆಂದಾದರೆ ನನ್ನನ್ನು ಆ ಕ್ಷಣವೇ ಸಂಘದ ಹೊಣೆಗಾರಿಕೆಯಿಂದ ಬಿಡುಗಡೆ ಮಾಡ ಬೇಕು; ಎರಡು, ನಾನೇ ಇದ್ದು ಇದನ್ನು ಸಂಘಟಿಸಬೇಕು ಎಂದಾದರೆ ನಾವು ಸಹಕಾರ ಕ್ಷೇತ್ರ ವನ್ನು ಪ್ರವೇಶಿಸದೆ ಅಲಾಯಿದವಾಗಿ ಮುಂದುವರಿಯಬೇಕು.

ಮುಂದಿನ ದಿನಗಳಲ್ಲಿ ಪ್ರಾಂಶುಪಾಲರು ರಿಜಿಸ್ಟ್ರಾರರನ್ನೂ ಸಹಕಾರ ಮಂತ್ರಿಗಳನ್ನೂ ಭೇಟಿ ಮಾಡಿ ನಮ್ಮ ಮೂಲ ಮಾರ್ಪಡಿಕೆಗಳನ್ನು ಇಲಾಖೆ ಒಪ್ಪುವಂತೆ ಮಾಡಿದರು. 1954ರ ಫೆಬ್ರುವರಿ 6 ರಂದು "ಕೂರ್ಗ್ ಗವರ್ನ್‌ಮೆಂಟ್ ಕಾಲೇಜ್ ಕೋಆಪರೇಟಿವ್ ಸ್ಟೋರ್ಸ್ ಲಿಮಿಟೆಡ್" ಎಂಬ ನಾಮಧೇಯವನ್ನು ಧರಿಸಿ ನಮ್ಮ ಸಂಘ ಜನ್ಮ ತಳೆಯಿತು. ಇದರ ಗೌರವ ಕಾರ್ಯದರ್ಶಿಯಾಗಿ ಪ್ರಾಂಶುಪಾಲರು ನನ್ನನ್ನು ನಾಮಕರಿಸಿದರು. ಈಗ ನೊಗ ಪೂರ್ತಿ ನನ್ನ ಕತ್ತ ಮೇಲೆ ಬಿತ್ತು ಮಾತ್ರವಲ್ಲ ಉರುಳೆಯನ್ನು ಅದಕ್ಕೆ ಬಲವಾಗಿಯೇ ಬಿಗಿದಿದ್ದರು. ಹೆಸರುಂಟು ಬಂಡವಾಳ ಇಲ್ಲ, ಸಾಗುವ ಹುಮ್ಮಸ್ಸುಂಟು ಹಾದಿ ತಿಳಿದಿಲ್ಲ, ವ್ಯವಸ್ಥಿತ ಕಾರ್ಯದ ಗಟ್ಟಿ ಅಡಿಪಾಯವಿಲ್ಲದ ಉತ್ಸಾಹದ ನೊರೆ ಎಷ್ಟು ಎತ್ತರ ಏರಿದರೇನು ಫಲ ? ಅಂದು ನನ್ನ ಮನಃಸ್ಥಿತಿ ಹೀಗಿತ್ತು.

ಸಹಕಾರ ಸಂಘದ ಸಂಘಟನೆ

1954ರ ಜೂನ್ ಹೊತ್ತಿಗೆ ನಮ್ಮ ಸಂಘ ಸುಸಜ್ಜಿತವಾಗಿ ವ್ಯಾಪಾರಾರಂಭ ಮಾಡ ಬೇಕು ಎಂದು ನಿರ್ಧರಿಸಿದೆವು. ನಾಲ್ವರು ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ ಮುಂಬಂದು ತೇರೆಳೆಯಲು ನನ್ನೊಡನೆ ಟೊಂಕಕಟ್ಟಿ ನಿಂತರು. ಆದರೆ ಹೇರಿಲ್ಲದ ತೇರಿದು. ಅಂದು ನನ್ನನ್ನು ಪೀಡಿಸಿದ ಮುಖ್ಯ ಸಮಸ್ಯೆ ಬೇರೆಯೇ : ಪಾಲು ಬಂಡವಾಳ, ಇತರ ಸಂಗ್ರಹ ಎಲ್ಲವೂ ಸೇರಿ ನಮ್ಮ ಮೂಲಧನ ಸಾವಿರದ ಅಂಚನ್ನೂ ದಾಟಿರಲಿಲ್ಲ ; ಹಾಗಿರುವಾಗ ಹಲವಾರು ಸಾವಿರ ರೂಪಾಯಿ ಬೆಲೆಗಳ ಮಾಲುಗಳನ್ನು ಒದಗಿಸಿಕೊಳ್ಳುವುದು ಹೇಗೆ ? ಮಡಿಕೇರಿಯ ಪುಸ್ತಕ ವ್ಯಾಪಾರಿ ಒಬ್ಬರು ತುಂಬ ಅನುಕಂಪ ವಹಿಸಿ ನಯವಾಗಿ ಹೇಳಿದರು : "ಈ ತಾಪತ್ರಯ ನಿಮಗೆಂದೂ ನಿಭಾಯಿಸಲು ಸಾಧ್ಯವಾಗದು. ಇನ್ನು ನಿಮ್ಮ ಕಾಲೇಜಿಗೆ ಒಂದು ಸಂಘ ಬೇಕೇ ಬೇಕು ಎಂದಾದರೆ ನೋಡಿ. ನಾವಂತೂ ಪೂರ್ತಿ ಸಹಕಾರ ನೀಡಲು ತಯಾರಾಗಿದ್ದೇವೆ. ಜೂನ್ ಹೊತ್ತಿಗೆ ನಿಮಗೆ ಬೇಕಾದ್ದೆಲ್ಲವನ್ನೂ ಸಗಟು ದರದಲ್ಲಿ ಕೊಟ್ಟುಬಿಡುವೆವು. ಮಾರಾಟ ಆದಂತೆ ದುಡ್ಡು ಕೊಡುವಿರಂತೆ." ಈ "ಬಾನೊಳವೆ ಬಾನೊಳವೆ ಬಾನನ್ನ ಮನೆಗೆ, ಬಾನೊಳಗೆ ಹಾರಿ ಬಲು ದಣಿವಾಯ್ತು ನಿನಗೆ" ಎನ್ನುವ ಜೇಡನ ಕರೆಗೆ ಓಗೊಡುವ ಹೆಡ್ಡ ನೊಣ ನಾನಾಗಿರಲಿಲ್ಲ.

ಮಂಗಳೂರು ನಗರದೊಡನೆ ನನಗೆ ವೈಯಕ್ತಿಕ ಸಂಪರ್ಕ ನಿಕಟವಾಗಿತ್ತು. ಅಲ್ಲಿ ಮೊದಲು ಎರಡು ವರ್ಷ ಕಾಲೇಜು ವ್ಯಾಸಂಗ ಮಾಡಿದ್ದೆ. ಮತ್ತೆ ಕೆಲವು ವರ್ಷಗಳ ತರು ವಾಯ ಅದೇ ಊರಿನಲ್ಲಿ ಕಾಲೇಜ್ ಅಧ್ಯಾಪಕ ಹುದ್ದೆಯಲ್ಲೂ ಇದ್ದೆ. ಹೀಗಾಗಿ ಆ ಪರಿಚಿತ ಹಿರಿ ಪಟ್ಟಣದ ಸಗಟು ವ್ಯಾಪಾರಿಗಳನ್ನು (ಇವರಲ್ಲಿ ಹಲವು ಮಂದಿ ನನ್ನ ಸ್ನೇಹಿತರೂ ಆಗಿ

ಆಗಿದ್ದರು; ಕಂಡು ಮಾತಾಡಿ ಖುದ್ದು ಮಾಹಿತಿ ಪಡೆಯುವುದೊಂದೇ ಹಾದಿ ಎಂದು ನಿರ್ಧರಿಸಿ ಅಲ್ಲಿಗೆ ಹೋದೆ. ಸ್ಕೂಲ್ ಬುಕ್ ಕಂಪೆನಿ ಎಂಬ ಹೆಸರಿನ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ತುಂಬ ತಾಳ್ಮೆಯಿಂದ ನನಗೆ ಈ ಹೊಸ ಪ್ರಪಂಚದ ಸಾಧ್ಯಾಸಾಧ್ಯತೆಗಳನ್ನು ವಿವರಿಸಿದರು. ಲೇಖನ ಸಾಮಗ್ರಿಗಳು ಸಮಸ್ತವನ್ನೂ ತಾವು ಸಾಲರೂಪವಾಗಿ ಜೂನ್ ವೇಳೆಗೆ ಒದಗಿಸುವ ಆಶ್ವಾಸನೆ ನೀಡಿದರು. ಅವರ ಸಗಟು ದರಗಳು ನಾನು ನಂಬಲಾರದಷ್ಟು ಕಡಿಮೆ ಇದ್ದುವು. "ನೀವು ಈ ಸಂಘದ ಗೌರವ ಕಾರ್ಯದರ್ಶಿ ಆಗಿರುವ ತನಕ ನಮ್ಮ ಪೂರ್ತಿ ಬೆಂಬಲ ನಿಮಗಿದೆ"—ಖಾಸಗಿ ಕ್ಷೇತ್ರ ಸಹಕಾರ ರಂಗಕ್ಕೆ ನೀಡಿದ ಈ ಆಶ್ವಾಸನೆ ನನಗೆ ಎಂಟಾನೆ ಬಲ ನೀಡಿತು. ಹಣವಿಲ್ಲವೆಂದು ಒದ್ದಾಡುತ್ತಿದ್ದವನಿಗೆ ಅಯಾಚಿತವಾಗಿ ಅದು ಈಗ ಸಾಕಷ್ಟು ಒದಗಿಬಂದಿತ್ತು. ಸ್ಕೂಲ್ ಬುಕ್ ಕಂಪೆನಿಯವರ ಸಲಹೆ ಮೇರೆಗೆ ನಮಗೆ ಬೇಕಾಗುವ ಲೇಖನ ಸಾಮಗ್ರಿಗಳ ಯಾದಿಯನ್ನು ತಯಾರಿಸಿ ಅವನ್ನು ಪೂರೈಸಲು ಅವರಿಗೆ ಅನುಜ್ಞೆ ಇತ್ತು ನಾನು ಹಿಂತಿರುಗಿದೆ. ಇತ್ತ ಪಠ್ಯಪುಸ್ತಕಗಳನ್ನು ಪ್ರಕಾಶಕರಿಂದಲೇ ನೇರವಾಗಿ ತರಿಸಲು ಪತ್ರವ್ಯವಹಾರವನ್ನು ತೊಡಗಿದೆವು : ಮ್ಯಾಕ್‌ಮಿಲನ್, ಬ್ಲ್ಯಾಕೀ, ಆಕ್ಸ್‌ಫರ್ಡ್, ಓರಿಯಂಟ್ ಲಾಂಗ್‌ಮನ್ಸ್ ಇವೇ ಮುಂತಾದವು ಅಂದಿನ ಪ್ರಕಾಶನ ಸಂಸ್ಥೆಗಳು.

ಮೇ ತಿಂಗಳ ಕೊನೆಯಲ್ಲಿ ಮಳೆ ಎಂದಿನ ಬಿರುಸಿನಿಂದ ಹೊಡೆಯತೊಡಗಿತು. ಮಂಗಳೂರಿನಿಂದ ಲಾರಿ ಹೊರೆ ಲೇಖನ ಸಾಮಗ್ರಿ ಬಂದಿಳಿದಾಗ ಒಂದು ಸಲಕ್ಕೆ ಆ ಮುಗಿಲಾಗಸವೇ ನಮ್ಮ ತಲೆಯ ಮೇಲೆ ಕಳಚಿ ಬಿದ್ದಂತೆ ಅನ್ನಿಸಿತು : ಸುಮಾರು ಎಂಟು ಸಾವಿರ ರೂಪಾಯಿ ಮಾಲು, ಇಪ್ಪತ್ತು ಭಾರೀ ಪಿಂಡಿಗಳು. ಅವನ್ನು ಬಿಚ್ಚಿ ಸಾಮಗ್ರಿಗಳನ್ನು ವರ್ಗೀಕರಿಸಿ ಇನ್‌ವಾಯಿಸಿನ ತಪಶೀಲಿನೊಡನೆ ತಾಳೆ ನೋಡಿ ಮತ್ತೆ ಅಟ್ಟಳಿಗೆಗಳಲ್ಲಿ ವ್ಯಾಪಾರಾನುಕೂಲ್ಯದ ದೃಷ್ಟಿಯಿಂದ ಅಳವಡಿಸಿ ಪೇರಿಟ್ಟಾಗ ಪುರಾಣೋಕ್ತ ರಾಜಸೂಯಾಧ್ವರ ಮಾಡಿ ಮುಗಿಸಿದ ಅನುಭವ ನಮ್ಮದಾಗಿತ್ತು. ಪಠ್ಯಪುಸ್ತಕಗಳೆಲ್ಲವೂ ಬ್ಯಾಂಕ್ ಮೂಲಕ ಬಂದುವು ಅಂದರೆ ಅವನ್ನು ನಗದು ಹಣ ಪಾವತಿಸಿ ಕೊಳ್ಳಬೇಕಾಯಿತು. ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ನಮ್ಮ ವ್ಯಾಪಾರ ಕುದುರಿ ಈ ಸಾಹಸ ಜಯಪ್ರದವಾಗಲೆಂಬ ಉದ್ದೇಶದಿಂದ ಸಾಕಷ್ಟು ಕರಪತ್ರಗಳನ್ನು ಮುದ್ರಿಸಿ (ಆ ದಿನಗಳಂದು ಮಡಿಕೇರಿಯಿಂದ ಪ್ರಕಟವಾಗುತ್ತಿದ್ದ ದೈನಿಕ ಯಾವುದೂ ಇರಲಿಲ್ಲ) ನಮ್ಮ ವ್ಯಾಪಾರ ದರಗಳನ್ನೂ ನಿಯಮಗಳನ್ನೂ ವಿವರಿಸಿ ಊರಿಡೀ ಹಂಚಿದವು. ಮಾದರಿ ನೋಡಿ :

ಪ್ರತಿಯೊಂದು ಬರೆಯುವ ಪುಸ್ತಕದಲ್ಲಿಯೂ ರಟ್ಟಿನ ಮೇಲೆ ಮುದ್ರಿತವಾಗಿರುವಷ್ಟು ಪುಟಗಳು, ರಟ್ಟಿನ ಹೊರತಾಗಿ, ಇರುವುವು.

ಪುಟದ ಗಾತ್ರ ಸ್ಥಳೀಯ ಮಾರುಕಟ್ಟೆಯ ಇತರ ಎಲ್ಲ ಪುಸ್ತಕಗಳ ಪುಟಗಾತ್ರಕ್ಕಿಂತಲೂ ದೊಡ್ಡದು.

ಅತ್ಯಂತ ಉತ್ಕೃಷ್ಟವಾದ ಕಾಡೆಮ್ಮೆ ಛಾಪಿನ ಕಾಗದದಿಂದ ಈ ಪುಸ್ತಕಗಳನ್ನು ತಯಾರಿಸಿದೆ.

ಹಾಗಿದ್ದರೂ ಇವುಗಳ ಮಾರಾಟ ಬೆಲೆ ಮಂಗಳೂರು ನಗರದ ಪೈಪೋಟೀ ಮಾರುಕಟ್ಟೆಯಲ್ಲಿ ಪ್ರಚಲಿತವಾಗಿರುವ ಬೆಲೆಯೇ ಆಗಿದೆ.

ಇತರ ಲೇಖನ ಸಾಮಗ್ರಿಗಳಿಗೂ ಈ ತತ್ತ್ವ ಅನ್ವಯಿಸುತ್ತದೆ. ಮುದ್ರಿತ ಪುಸ್ತಕಗಳ ಬೆಲೆಗಳು ಅವುಗಳ ಮೇಲೆ ನಮೂದಿತವಾಗಿವೆ. ಆ ಬೆಲೆಗಳಿಗೇ ಅವನ್ನು ಮಾರುವೆವು.

ನಿಮ್ಮ ಕಷ್ಟಾರ್ಜಿತ ಹಣಕ್ಕೆ ಉತ್ಕೃಷ್ಟ ಮಾಲು
ವಿನಯಪೂರ್ವಕ ಕ್ಷಿಪ್ರ ಸೇವೆ ದೊರೆಯಬೇಕಾದರೆ
ಬನ್ನಿ ಬನ್ನಿ ಬನ್ನಿ ಓ ಬನ್ನಿ
ಮಡಿಕೇರಿಯ ಗವರ್ನ್‌ಮೆಂಟ್ ಕಾಲೇಜು ಕೋಆಪರೇಟಿವ್ ಸ್ಟೋರ್ಸ್ ಲಿಮಿಟೆಡ್ ಸಂಸ್ಥೆಗೆ!

ಸಹಕಾರ ವ್ಯಾಪಾರೋದ್ಯಮದ ಮಹೋನ್ನತ ನಿದರ್ಶನಕ್ಕೆ !

ಸಂಘದ ಆರಂಭದಿಂದಲೂ ನಾವೊಂದು ಸ್ಪಷ್ಟ ನಿಲುವನ್ನು ತಳೆದಿದ್ದೆವು : ನಮ್ಮ ಕೆಲಸದ ವಿಚಾರ ಸ್ಪಷ್ಟವಾಗಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ನಿವೇದನೆ ಮಾಡಿಕೊಳ್ಳ ತಕ್ಕದ್ದು ; ಯಾವ ಗಿರಾಕಿಯೂ ನಮಗೆ ಕಿರಿಯಸಲ್ಲ, ಯಾವ ವ್ಯಾಪಾರವೂ ನಮ್ಮ ಅಳವಿಗೆ ಮೀರಿದ್ದಲ್ಲ ; ವ್ಯಾಪಾರ ಹಾಗೂ ಸೇವೆಯ ವಿಚಾರದಲ್ಲಿ ಸದಾ ವಿವೃತ ಮನಸ್ಕರಾಗಿರತಕ್ಕದ್ದು ; ಮಡಿಕೇರಿಯ ಮಾರುಕಟ್ಟೆ ವ್ಯವಹಾರದ ವಿಚಾರ ಚಕಾರವನ್ನೂ ಎತ್ತತಕ್ಕದ್ದಲ್ಲ ; ನಮ್ಮ ವ್ಯಾಪಾರದ ಸರ್ವೋತ್ಕೃಷ್ಟತೆ ಒಂದೇ ನಮಗೆ ಜಯದೆಡೆಗಿನ ರಹದಾರಿ ಆಗತಕ್ಕದ್ದು. ನಮ್ಮ ಕಾರ್ಯವಿಧಾನ, ಪ್ರಚಾರ ವೈಖರಿ (ಎಲ್ಲ ಅಧ್ಯಾಪಕರೂ ವಿದ್ಯಾರ್ಥಿಗಳೂ ನಮ್ಮ ರಾಯಭಾರಿಗಳಾಗಿದ್ದರಷ್ಟೆ) ಮೇಲಾಗಿ ಕಾಲೇಜಿನ ಹಿರಿಯ ಹೆಸರು ಇವು ನಮಗೆ ನಾವೆಂದೂ ನಿರೀಕ್ಷಿಸದಿದ್ದಂಥ ವ್ಯಾಪಾರವನ್ನು ತಂದುಕೊಟ್ಟವು. ಮೊದಲೇ ಮಡಿಕೇರಿಯದು ಒಂದು ಸಂವೃತ ಮಾರುಕಟ್ಟೆ. ಅಂಥಲ್ಲಿ ಈ ವಿವೃತ ವ್ಯವಹಾರ ಆ ದಿನಗಳಲ್ಲಿ ಪವಾಡ ವಾಗಿ ಕಂಡಿದ್ದರೆ ಆಶ್ಚರ್ಯ ಏನೂ ಇರಲಿಲ್ಲ. ಶಾಲೆಯ ಎಳೆ ಮಿಡಿಗಳು ಮತ್ತು ಅವರ ಹೆತ್ತವರು ಸಾಲು ಹಿಡಿದು ಮಳೆ ಹೊಡೆತವನ್ನು ಲೆಕ್ಕಿಸದೆ ಗಾಳಿಬೀಡಿನ ಗುಡ್ಡ ಏರಿ ನಮ್ಮ ಅಂಗಡಿಗೆ ಮುತ್ತಿಗೆ ಹಾಕಿದರು. ಬೊಮ್ಮನ ಹಳ್ಳಿಯ ಕಿಂದರಿಜೋಗಿಯ ಬೆನ್ನು ಹಿಡಿದು ಸಾಗಿದ ಅಣುಗರ ಹೊನಲು ಪ್ರಾಯಶಃ ಹೀಗಿದ್ದಿರಬಹುದು. ಕಾಲೇಜಿನ ಬೇಸಗೆ ರಜೆ ಇನ್ನೂ ಮುಗಿಯದ್ದರಿಂದ ನಾವು ಹಗಲಿಡೀ ಯಾವುದೇ ವಿಧವಾದ ವಿಶ್ರಾಂತಿಗೆ ಅವಕಾಶ ಇರದಂತೆ ದುಡಿದು ಈ ಮಹಾಪೂರದಿಂದ ಪಾರಾದೆವು. ನಮಗಿದು ಹೊಸ ಸಾಹಸ, ಆಟ ; ನಮ್ಮ ಹೊಟ್ಟೆಪಾಡಿಗೆ ಸುತರಾಂ ಅನ್ವಯವಾಗದ ವ್ಯವಹಾರ. ಆದರೆ ಪೇಟೆ ಅಂಗಡಿಗಳವರಿಗೋ ? ಅವರ ಅಳಿವು ಉಳಿವುಗಳ ಪ್ರಶ್ನೆ ಇದಾಗಿತ್ತು. ಅವರು ಲೇಖನ ಸಾಮಗ್ರಿಗಳ ಬೆಲೆಗಳನ್ನು ಇಳಿಸಿದ್ದು ನಮ್ಮ ಅಸ್ತಿತ್ವವನ್ನು ಪರೋಕ್ಷವಾಗಿ ಒಪ್ಪಿಕೊಂಡದ್ದಕ್ಕೆ ಪ್ರತ್ಯಕ್ಷ ನಿದರ್ಶನ. ಆದರೆ ಕಾಲೇಜ್ ಸೊಸೈಟಿಯ (ಜನರ ಬಾಯಲ್ಲಿ ಬಂದದ್ದು ಮತ್ತು ಉಳಿದದ್ದು ಈ ಹೆಸರು) ಮಾಲುಗಳ ಗುಣಮಟ್ಟ ಇವುಗಳಿಗೆ ಇರಲಿಲ್ಲ. ಮೇಲಾಗಿ ನಮ್ಮ ಗ್ರಾಹಕ ಸೇವೆ ಜನರಿಗೆ ಒಂದು ನೂತನಾನುಭವವೇ ಆಗಿತ್ತು. ಸರ್ವರಿಗೂ ಸದಾ ನಗುಮೊಗದ ಸೇವೆ, "ಗುಂಡುಪಿನ್ನಿನಿಂದ ತೊಡಗಿ ಹಿಮಾಲಯ ಪರ್ವತದ ತನಕ ಯಾವುದಕ್ಕೂ ಎಲ್ಲದಕ್ಕೂ ಕೇಳಿ ಸದಾ ಕಾಲೇಜ್ ಸೊಸೈಟಿಯನ್ನು" ಎನ್ನುವ ಘೋಷಣೆ—ಇವುಗಳಿಂದ ನಮ್ಮೂರ ಮುಗ್ಧ ಜನತೆ ಆಕರ್ಷಿತವಾದ್ದದ್ದು ಸಹಜವೇ.

ಮಾರುಕಟ್ಟೆಯ ಮೇಲೆ ಸಂಘದ ಸಂಘಟ್ಟನೆ

ಹೀಗೆ ಸರ್ವಸಿದ್ಧರಾಗಿ ಸರ್ವಾಂಗಭೂಷಿತರಾಗಿ ನವ ಕಾಲೇಜುವರ್ಷದ ಪ್ರಾರಂಭವನ್ನು ಸ್ವಾಗತಿಸಿದೆವು. ಕಾವೇರಿಯಲ್ಲಿ ನೀರೇರಿತು, ಸಾಮೂಕಳದಲ್ಲಿ ಕಾವೇರಿತು. ಪೇಟೆ ವ್ಯಾಪಾರಿಗಳು ಹೊಸ ಪಟ್ಟನ್ನು ಹೊಡೆದರು. ಇದರ ಪೆಟ್ಟು ನಮ್ಮ ಆಯಕಟ್ಟು ಪ್ರದೇಶದ ಮೇಲೆ ಬಿರುಸಾಗಿಯೇ ಬಿತ್ತು : ಕಾಲೇಜ್ ಪಠ್ಯ ಹಾಗೂ ಉಪಪಠ್ಯ ಪುಸ್ತಕ ಎಲ್ಲವುಗಳ ಮುದ್ರಿತ ಬೆಲೆಗಳ ಮೇಲೆ ರೂಪಾಯಿಗೆ ಒಂದಾಣೆ ಸೋಡಿ ಬಿಡುವುದಾಗಿ ಅವರು ಘೋಷಿಸಿದ್ದರು. ನಾಲ್ಕು ರೂಪಾಯಿ ಬೆಲೆಯ ಪುಸ್ತಕವನ್ನು ನಾಲ್ಕೂವರೆಗೆ ಮಾರುತ್ತಿದ್ದವರು ಈಗ ಮೂರೂಮುಕ್ಕಾಲಕ್ಕೇ ಕೊಡಲು ಸಿದ್ಧರಾದದ್ದು ವಿದ್ಯಾರ್ಥಿಗಳ ವಿಚಾರದಲ್ಲಿ ಅವರಿಗೆ ಧಿಡೀರನೆ ಉಗಮಿಸಿದ ಮರುಕದ ದ್ಯೋತಕ ಖಂಡಿತ ಅಲ್ಲ ಎಂಬುದು ನಮಗೆ ನಿಚ್ಚಳವಾಗಿದ್ದರೂ ವಿದ್ಯಾರ್ಥಿಗಳಿಗೆ ಇದನ್ನು ಮನವರಿಕೆ ಮಾಡುವುದು ಹೇಗೆ ? ನಗದು ವ್ಯಾಪಾರದ ನಿಷ್ಠುರ ವ್ಯವಹಾರ ಪ್ರಪಂಚದಲ್ಲಿ ನೈತಿಕ ಕೋಮಲತೆಗೆ ಎಡೆ ಎಲ್ಲಿದೆ ? ಯಾವ ಕಾಲೇಜ್ ವಿದ್ಯಾರ್ಥಿಗಳ ಸಾರ್ವಕಾಲಿಕ ಹಿತವನ್ನು ಮುಖ್ಯವಾಗಿ ದೃಷ್ಟಿಯಲ್ಲಿ ಇರಿಸಿಕೊಂಡು ಈ ನಮ್ಮ ಸಂಘವನ್ನು ಆರಂಭಿಸಲಾಗಿತ್ತೋ ಸ್ವತಃ ಆ ವಿದ್ಯಾರ್ಥಿಗಳಿಗೇ ಇದರ ಸೇವೆ ಬೇಕಾಗಿರಲಿಲ್ಲ ಎಂಬ ನಗ್ನಸತ್ಯ ನಮಗೆ ಪ್ರತ್ಯಕ್ಷವಾದಾಗ ಸಂತೋಷಿಸುವ ಸ್ಥಿತಿಯಲ್ಲಿ ನಾವಿರಲಿಲ್ಲ. ಪಠ್ಯಪುಸ್ತಕಗಳ ಮತ್ತು ಅವುಗಳೊಂದಿಗೆ ಇತರಾವಶ್ಯಕತೆಗಳ ವ್ಯಾಪಾರದ ಹೊನಲು ಪೇಟೆಗೆ ಹರಿಯಿತು. ನಾವೂ ಸೋಡಿ ಬಿಡಬಹುದಿತ್ತು. ಆದರೆ ನಮಗೆ ಇದೊಂದು ಗೌರವದ ಪ್ರಶ್ನೆ ಎನ್ನಿಸಿತು : ಪೇಟೆಯ ಅಸ್ತಿತ್ವವನ್ನು ನಾವು ಒಪ್ಪಬೇಕೇ ? ಪೇಟೆಯೊಂದಿಗೆ ಪೈಪೋಟಿಗೆ ಇಳಿಯಬೇಕೇ ? ಸಲ್ಲದು. ಮುದ್ರಿತ ಬೆಲೆಗಳಿಗೆ ಮಾತ್ರ ಪುಸ್ತಕಗಳನ್ನು ಮಾರುವೆವೆಂಬ ನಮ್ಮ ನಿಲುವನ್ನು ನಾವು ತ್ಯಜಿಸಲು ಇಷ್ಟಪಡಲಿಲ್ಲ. ವಿದ್ಯಾರ್ಥಿಗಳಿಗೆ ಈ ವಿಷಯವನ್ನು ಸ್ಪಷ್ಟಪಡಿಸಿದ್ದಾಯಿತು, ತರಗತಿಗಳಲ್ಲಿ ಅಧ್ಯಾಪಕರ ಮೂಲಕ ಬೋಧಿಸಿದ್ದಾಯಿತು, ಅವರ ನೈತಿಕ ಹೊಣೆಗಾರಿಕೆಯನ್ನು ಎತ್ತಿ ಹೇಳಿದ್ದಾಯಿತು. ಆದರೆ ಮೊತ್ತದಲ್ಲಿ ನಮಗೆ ಫಲ ಸಿದ್ಧಿಸಲಿಲ್ಲ. ಸಾವಿರಾರು ರೂಪಾಯಿ ಬೆಲೆಯ ಪುಸ್ತಕಗಳು ನಾವು ಗಳಿಸಿದ ಹೊಸ ಅನುಭವದ ಪ್ರತೀಕಗಳಾಗಿ ಅಟ್ಟಳಿಗೆಗಳಿಂದ ನಮ್ಮನ್ನು ತಿವಿದು ದಿಟ್ಟಿಸುತ್ತಿದ್ದುವು. ಮುಂದಿನ ವರ್ಷ ಅವುಗಳಿಗೆ ಬೇಡಿಕೆ ಒದಗುವುದು ತೀರ ಅಸಂಭಾವ್ಯ. ಬೇರೇನೂ ದಾರಿ ತೋರದೆ ನಾನು ನೇರವಾಗಿ ಪ್ರಕಾಶಕರಿಗೆ ನಮ್ಮ ಪಾಡನ್ನು ತೋಡಿಕೊಳ್ಳುವ ಕಾಗದಗಳನ್ನು ಬರೆದೆ. ಅವರಿಂದ ಬಂದ ಮಾರೋಲೆಗಳು ಸಂಜೀವಿನಿಗಳಾಗಿ ನಮಗೆ ಚೇತನ ನೀಡಿದುವು : ಮಾರಾಟವಾಗದ ಪುಸ್ತಕಗಳನ್ನು ಹಿಂದೆ ಕಳಿಸಿಕೊಡಲು ಅವರು ಸೂಚಿಸಿದ್ದರು.

ಮಳೆಗಾಲದ ಕಾವೇರಿಯ ಗರ್ಜನೆ ಕ್ರಮೇಣ ತಗ್ಗಿತು. ದಂಡೆ ಮೀರಿದ ಉತ್ಸಾಹದಿಂದ ಪ್ರವಹಿಸಿದ ಜೀವವಾಹಿನಿ ಈಗ ಪಾತಳಿಗೆ ಸೀಮಿತವಾಗಿ ಸಾಂಪ್ರದಾಯಿಕ ರೀತ್ಯ ಹರಿಯುತ್ತಿತ್ತು. ನಮ್ಮ ವ್ಯಾಪಾರವೂ ಹಾಗೆ. ಇಪ್ಪತ್ತೈದು ಸಾವಿರ ರೂಪಾಯಿಗಳ ವ್ಯಾಪಾರವನ್ನು ಆ ನಾಲ್ಕೈದು ತಿಂಗಳುಗಳಲ್ಲಿ ಸಾಧಿಸಿದ್ದು ನಮಗೆ ನಂಬಲಾಗದ ದಿಟವಾಗಿತ್ತು. ವ್ಯಾಪಾರದ ಅಮಲು ಇಳಿಯುತ್ತಿದ್ದಂತೆ ನಮಗೊಂದು ಜಾಪಾಳಮಾತ್ರೆ ಸೇವನೆಯ ಅನುಭವ ನೀಡುವ ಪತ್ರ ಮದ್ರಾಸಿನಿಂದ ಬಂತು. ಶಾಯಿ ತಯಾರಕ ಸಂಸ್ಥೆಯೊಂದು "ನೋಟಿಸ್" ಕೊಟ್ಟಿತ್ತು :

“ನೀವು ನಮ್ಮ ಪ್ರಪಂಚ ವಿಖ್ಯಾತ ಶಾಯಿ ಕುಪ್ಪಿಗಳನ್ನು ನಾವು ನಿಗದಿ ಮಾಡಿರುವ ಮಾರಾಟ ಬೆಲೆಗಿಂತ ಕಡಿಮೆ ಬೆಲೆಗೆ ಮಾರುತ್ತಿದ್ದೀರೆಂದು ತಿಳಿದಿದ್ದೇವೆ. ಇದು ತಪ್ಪು. ಇದರಿಂದ ನಮ್ಮ ಸಾರ್ವತ್ರಿಕ ಮಾರುಕಟ್ಟೆ ವ್ಯವಹಾರಕ್ಕೆ ಅಪಾರ ಹಾನಿ ಒದಗಿದೆ. ಒಡನೆ ನೀವು ಈ ಅವ್ಯವ ಹಾರವನ್ನು ನಿಲ್ಲಿಸಿ ಹಾಗೆಂದು ನಮಗೆ ಬರೆದು ದೃಢಪಡಿಸದಿದ್ದರೆ ನಿಮ್ಮ ಮೇಲೆ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಲಾದೀತು.” ಇದಿಷ್ಟು ಆ ಕಾಗದದ ಸಾರಾಂಶ. ನಾವು ಎಸಗಿದ್ದ ಅಪರಾಧ ಏನು ? ಶಾಯಿ ಕುಪ್ಪಿಗಳನ್ನು ನಮಗೆ ಶೇಕಡಾ ಆರೂಕಾಲು ಲಾಭ ಬರುವಂತೆ ಮಾರಿದ್ದು, ಈ ಮಾರಾಟ ಬೆಲೆ ಮುದ್ರಿತ ಬೆಲೆಗಿಂತ ನಾಲ್ಕಾಣೆ ಕಡಿಮೆ ಆದದ್ದು, ಅದ್ದ ರಿಂದ ಪೇಟೆಯ ಪರದರಿಗೆ ಪರದಾಟ ಒದಗಿದ್ದು. ವಾಣಿಜ್ಯ ಪ್ರಪಂಚದ ನೀತಿನಿಯತ್ತು ಕಾನೂನು ವಹಿವಾಟು ಏನೂ ತಿಳಿಯದಿದ್ದ ನಾನು ವ್ಯವಹಾರ ಪ್ರಜ್ಞೆ ವಿಧಿಸಿದ ಪ್ರಕಾರ ಒಡನೆ ಉತ್ತರ ಬರೆದೆ : “ನಾವು ನಮ್ಮ ಅಂಗಡಿಯಲ್ಲಿ ಮಾಲುಗಳನ್ನು ಯಾವ ದರದಲ್ಲಿ ಮಾರಾಟ ಮಾಡಬೇಕು ಎನ್ನುವುದು ನಮ್ಮ ನಿರ್ಧಾರಕ್ಕೆ ಸೇರಿದ್ದು. ಇಲ್ಲಿ ನಿಮ್ಮ ಹಸ್ತಕ್ಷೇಪ ಅನಾವಶ್ಯಕ.” ಇದಕ್ಕೆ ಅವರಿಂದ ಬಂದ ಮಾರೋಲೆಯ ಶ್ರುತಿ ಸ್ವಲ್ಪ ತಗ್ಗಿತ್ತು : ‘‘ನೀವಂದಿರುವುದು ನಿಜ, ಆದರೂ ಸ್ವಲ್ಪ ತಣ್ಣಗೆ ಯೋಚಿಸಿ ನೋಡಿ. ಆಗ ನಾವಂದಿರು ವುದು ಸತ್ಯ ಎಂದು ನಿಮಗೆ ಅರಿವಾಗದಿರದು. ಅಲ್ಲದೇ ನಾವು ನಿಗದಿಸಿರುವ ಮಾರಾಟ ಬೆಲೆಯ ಪ್ರಕಾರ ಮಾರುವುದರಿಂದ ನಿಮಗೆ ದೊರೆವ ಲಾಭವೂ ಅಧಿಕವಾಗುವುದಷ್ಟೆ.’’ ಇದಕ್ಕೆ ನಾನು ಬರೆದ ಉತ್ತರ ಈ ‘‘ಅವ್ಯವಹಾರ’’ ಕ್ಕೆ ಪೂರ್ಣ ವಿರಾಮ ಹಾಕಿತು : “ಮಡಿಕೇರಿಯ ಮಂಜು ಮುಸುಕಿರುವ ಬೆಟ್ಟದ ಕೊಡಿಯ ಮೇಲಿರುವ ನಾವಲ್ಲ ತಣ್ಣಗೆ ಯೋಚಿಸಬೇಕಾದವರು, ಬದಲು, ಮದ್ರಾಸಿನ ಕಲುಷಿತ ಕಾವು ಪರಿಸರದಲ್ಲಿರುವ ನೀವು. ಈ ವಿಚಾರದಲ್ಲಿ ಇನ್ನು ಪತ್ರವ್ಯವಹಾರ ಇಲ್ಲ.” ಮುಂದೆ ಕೆಲವು ತಿಂಗಳ ಬಳಿಕ ಅದೇ ಕಂಪೆನಿ ಯಿಂದ ನಮಗೊಂದು ಕಾಗದ ಬಂತು. ಸುಮಾರು ನಾಲ್ಕುನೂರು ರೂಪಾಯಿ ನಿವ್ವಳ ಮೌಲ್ಯದ ಶಾಯಿ ಕುಪ್ಪಿಗಳ ಭಾಂಗಿಯನ್ನು ಅವರು ಮಡಿಕೇರಿ ಪೇಟೆಯ ಅಂಗಡಿಯೊಂದಕ್ಕೆ ರವಾನಿಸಿದ್ದ ರಂತೆ ; ಆದರೆ ಅದರ ದಾಖಲೆ ಪತ್ರಗಳನ್ನು ಆ ಅಂಗಡಿಯವರು ಬ್ಯಾಂಕಿಗೆ ಹಣ ನೀಡಿ ಪಡೆದುಕೊಳ್ಳದ್ದರಿಂದ ತಮಗೆ ತುಂಬ ತೊಂದರೆ ಆಗಿದೆ ; ನಾವು ನೇರವಾಗಿ (ಅಂದರೆ ಒಡನೆ ಹಣ ಪಾವತಿ ಮಾಡದೆ) ಈ ದಾಖಲೆ ಪತ್ರಗಳನ್ನು ಬ್ಯಾಂಕಿನಿಂದ ತೆಗೆದುಕೊಂಡು ಭಾಂಗಿ ಯನ್ನು ಬಿಡಿಸಿ ಶಾಯಿಕುಪ್ಪಿಗಳು ಮಾರಾಟವಾದ ಬಳಿಕ ಮೊಬಲಗನ್ನು ತಮಗೆ ಪಾವತಿಸಿದರೆ ಮಹದುಪಕಾರವಾಗುತ್ತದೆ ಎಂಬುದಾಗಿ ಆ ಕಾಗದದಲ್ಲಿ ನಿವೇದಿಸಲಾಗಿತ್ತು. ಈ ಸೌಕರ್ಯ ವನ್ನು ನಾವು ಅವರಿಗೆ ಒದಗಿಸಿಕೊಟ್ಟೆವು. ಹೀಗೆ ಜಗಳದಿಂದ ಆರಂಭವಾದ ನಮ್ಮ ಸಂಬಂಧ ಮುಂದೆ ಚಿರಕಾಲ ಸ್ನೇಹವಿಶ್ವಾಸದ ಬೆಸುಗೆಯಾಗಿ ಉಳಿಯಿತು.

ಹೊಸ ಹಸಿರಿನ ಅರಸಿಕೆ

ವ್ಯಾಪಾರದ ಬಿರುಸು ವೇಳಾಪಟ್ಟಿಗೆ ಹೊಂದಿ ಹೋದ ನಮಗೆ ದಸರಾನಂತರದ ದಿವಸ ಗಳು ಭಾರವಾಗತೊಡಗಿದುವು. ಗಿರಾಕಿಗಳಿಗೆ ಈಗ ಅನಾವಶ್ಯಕವಾದ ಅವೇ ಸರಕುಗಳಿಂದ ಏನು ವಹಿವಾಟು ತಾನೇ ಕುದುರೀತು ? ಎಷ್ಟೋ ತನಕ ಮಂದ್ರಸ್ಥಾಯಿಯ ವಿಳಂಬ ನಡೆದೀತೋ ನಮ್ಮ

ಪಾಡು ಎಂದೆನ್ನಿಸಿದಾಗ ಬಿಡಿಚಲು ಜಾಸ್ತಿ ಆಯಿತು. ಆದರೆ ವ್ಯಾಪಾರದಲ್ಲಿ ಮುಂದಿನ ತಿರು ಗಾಸು ಅದೆಂಥ ವಿಸ್ಮಯವನ್ನೋ ಆಘಾತವನ್ನೋ ಕಾದಿರಿಸಿದೆ ಎಂಬುದು ಊಹಾತೀತ. ಅಕ್ಟೋಬರ್ ತಿಂಗಳ ತರುಣದಲ್ಲಿ ಕಾಲೇಜಿನ ಈರ್ವರು ಅಧ್ಯಾಪಿಕೆಯರು ನಮ್ಮ ಅಂಗಡಿಗೆ ಬಂದರು. ತಾವು ತಂದಿದ್ದ ಮಾದರಿ ತುಕ್ಕುರಹಿತ ಉಕ್ಕು (ಸ್ಟೇನ್‌ಲೆಸ್ ಸ್ಟೀಲ್) ಊಟದ ಗಂಗಳವನ್ನು ತೋರಿಸಿ ಅಂಥ ಎರಡು ಗಂಗಳಗಳನ್ನು ತರಿಸಿಕೊಡುವುದು ಸಾಧ್ಯವಾದೀತೇ ಎಂದು ಕೋರಿದರು. ನೇರವಾಗಿ ಯಾವ ಗಿರಾಕಿಗೂ ಇಲ್ಲ ಎನ್ನಬಾರದು ; ಸಾಧ್ಯವಾಗುವಷ್ಟು ಸಹಕಾರ ನೀಡಬೇಕು ಎಂಬ ನಮ್ಮ ಧೋರಣೆಯ ಅನುಸಾರ ಈ ಹೊಸ ಸೇವೆಗೆ ಇಳಿದೆವು. ಮಂಗಳೂರಿನ ಪರಿಚಿತ ಸಗಟು ಅಂಗಡಿಯೊಂದರಿಂದ ಆರು ಗಂಗಳಗಳನ್ನು ತರಿಸಿ ಅಸಲಿನ ಮೇಲೆ ರೂಪಾಯಿಗೆ ಒಂದಾಣೆ ಲಾಭವಿರಿಸಿ ಆ ಅಧ್ಯಾಪಿಕೆಯರಿಗೆ ಎರಡನ್ನು ಮಾರಿದೆವು. "ಇಷ್ಟು ಕಡಿಮೆ ಬೆಲೆ ! ಇದು ಸಾಧ್ಯವೇ ? ನೀವೇನೂ ನಷ್ಟ ಮಾಡಿಕೊಂಡಿಲ್ಲವಷ್ಟೆ ?" ಎಂಬ ಪ್ರಾಮಾಣಿಕ ಸಂದೇಹ ವನ್ನು ಅವರು ಎತ್ತಿದರು. ಇನ್‌ವಾಯಿಸನ್ನೇ ಅವರಿಗೆ ಕೊಟ್ಟು ನೋಡ ಹೇಳಿದೆ. ಅವರು ಆ ಮೊದಲು ಮಡಿಕೇರಿಯಲ್ಲಿ ಕೊಂಡಿದ್ದ ಹದಿನೈದು ರೂಪಾಯಿ ಬೆಲೆಯ ತಟ್ಟೆಗೆ ನಾವು ವಿಧಿ ಸಿದ ಬೆಲೆ ಕೇವಲ ಐದು ರೂಪಾಯಿ. ಅಲ್ಲದೇ ನಮಗೆ ಲಾಭ ಕೂಡ ಉಂಟು ! ಅಷ್ಟೂ ತಟ್ಟೆ ಗಳನ್ನು ಆಗಲೇ ಅವರು ಬಿಕರಿ ಮಾಡಿದರು. ಈ ಸುದ್ದಿ "ಬೆಳಕಿನ ವೇಗಕ್ಕಿಂತಲು ರಭಸದಿ" ಊರಲ್ಲಿ ಹಬ್ಬಿತು. ಮುಂದಿನ ದಿನಗಳಲ್ಲಿ ಸಹೋದ್ಯೋಗಿಗಳೂ ಸಾರ್ವಜನಿಕರೂ ಬಹುಸಂಖ್ಯೆ ಯಲ್ಲಿ ನಮ್ಮಲ್ಲಿಗೆ ಬಂದು ತುಕ್ಕುರಹಿತ ಉಕ್ಕು ಪಾತ್ರೆಗಳಿಗೆ ಬೇಡಿಕೆ ಸಲ್ಲಿಸಿದರು. ಈ ಪ್ರಕಾರ ಆರಂಭವಾದ ನಮ್ಮ ಉಕ್ಕು ವಿಭಾಗ ಬಹು ವ್ಯಾಪಕವಾಗಿ ಬೆಳೆದು ನಮ್ಮನ್ನು ಹೊಸ ಲೋಕಕ್ಕೇ ಕೊಂಡೊಯ್ದಿತು. ಮುಂಬಯಿಯ ಪ್ರಮುಖ ತಯಾರಕ ಕಂಪೆನಿಯೊಂದರೊಡನೆ ನಾವು ತುಕ್ಕು ಪಾತ್ರೆಗಳ ಸಗಟು ವ್ಯಾಪಾರವನ್ನು ತೊಡಗಿದೆವು. ಆದರೆ ಈ ಕಂಪೆನಿಯ ವ್ಯವಹಾರ ಅಹಿತಕರವಾಯಿತು : ತೂಕದಲ್ಲಿ ಕಡಿಮೆ, ಸಂಖ್ಯೆಯಲ್ಲಿ ಕೊರತೆ, ಕೊನೆಗೆ ತೂತಾದ ಅಥವಾ ನಗ್ಗಿಹೋದ ಪಾತ್ರೆಗಳ ಸರಬರಾಜು. ಇವನ್ನೆಲ್ಲ ಯಾದಿ ಮಾಡಿ ತಿಳಿಸಿದರೆ ಒಂದೋ ಉತ್ತರವೇ ಇಲ್ಲ, ಅಥವಾ "ನಮ್ಮ ಗೋದಾಮು ಬಿಡುವ ತನಕ ಎಲ್ಲವೂ ಸರಿಯಾಗಿಯೇ ಇತ್ತು. ಆದ್ದರಿಂದ ಈ ವಿಚಾರದಲ್ಲಿ ನಮ್ಮ ಹೊಣೆಗಾರಿಕೆ ಏನೂ ಇಲ್ಲ" ಎನ್ನುವ ವಿಶ್ವಾಮಿತ್ರ ವಿನ್ಯಾಸ. ಅನಿ ವಾರ್ಯವಾಗಿ ನಾವು ಒಂದು "ತಪ್ಪು" ಮಾಡಬೇಕಾಯಿತು : ಆ ಸಲ ಬಂದ ಅವರ ದಾಖಲೆ ಪತ್ರಗಳನ್ನು (ನಮ್ಮ ಅನುಜ್ಞೆ ಪ್ರಕಾರವೇ ಅವು ಬಂದಿದ್ದರೂ) ತಿರಸ್ಕರಿಸಿದೆವು. ಒಡನೆ ಅವರಿಂದ ನಮಗೆ ತುರ್ತುಕರೆ ಬಂತು, ಬೆದರಿಕೆಯ ಕಾಗದ ತಲಪಿತು, ನೀತಿಬೋಧೆ ಸುರಿಯಿತು. ಎಲ್ಲವಕ್ಕೂ ನಮ್ಮದು ಒಂದೇ ಪಲ್ಲವಿ : ಹಿಂದಿನ ನಮ್ಮ ಪ್ರಾಮಾಣಿಕ ಕೊರತೆ ಪಟ್ಟಿಗಳನ್ನು ಅವರು ಮನ್ನಿಸಿ ನಷ್ಟವನ್ನು ಭರ್ತಿ ಮಾಡಿದ ವಿನಾ ಈ ಭಾಂಗಿಯನ್ನು ನಾವು ಸ್ವೀಕರಿಸುವವ ರಲ್ಲ. ಆಶ್ವಾಸನೆ ಬಂತು. ಈಡೇರಿಕೆ ಹೇಗೆ ? "ನಮ್ಮ ಮೇಲೆ ನಂಬಿಕೆ ಇರಿಸಿ ನೇರವಾಗಿ ಭಾಂಗಿಯನ್ನು ನಮಗೆ ಕೊಡಿ. ನಷ್ಟವನ್ನು ಹೊಂದಿಸಿ ಉಳಿದ ಮೊಬಲಗನ್ನು ನಿಮಗೆ ಒಡನೆ ಪಾವತಿಸುತ್ತೇವೆ" ಎಂದು ಹಾದಿ ತೋರಿಸಿದೆವು. ಅವರಿಗೆ ಒಪ್ಪದೆ ವಿಧಿ ಇರಲಿಲ್ಲ. ಆ ಭಾಂಗಿ ಯಲ್ಲೂ ಕೊರತೆ, ಕಳಪೆ, ವಂಚನೆ ! ಮರಣೋತ್ತರ ಪರೀಕ್ಷೆಯನ್ನು ವಿಧಿಬದ್ಧವಾಗಿ ಮಾಡಿ ತುಕ್ಕು ಹಿಡಿದ ತೂತಾದ ತುಕ್ಕುರಹಿತ ಉಕ್ಕು ಪಾತ್ರೆಗಳನ್ನು ಭಾಂಗಿ ಮಾಡಿ ನಿವ್ವಳ ಮೊತ್ತದ

ಬ್ಯಾಂಕ್ ಡ್ರಾಫ್ಟ್ ಸಮೇತ ಅವರಿಗೆ ವರದಿ ಒಪ್ಪಿಸಿ "ಬದುಕಿದೆಯಾ ಬಡ ಅಸುವೇ"! ಎಂದು ಕೈ ತೊಳೆದುಕೊಂಡೆವು.

ಇಷ್ಟಾಗುವಾಗ 1955ರ ಬೇಸಗೆ ರಜೆ ಶುರುವಾಯಿತು. ಆ ವರ್ಷದ ಮೇ ತಿಂಗಳಿನಲ್ಲಿ ಅಖಿಳ ಮಲೆನಾಡಿಗೆ (ಮಳೆನಾಡಿಗೆ ಕೂಡ) ಸಂಬಂಧಿಸಿದ ಭಾರೀ ವಸ್ತುಪ್ರದರ್ಶನವೊಂದು ಮಡಿಕೇರಿಯಲ್ಲಿ ಏರ್ಪಡುವುದರಲ್ಲಿತ್ತು. ಕೊಡಗಿನ ಮಟ್ಟಿಗೆ ಇಂಥ ಒಂದು ಚಟುವಟಿಕೆ ಅದೇ ಮೊದಲಿನದು. ಮಂತ್ರಿಗಳು ವಿಶೇಷ ಮುತುವರ್ಜಿ ವಹಿಸಿ ಇದರ ಸಂಘಟನೆಗೆ ಬೇಕಾದ ಸಮಸ್ತ ಸವಲತ್ತುಗಳನ್ನು ಒದಗಿಸಿದ್ದರು. ಅಲ್ಲಿ ಆ ಕಡೆ ಚಡಾವಿನ ಕೊಡಿಯ ಆ ಮಗ್ಗುಲಲ್ಲಿ ಸ್ವರ್ಗ ಧರೆಗಿಳಿದಿರುವುದನ್ನು ಇನ್ನೇನು ಈ ಪ್ರದರ್ಶನ ತೊಡಗುವ ವೇಳೆಗೆ ಮಲೆನಾಡಿಗರು ಕಾಣುವುದು ಖರೆ ಎಂದು ವಂದಿಮಾಗಧರು ಸ್ತುತಿಗೈದರು. ನಮ್ಮ ಸಂಘ ಈ ಪ್ರದರ್ಶನದಲ್ಲಿ ಒಂದು ಮಳಿಗೆಯನ್ನು ಇರಿಸಬೇಕೆಂಬ ಕೋರಿಕೆ (ಅಲ್ಲ, ಹುಕುಂ) ಘನ ಸರ್ಕಾರದ ಕಡೆಯಿಂದ ಬಂದಿತ್ತು. ಇದೇನೋ ಸರಿ. ಆದರೆ ಮಳೆಗಾಲದ ಆರಂಭದ ದಿನಗಳಂದು ಮಡಿಕೇರಿಯ ಮ್ಯಾನ್ಸ್ ಕಾಂಪೌಂಡಿನ ಎತ್ತರದ ಬಯಲಿನಲ್ಲಿ ನಾವು ಪುಸ್ತಕಾಲಯವನ್ನು ತೆರೆದುದಾದರೆ ಕೊಡಗಿನ ತೀವ್ರ ನಿಸರ್ಗಪ್ರೇಮಿ ಮಹಾಜನತೆಯಿಂದ ("ಪುಸ್ತಕವೆ ? ಜಡ ಜಡ, ಹಸಿರ ಹರವಿನಲಿ ತೊರೆಯ ಹರಿವಿನಲಿ ಕಡುಮಲೆಗಳೋಟದಲಿ ಕಾಣು ನಿತ್ಯ ಸತ್ಯವನು" ಎಂಬುದಿವರ ಬಾಳ ಹಾಡು) ನಮಗೆ ಯಾವ ಪ್ರೋತ್ಸಾಹವೂ ದೊರೆಯದು ; ಅಷ್ಟೇ ಅಲ್ಲ, ಮಾಲೇ ಹಾಳಾಗಿ ಹೋಗಿ ಬಯಲು ಆಲಯವೆರಡೂ "ನಿನ್ನೊಳಗೇ" ದಿಟ ಎಂಬುದು ದೃಢವಾದೀತು, ಅಷ್ಟೆ ; ನಮ್ಮ ಶ್ರಮ ಪೂರ್ತಿ ವ್ಯರ್ಥವಾದೀತು ಎಂಬುದಾಗಿ ನನ್ನ ಪ್ರಾಮಾಣಿಕ ಅನ್ನಿಸಿಕೆಯನ್ನು ಪ್ರಾಂಶುಪಾಲರಿಗೆ ಅರಿಕೆ ಮಾಡಿದೆ. "ನಮ್ಮ ಅಂಗಡಿ ಇಡುವುದನ್ನಂತೂ ಒಪ್ಪಿ ಆಗಿದೆ. ಆದ್ದರಿಂದ ಈಗ ನೀವು ಮಾಡಬಹುದಾದದ್ದು ಇಷ್ಟೇ—ಹಾಳಾಗದ ಮತ್ತು ಮಾರಾಟವಾಗಬಹುದಾದ ಸಾಮಗ್ರಿಗಳನ್ನು ಇರಿಸಿ ನೋಡಿ" ಎಂದು ಅವರು ಸೂಚಿಸಿದರು.

ಸಹಜವಾಗಿ ನಮ್ಮ ಒಲವು ಉಕ್ಕು ಪಾತ್ರೆಗಳತ್ತ ವಾಲಿತು. ಮಂಗಳೂರಿನ ಸಗಟು ವ್ಯಾಪಾರಿಗಳ ಮೂಲಕ ಮುಂಬಯಿಯ ಸುಪ್ರಸಿದ್ಧ ಪ್ರಾಮಾಣಿಕ ತಯಾರಕರೊಂದಿಗೆ ವ್ಯವಹರಿಸಿ ಉಕ್ಕು ಪಾತ್ರೆಗಳ ಭಾಂಗಿಗಳನ್ನು ತರಿಸಿದೆವು. ಹತ್ತು ಸಾವಿರ ರೂಪಾಯಿಗಳನ್ನು ಈ ಹೊಸ ಸಾಹಸದ ಮೇಲೆ ಹೂಡಿದ್ದೆವು. ಬೆಳ್ಳಿಯ ಬಿಳಿ ಬಣ್ಣದಿಂದ ಥಳ ಥಳಿಸಿ ಮಿರುಗುವ ನಾನಾ ನಮೂನೆಯ ಅಕ್ಷಯ ಪಾತ್ರೆಗಳ ಆ ಸಮುದಾಯ ನಮ್ಮ ಮಳಿಗೆಗೆ ವಿಶೇಷವಾದ ಮೆರುಗನ್ನು ನೀಡಿತ್ತು. ಇಂಥ ಮಳಿಗೆ ಬೇರೊಂದು ಅಲ್ಲಿರಲಿಲ್ಲ. ನಿಜಕ್ಕೂ ಇದೊಂದು ಮಾಯಾಲೋಕವೇ ಸೈ. ಆದರೆ ಮಳಿಗೆಯ ವ್ಯವಸ್ಥಾಪನೆಯಲ್ಲಿ ನಮ್ಮ ಸ್ವಯಂಸೇವಕರಿಗೂ ನನಗೂ ಭಾರಿ ತೊಂದರೆಗಳು ಎದುರಾದುವು. ಒಂದನೆಯದಾಗಿ, ನಮ್ಮ ಮಳಿಗೆಗೆ ಬಾಗಿಲೇ ಇರಲಿಲ್ಲ (ಕಾಲ ಅಶೋಕ ಚಕ್ರದ್ದು, ಅಶೋಕನದ್ದಲ್ಲ ; ಹೀಗಾಗಿ ರಾತ್ರಿ ನಾವೇನು ಮಾಡುವುದು ?); ಎರಡನೆಯದಾಗಿ, ಜಡಿ ಮಳೆಯ ನೀರು ಕೆಸರು ರಾಡಿ ಇವುಗಳಿಂದಾಗಿ ಜಿಗಣೆ ಕಪ್ಪೆ ಗಂಗೆಹುಳ ಮತ್ತು ಮಳೆ ನಿಂತಾಗ ಮಳೆಹಾತೆಗಳ ದಂಡು ಇವುಗಳ ಅವ್ಯಾಹತ ಆಕ್ರಮಣದಿಂದ ಪಾತ್ರೆಗಳು ಪಾರಾದರೂ ಅವುಗಳ ರಕ್ಷಕರಾದ ನಾವು ಪಾರಾಗುವುದೆಂತು ? ಮೂರನೆಯದಾಗಿ, ದಟ್ಟೈಯಿಸುತ್ತಿದ್ದ ಜನತಿಮುಕಿನಲ್ಲಿ ತೆರೆದಂಗಡಿಯ ಆಕರ್ಷಣೆಗಳು ಶುಲ್ಕರಹಿತವಾಗಿ ಮಂಗ

ಮಾಯವಾಗುವುದನ್ನು ನಿವಾರಿಸುವುದು ಹೇಗೆ ? ಆದರೆ ಆ ಎರಡು ವಾರಗಳು ಹದಿನಾಲ್ಕು ವರ್ಷಗಳೇ ಆದದ್ದು ಬೇರೆಯೇ ಒಂದು ಕಾರಣಕ್ಕಾಗಿ—ಅದು ನಮ್ಮ ಮಾನ್ಯ ಸಹಕಾರ ಸಚಿವರಿಗೆ (ವಿದ್ಯಾ ಸಚಿವರೂ ಅವರೇ ಆಗಿದ್ದರು) ಈ ಮಳಿಗೆಯ ಮೇಲೆ ಬಿದ್ದ ವಕ್ರ ದೃಷ್ಟಿಯ ಪರಿಣಾಮವಾಗಿ. ಮೊದಲ ದಿನವೇ ಅವರು ಖುದ್ದು ನನಗೇ ಗದರಿಸಿದ್ದರು : "ಕಾಲೇಜಿನ ಸೊಸೈಟಿ ಉಕ್ಕು ವ್ಯಾಪಾರ ಮಾಡುವುದು ಸುತರಾಂ ಸಲ್ಲದು. ಅದೂ ನೀವು, ಅಧ್ಯಾಪಕರು, ಗೌರವಾನ್ವಿತರು, ಓರ್ವ ಹಲ್ಕಾ ವ್ಯಾಪಾರಿಯಂತೆ ಇಲ್ಲಿ ನಿಂತು ಹಲ್ಕಿರಿಯು ವುದು ನನಗೇನೂ ಒಪ್ಪಿಗೆ ಇಲ್ಲ." ಅವರ ಮಾತಿನ ಸರಣಿ ನನಗೆ ಸರಿ ಎನ್ನಿಸಲಿಲ್ಲ. ಆದರೆ ದೊರೆಯೊಡನೆ ವಾದ ಸಂದೀತೇ ? ಉನ್ನತಾಧಿಕಾರದ ಸರ್ವಜ್ಞತ್ವ ಸರ್ವಶಕ್ತಿತ್ವಗಳಿಗೆ ಅದು ಸಹ್ಯವಾದೀತೇ ? ಆಗ ನನಗಿದ್ದ ವ್ಯಾವಹಾರಿಕ ವಿವೇಚನೆ ಒಂದೇ—ಮಂತ್ರಿಗಳು ಆ ಕಡೆಗೆ ದಿನ ದಿನ ಪಾದಯಾತ್ರೆ ಬೆಳೆಸುತ್ತಿದ್ದ ಕ್ಲುಪ್ತ ವೇಳೆಗಳಲ್ಲಿ ಅತಿ ತುರ್ತು ಕಾರ್ಯನಿಮಿತ್ತ ನಾನು ಅಲ್ಲಿಂದ ದೂರ ತೆರಳಿ ಮರೆಯಾಗಿ ನಿಂತು "ತಾಬೆದಾರಿಕೆಯ ಮಹಿಮೆಯನಿಂದು ಕಂಡೆ" ಎಂಬು ದಾಗಿ ತೋಡಿ ರಾಗದಲ್ಲಿ ಮನದುಮ್ಮಳವನ್ನು ಕೋಡಿ ಹರಿಸುತ್ತಿದ್ದೆ. ವ್ಯಾಪಾರವೇನೋ ಭರ್ಜರಿಯಾಗಿ ನಡೆದು ಹೋಯ್ತು. ಆರ್ಥಿಕವಾಗಿ ನಮ್ಮ ಸಾಹಸ ಪೂರ್ಣ ಯಶಸ್ವಿಯಾಯಿತು. ಮಳಿಗೆ ಮುಚ್ಚಿ ಮನೆಗೆ (=ಕಾಲೇಜಿಗೆ) ಮರಳಿದ ಬಳಿಕ ಒಂದು ದಿನ ನಾನು ಮಂತ್ರಿ ಮಹಾ ಶಯರನ್ನು ಕಾಣಲು ಹೋದೆ. ನನ್ನನ್ನು ಚಿಕ್ಕಂದಿನಿಂದಲೂ ಬಲ್ಲವರು ಅವರು ; ನನ್ನ ವಿಚಾರ ಅಪಾರ ಅಭಿಮಾನವಿದ್ದುದರಿಂದಲೇ ನನ್ನನ್ನು ಮಡಿಕೇರಿ ಕಾಲೇಜಿಗೆ ಅವರು ಆಯ್ದಿದ್ದರು. ನಮ್ಮ ಸಂಘದ ವಿಷಯದಲ್ಲಿ ಅವರಿಗೆ ತುಂಬ ವಿಶ್ವಾಸವಿತ್ತು. ಆದ್ದರಿಂದ ಅವರ ಈ ಹೊಸ ನಿಲುವಿನ ಅಂತರಾರ್ಥವನ್ನು ಅರಿಯಲೇಬೇಕು, ಅದಕ್ಕೆ ಪ್ರತ್ಯಕ್ಷ ಭೇಟಿ ಒಂದೇ ಸರಿಯಾದ ಕ್ರಮ ಎಂದು ನಾನು ಭಾವಿಸಿದೆ.

ಸಚಿವರು ನನ್ನನ್ನು, ನಾನು ನಿರೀಕ್ಷಿಸಿದಂತಲ್ಲದೇ, ತುಂಬ ಹಸನ್ಮುಖಿಗಳಾಗಿ ಎಂದಿನ ಆತ್ಮೀಯತೆಯಿಂದ ಬರಮಾಡಿಕೊಂಡು ತಾವಾಗಿಯೇ ಮಾತು ತೊಡಗಿದರು : "ಬಿಟ್ಟಿ ಕೆಲಸ ಮಾಡಿಯೂ ಬೈಸಿಕೊಳ್ಳಬೇಕಾಯಿತಲ್ಲ ಎಂಬ ನಿಮ್ಮ ಬೇಗುದಿ ನನಗೆ ತಿಳಿಯದ್ದಲ್ಲ. ಆದರೆ ಕಾಲೇಜು ಮುಂದಿಗೆ ಪುಸ್ತಕ ಒದಗಿಸಬೇಕಾದ ನಿಮ್ಮ ಸಂಘ ಈಗ ಪೇಟೆ ವರ್ತಕರಿಗೆ ಸಿಂಹಸ್ವಪ್ನ ವಾಗಿದೆ. ಅವರೆಲ್ಲರೂ ಒಟ್ಟಾಗಿ ನನ್ನಲ್ಲಿಗೆ ಬಂದು ಈ ವಿಚಾರ ಮನವಿ ಒಪ್ಪಿಸಿದ್ದಾರೆ. ನಿಮ್ಮ ಸೇವೆ, ಉತ್ಸಾಹ ಸರಿ. ಆದರೆ ಮಿತಿ ಮೀರಿ ನೆಗೆತ ಬೇಡ."

"ಈಗ ನಾವೇನು ಮಾಡಬೇಕೆಂದು ತಮ್ಮ ಆಜ್ಞೆ ?"

"ಪುಸ್ತಕದ ಅಂಗಡಿಯಾಗಿ ಯಾವ ಗಾತ್ರಕ್ಕೂ ಸಂಘವನ್ನು ಬೆಳೆಸಿ. ಜನರಿಗೆ ಗ್ರಂಥ ಭಂಡಾರಗಳಿಗೆ ಒಳ್ಳೆಯ ಓದಿಗೆ ಬೇಕಾಗುವ ಪುಸ್ತಕಗಳನ್ನು ಒದಗಿಸಿ. ನಮ್ಮ ಜನ ವಿದ್ಯಾ ವಂತರೂ ಸುಸಂಸ್ಕೃತರೂ ಆಗಲು ಅವಶ್ಯವಾಗುವ ಸತ್ಸಾಹಿತ್ಯವನ್ನು ಪ್ರಚಾರ ಮಾಡಿ. ಕಾಲೇಜು ಸಂಘ ಇದನ್ನು ಮಾಡದಿದ್ದರೆ ಬೇರೆ ಇನ್ನಾರು ಮಾಡಬೇಕು ?"

ಅಲ್ಲಿಗೆ ನಮ್ಮ ಉಕ್ಕು ವಿಭಾಗ ಬರಖಾಸ್ತಾಯಿತು. ಓದಿಗೆ ಬೇಕಾಗುವ ಪುಸ್ತಕಗಳ ವಿಭಾಗವನ್ನು ತೆರೆವ ದಿಶೆಯಲ್ಲಿ ಕಾರ್ಯಮಗ್ನರಾದೆವು—ಇದನ್ನು ಮಳೆಗಾಲ ಕಳೆವ ತನಕ ಆರಂಭಿಸುವಂತಿರಲಿಲ್ಲ. 1955ರ ಮಹಾಪೂರ (ಮೇ ಸೆಪ್ಟೆಂಬರ್ ಶ್ರಾಯ) ಮುಗಿದ ಬಳಿಕ

ಗ್ರಂಥ ವಿಭಾಗವನ್ನು ಪರಿಮಿತ ಪ್ರಮಾಣದಲ್ಲಿ ತೆರೆದದ್ದಾಯಿತು. ಆದರೆ ಇತ್ತ ಕಡೆ ವಿದ್ಯಾರ್ಥಿಗಳಿಗಾಗಲಿ ಅಧ್ಯಾಪಕರಿಗಾಗಲಿ ಯಾವುದೇ ಕುತೂಹಲ ಮೊಳೆತದ್ದು ನನ್ನ ಅನುಭವಕ್ಕೆ ಬರಲಿಲ್ಲ. ಕಾಲೇಜಿನಲ್ಲಿ ಅತ್ಯುತ್ಕೃಷ್ಟವಾದ ಗ್ರಂಥಾಲಯವೂ ಗ್ರಂಥಸೇವೆಯೂ ಇದ್ದುವು. ಹೀಗಾಗಿ ಕಾಲೇಜಿಗರು ಯಾರೂ ಪುಸ್ತಕಗಳನ್ನು ಕೊಂಡು ಓದುವ "ದುಸ್ಸಾಹಸ"ಕ್ಕೆ ಕೈ ಹಾಕುತ್ತಿರಲಿಲ್ಲ. ಇನ್ನು ಊರ ಜನ ಕೇವಲ ಪುಸ್ತಕಗಳಿಗಾಗಿ ಊರ ಹೊರಗಿನ ಈ ಅಂಗಡಿಗೆ ಬಂದಾರೇ ? ಖಂಡಿತ ಇಲ್ಲ. ಹೀಗಾಗಿ ಕಾಲೇಜಿನ ಗ್ರಂಥಾಲಯಕ್ಕೂ ಕಾಲೇಜು ವಾರ್ಷಿಕೋತ್ಸವದ ಬಹುಮಾನ ಸಮಿತಿಗೂ ಪುಸ್ತಕಗಳನ್ನು ಒಟ್ಟಾಗಿ ಒದಗಿಸುವ ಸಗಟು ವ್ಯಾಪಾರವಾಗಿ ಮಾತ್ರ ನಮ್ಮ ಗ್ರಂಥ ಸೇವೆ ನಿಲ್ಲಬೇಕಾಯಿತು. ಪರಿಸರದ ವಿಧಿನಿಯಮಗಳಿಗೆ ಅನುವರ್ತಿ ಆಗದ ಪ್ರಯೋಗ ಹೇಗೆ ತಾನೇ ಯಶಸ್ವಿ ಆದೀತು ? ಪರಿಸರವನ್ನೇ ಪರಿವರ್ತಿಸುವ ಆರ್ಥಿಕ ತ್ರಾಣವಾಗಲಿ ಸಂಘಟನಾ ಕೌಶಲವಾಗಲಿ ಒಂದೂವರೆ ವರ್ಷದ ನಮ್ಮ ಬಿಡುವೇಳೆಯ ಬಿಟ್ಟಿ ದುಡಿಮೆಗಾರರ ಮಿದುಳಕೂಸಿಗೆ ಇರಲಿಲ್ಲ. ಇದು ಹಾಗಿರಲಿ. ಈ ದಿಶೆಯಲ್ಲಿ ರೂಢ ಮೌಲ್ಯಗಳ ಬುಡ ಹಂದಾಡಿಸುವ ಕೆಲವು ಸಂಗತಿಗಳ ಅವಿಷ್ಕಾರವಾದದ್ದು ಮಾತ್ರ ನನಗೆ ಒದಗಿದ ಹೊಸ ಲಾಭ.

ಅರ್ಥ ಪ್ರಪಂಚದಲ್ಲಿ ಮಾನವ ವರ್ತನೆಯ ಅರ್ಥ

ಒಂದನೆಯದು, ಬಹುಮಾನ ಸಮಿತಿ ಸದಸ್ಯರೊಬ್ಬರ ಕುರೆ ಆಸೆ. ಸಹಕಾರ ಸಂಘದ ಗೌರವ ಕಾರ್ಯದರ್ಶಿ ಆಗಿದ್ದ ನಾನು ಪದನಿಮಿತ್ತ ಬಹುಮಾನ ಸಮಿತಿಯ ಕಾರ್ಯದರ್ಶಿಯೂ ಆಗಿದ್ದೆ. "ಬುದ್ಧಂ ಶರಣಂ ಗಚ್ಛಾಮಿ" ಎಂದು ಸದಾ ಜಪಿಸುತ್ತಿದ್ದ ಈ ಮಹಾಶಯರು ತಮ್ಮ ಮನೆಯಲ್ಲಿದ್ದ ಒಂದಷ್ಟು ಪುಸ್ತಕಗಳನ್ನು ನನಗೆ ತಂದುಕೊಟ್ಟು ಅವನ್ನು ಸಮಿತಿ ಕೊಂಡು ಬಹುಮಾನಗಳಿಗಾಗಿ ಬಟವಾಡೆ ಮಾಡಬೇಕೆಂದೂ ಆ ಮೊಬಲಗನ್ನು ತಮಗೆ ಪಾವತಿಸಬೇಕೆಂದೂ ಕೋರಿದರು. ಮೊದಲ ವರ್ಷ ಅನುಭವರಾಹಿತ್ಯದಿಂದಲೂ ದಾಕ್ಷಿಣ್ಯದಿಂದಲೂ ಈ ಸ್ಪಷ್ಟ ತಪ್ಪು ಹಾದಿಯಲ್ಲಿ ನಾನು ನಡೆದೆ : ಕ್ರಮವಾದ ಬಿಕರಿ ಚೀಟಿ ತಯಾರಿಸಿ ಅವರಿಂದ ರಶೀತಿ ಪಡೆದು ದುಡ್ಡನ್ನು ಕೊಟ್ಟೆ. ಮುಂದಿನ ವರ್ಷ ಇದೇ ಸನ್ನಿವೇಶ ಮರುಕೊಳಿಸಿದಾಗ ನಾನು ಎಚ್ಚತ್ತಿದ್ದೆ. ಅವರಿಗೆ ನೇರವಾಗಿ ಒಂದು ಮಾತು ಹೇಳಿದೆ : "ಸಂಘದ ಮತ್ತು ನನ್ನ ದೃಷ್ಟಿಯಿಂದ ಕಾನೂನು ರೀತ್ಯ ಈ ವಹಿವಾಟಿನಲ್ಲಿ ಏನೂ ಅರೆಕೊರೆ ಇಲ್ಲ. ಏಕೆಂದರೆ ಸಂಘಕ್ಕೆ ದೊರೆಯಬೇಕಾದ ವಟ್ಟಾ ಬರುತ್ತದೆ, ರಶೀತಿ ಪ್ರಕಾರ ಹಣ ಸಂದಾಯವಾಗುತ್ತದೆ, ಮುಂದೆ ಮಾಲು ಬಿಕರಿ ಆಗುವುದು ಖಾತ್ರಿ. ಆದರೆ ನಿಮ್ಮ ದೃಷ್ಟಿಯಿಂದ ಇದು ಹಿತಕರ ಅಲ್ಲ. ಪುಸ್ತಕ ವ್ಯಾಪಾರಿಗಳಲ್ಲದ ನೀವು, ಖುದ್ದು ನೀವೇ ಪ್ರಕಟಿಸದಿದ್ದ ಇತರ ಪುಸ್ತಕಗಳನ್ನು ಸಂಘಕ್ಕೆ ಮಾರಿರುವುದನ್ನು ಯಾರಾದರೂ ಲೆಕ್ಕ ತಪಾಸಣೆ ವೇಳೆ ಸೂಕ್ಷ್ಮವಾಗಿ ಗಮನಿಸಿದರೆ ಅದರಿಂದ ನಿಮಗೆ ಕಳಂಕ ತಟ್ಟದಿರದು. ಮಹಾಸಭೆಯಲ್ಲಿ ಈ ಪ್ರಶ್ನೆ ಬಂದುದಾದರೆ ಆಗ ನಾನು ಕೂಡ ನಿಮಗೆ ಶಾಮೀಲಾಗಿದ್ದೇನೆ ಎಂಬ ಅರ್ಥ ಧ್ವನಿಸೀತು. ಆದ್ದರಿಂದ ಈ ವ್ಯವಹಾರ ಬೇಡ, ಇಲ್ಲಿಗೇ ಕೈದು ಮಾಡೋಣ." ನನ್ನ ವಿವರಣೆಯನ್ನು ಅವರು ತುಂಬ ಚೆನ್ನಾಗಿ ಅರ್ಥ ಮಾಡಿಕೊಂಡು ಅದಕ್ಕಾಗಿ ನನ್ನನ್ನು ಶ್ಲಾಘಿಸಿದರು ಕೂಡ.

ಎರಡನೆಯದು, ಪುಸ್ತಕ ವಿಕ್ರಯದಲ್ಲಿ ತಪ್ಪು ನಡತೆ. ಬಹುಮಾನವೀಯಲು ಮತ್ತು ಗ್ರಂಥಾಲಯಕ್ಕೆ ಸರಬರಾಜು ಮಾಡಲು ಬೇಕಾಗುವ ಭೂರಿಸಂಖ್ಯೆಯ ವಿವಿಧ ಪ್ರಕಾರಗಳ ಮೇಲಿನ ಬೇರೆ ಬೇರೆ ಭಾಷೆಗಳಲ್ಲಿನ ಪುಸ್ತಕಗಳನ್ನು ಆಯ್ದುಕೊಂಡು ತರಲು ನಾನೇ ನೆರೆ ನಗರಗಳಾದ ಮಂಗಳೂರು, ಮೈಸೂರು, ಬೆಂಗಳೂರುಗಳಿಗೆ ಹೋಗುತ್ತಿದ್ದೆ. ಹೆಚ್ಚಿನ ಅಂಗಡಿಗಾರರು ನೇರ ನಡೆಯುವವರಾಗಿದ್ದುದರಿಂದ ವ್ಯವಹಾರ ಸಲೀಸಾಗುತ್ತಿತ್ತು. ಆದರೆ ಎರಡು ಬಲು ದೊಡ್ಡ ಅಂಗಡಿಗಳಲ್ಲಿ, ನನಗೆ ಆ ತನಕ ಬೇರೆಲ್ಲಿಯೂ ಅನುಭವಕ್ಕೆ ಬಂದಿರದಿದ್ದಂಥ, ಆಮಿಷವನ್ನು ಒಡ್ಡಿದರು : "ನೀವು ಇಡೀ ವ್ಯಾಪಾರವನ್ನು ನಮ್ಮಲ್ಲಿಯೇ ಮಾಡಬೇಕಾಗಿ ವಿನಂತಿಸುತ್ತೇವೆ. ಇದರಿಂದ ನಿಮಗೆ ಸೌಕರ್ಯ ಉಂಟು. ಲಾಭವೂ ಉಂಟು." ಹೆಡ್ಡನಾದ ನಾನು "ನಿಮಗೆ" ಪದವನ್ನು "ನಮ್ಮ ಸಂಘಕ್ಕೆ" ಎಂದು ಅರ್ಥವಿಸಿ "ಖಂಡಿತ ಮಾಡೋಣ. ಆದರೆ ಆ ಲಾಭ ಏನೆಂದು ಸ್ಪಷ್ಟವಾಗಲಿ" ಎಂದೆ. ದೇವಾಧಿದೇವರುಗಳ ಪಟಗಳ ಅಡಿಯಲ್ಲೇ ಕುಳಿತಿದ್ದ ಆ ಶುಭ್ರವಸನಧಾರಿ ಗಾಂಧೀತೊಪ್ಪಿ ಅಲಂಕೃತರು ವಿವರಿಸಿದರು : "ಮುದ್ರಿತ ಬೆಲೆಗಳ ಮೊತ್ತದ ಮೇಲೆ ನಾವು ಶೇಕಡ 20 ಸೋಡಿ ಬಿಡುತ್ತೇವೆ ಹಾಗೂ ಭಾಂಗಿಗಳನ್ನು ನಮ್ಮ ವೆಚ್ಚದಲ್ಲಿ ನಿಮ್ಮ ಅಂಗಡಿ ಬಾಗಿಲಿಗೆ, ಬೇಕಾದರೆ, ಒಂದೆರಡು ತಿಂಗಳುಗಳ ತನಕದ ಕಡ ರೂಪದಲ್ಲಿ ತಲಪಿಸುತ್ತೇವೆ. ಅಲ್ಲಿಯೂ ನಿಮಗೆ ಬೇಡವೆಂದಾದವನ್ನು ನಮ್ಮ ವೆಚ್ಚದಲ್ಲಿ ನಾವು ಹಿಂದೆ ತರಿಸಿಕೊಂಡು ನಿಮಗೆ ಆ ಮೊಬಲಗನ್ನು ವಜಾಮಾಡುತ್ತೇವೆ. ಅಧಿಕೃತ ಇನ್ವಾಯಿಸಿನ ಮೇಲೆ ಶೇಕಡ 10ನ್ನು ಮಾತ್ರ ಕಾಣಿಸುತ್ತೇವೆ, ಉಳಿದ ಶೇಕಡ 10ನ್ನು ನಿಮಗೆ ನಗದಾಗಿ ರಶೀತಿ ಯಾವುದನ್ನೂ ಕೇಳದೇ ಕೊಡುತ್ತೇವೆ."

ವರ್ಷವೊಂದರ ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದ ವ್ಯಾಪಾರ. ಕೇವಲ ಕೈಚಳಕದಿಂದ ಸಾವಿರ ರೂಪಾಯಿ (ಇದು ಆ ದಿನಗಳಲ್ಲಿ ಸಾಧಾರಣ ಮೊತ್ತವೇನೂ ಆಗಿರಲಿಲ್ಲ) ಬರುವುದಾದರೆ ಈ ಸುಲಭದ ಉಭಯಲಾಭ ಮಾರ್ಗ ಏಕಾಗಬಾರದು ? ಇಂಥ ಚಂದ್ರನಖಿ ಆಮಿಷಗಳು ಹೊಣೆ ಹೊತ್ತವರಿಗೆಲ್ಲ ಎದುರಾಗಿ ಅವರನ್ನು ಆಕರ್ಷಿಸುವುದು ಅಪರೂಪವೇನಲ್ಲ. ಚಂದ್ರನಖಿಯ ಹಿಂದೆ ಇರುವ ಶೂರ್ಪನಖಿತ್ವವನ್ನು ಗುರುತಿಸಿ ಅದರಿಂದ ದೂರ ಇರುವ ರಾಮಸತ್ತ್ವ ನಮ್ಮಲ್ಲಿರಲಿ ಎಂದು ಪ್ರಾರ್ಥಿಸುವುದೊಂದೇ ಆರ್ಜವದ ಮಾರ್ಗ. ನನಗೆ ಎದುರಾದ ಎರಡೂ ಸಂದರ್ಭಗಳಲ್ಲಿ ನಾನು ಅವರೊಡನೆ ವಾದಿಸದೆ ಮರುನುಡಿಯದೆ ಎದ್ದು ಹಿಂತಿರುಗಿದ್ದೆ.

ಮೂರನೆಯದು, ವಿದೇಶೀ ಪ್ರಕಟಣೆಗಳ ಕರ್ಣ ಛೇದನ. ಈ ಹಿಕ್ಮತ್ತು ನನಗೆ ತಿಳಿದದ್ದು ಆಕಸ್ಮಿಕವಾಗಿ. ಯಾವುದೋ ಗಡಿಬಿಡಿಯಲ್ಲಿ ಇಬ್ಬರು ಸಗಟು ಪುಸ್ತಕ ವ್ಯಾಪಾರಿಗಳಿಗೆ ಒಂದೇ ಅನುಜ್ಞೆ ನಮ್ಮಲ್ಲಿಂದ ಹೋಗಿತ್ತು. ಭಾಂಗಿಗಳು ಬಂದಾಗ ಇನ್‌ವಾಯಿಸುಗಳ ಮೊತ್ತದಲ್ಲಿ ತುಂಬ ವ್ಯತ್ಯಾಸ ಕಂಡುಬಂದದ್ದರಿಂದ ಬಿಡಿ ಪುಸ್ತಕಗಳ ಬೆಲೆ, ವ್ಯಾಪಾರ ವಟ್ಟಾ ಮುಂತಾದವೆಲ್ಲವನ್ನೂ ಕೂಲಂಕಷವಾಗಿ ತಪಾಸಣೆ ಮಾಡಿ ತಾಳೆ ನೋಡಿದೆವು. ಒಂದೇ ಪುಸ್ತಕ, ಒಂದೇ ವಟ್ಟಾ, ಆದರೆ ನಮೂದಿಸಿದ ಬೆಲೆ ಬೇರೆ ಬೇರೆ. ಕಡಿಮೆ ಬೆಲೆಯ ಅಂಗಡಿಗಾರನಿಂದ ಬಂದ ಪುಸ್ತಕದ ಹೊದಿಕೆಯ ಅಂಚಿನಲ್ಲಿ 20 ಶಿಲಿಂಗ್ ಎಂದು ಬೆಲೆ ಮುದ್ರಿತವಾಗಿತ್ತು. ಆತ ಅದಕ್ಕೆ ವಿನಿಮಯ ದರ ಹನ್ನೆರಡಾಣೆ ಪ್ರಕಾರ 15 ರೂಪಾಯಿ ಬೆಲೆ ವಿಧಿಸಿದ್ದ. ಹೆಚ್ಚು ಬೆಲೆಯ ಅಂಗಡಿಗಾರನಿಂದ ಬಂದ ಪುಸ್ತಕದ ಹೊದಿಕೆಯ ಈ ಭಾಗ ಬಲು ನಯವಾಗಿ ಕತ್ತರಿಸಲ್ಪಟ್ಟು ಅಂತರ್ಧಾನವಾಗಿತ್ತು ; ಬದಲು ಒಳಪುಟದಲ್ಲಿ ಪೆನ್ಸಿಲ್ಲಿನಿಂದ 32

ಶಿಲಿಂಗ್ ಎಂದು ಬರೆಯಲ್ಪಟ್ಟಿತ್ತು. ಈ ಅಂಗಡಿಗಾರ ಆ ಪುಸ್ತಕಕ್ಕೆ ವಿನಿಮಯ ದರ ಪತ್ತಾಣೆ ಪ್ರಕಾರ 20 ರೂಪಾಯಿ ವಿಧಿಸಿದ್ದ. ಕರ್ಣ ಭೇದಿತ ಗ್ರಂಥಗಳನ್ನು ತಿರಸ್ಕರಿಸಿ ವಾಪಾಸು ಮಾಡಿದೆವು.

ನಾಲ್ಕನೆಯದು, ತತ್ತ್ವಶಾಸ್ತ್ರದ ದಿಗ್ದಂತಿ ಕಲಿಸಿದ ಪಾಠ. ಅವರು ನಮ್ಮ ಕಾಲೇಜಿಗೆ ವರ್ಗವಾಗಿ ಬಂದಾಗ ಗಾಳಿಬೀಡಿನ ಪ್ರಶಾಂತ ಪರಿಸರದಲ್ಲಿ ಲಘು ಭೂಕಂಪನವೇ ಆಯಿತು. ತತ್ತ್ವಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿದ್ದ ಐವತ್ತರ ತಪ್ಪು ಮಗ್ಗುಲಲ್ಲಿದ್ದ ಈ ವಾಗ್ಮಿ ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಸಮಸ್ತ ದರ್ಶನಗಳ ಸಾರದ ಮೂರ್ತರೂಪದಂತೆ ಅಲ್ಲಿ ವಿರಾಜಿಸಿದರು ಅವರ ಪಾಠವೇ, ಪ್ರವಚನವೇ ಸಾರ್ವಜನಿಕ ಭಾಷಣವೇ ಖಾಸಗಿ ಸಂಭಾಷಣೆಯೇ ಒಂದೊಂದರಲ್ಲೂ ತಮ್ಮ ಪ್ರತಿಭೆಯಿಂದ ಮತ್ತು ವಿದ್ವತ್ತಿನಿಂದ ನಮ್ಮ ಮನಸ್ಸನ್ನು ಸೂರೆಗೊಂಡರು. ಪ್ರತಿದಿನವೂ ಅವರು ಕಾಲೇಜನ್ನು ಪ್ರವೇಶಿಸುವ ಮುನ್ನ ನಮ್ಮ ಅಂಗಡಿಗೆ ದರ್ಶನವಿತ್ತು ನನ್ನನ್ನು "ಕರ್ಮಯೋಗಿ" ಎಂದು ಮುಂತಾಗಿ ಹೊಗಳಿ ಹರಸಿ ತಮಗೆ ಬೇಕಾದ ವಸ್ತುಗಳನ್ನು ಕಡವಾಗಿ ತೆಗೆದುಕೊಂಡು ಹೋಗುತ್ತಿದ್ದುದು ವಾಡಿಕೆ. ಅದೇ ವೇಳೆ ಅವರ ಕೈಗಳು ತಂತಾವೇ ಗಾಜಿನ ಜಾಡಿಗಳ ಮುಚ್ಚಳಗಳ ಮೇಲೆ ಆಡುತ್ತ ಒಳಗಿನ ದ್ರಾಕ್ಷಿ ಗೋಡಂಬಿ ಪೆಪ್ಪರಮಿಂಟುಗಳ ಮೇಲೆ ಪರಡುತ್ತಿದ್ದುವು. ಕೈಗೆ ಬಂದವು ಬಾಯಿಗೆ ಸಲ್ಲದಿದ್ದಾವೇ? ಅವೂ ಸ್ವೀಟುಗಳು, ನಮ್ಮ ಅಂಗಡಿಯಿಂದ ಯಾವ ಪದಾರ್ಥವೂ ಬಿಟ್ಟಿಯಾಗಿ ಯಾ ಸ್ಯಾಂಪಲ್ ಆಗಿ ಹೋಗತಕ್ಕದ್ದಲ್ಲ, ಮಾರಾಟವಾಗಿಯೇ ಹೋಗತಕ್ಕದ್ದು ಎಂಬುದು ನಾವು ಕಡ್ಡಾಯವಾಗಿ, ನಮ್ಮನ್ನು ಕುರಿತಂತೆ ಕೂಡ, ಪಾಲಿಸಿಕೊಂಡು ಬಂದಿದ್ದ ಶಿಸ್ತು. ಹೀಗಾಗಿ ಮೊದಲು ಕೆಲವು ದಿವಸ ಅವರ ಎದುರೇ ನಾನು ಬಿಲ್ ಹಾಕಿ ಅವರ ಮುಕ್ತಗ್ರಾಸದ ಮೌಲ್ಯವನ್ನು ತೆತ್ತಿದ್ದೆ. ಆದರೆ ಈ ಮಾಮೂಲು "ಮಧುರಪ್ರೀತಿ" ಉಲ್ಬಣಿಸಿದಂತೆ ಒಂದು ದಿನ ನೇರ ಅವರಿಗೆ ಬಿಲ್ ಒಪ್ಪಿಸಿ ಹಣ ಕೇಳಿದೆ.

"ಏನಿದು ?" ಅವರ ಚಕಿತ ಪ್ರಶ್ನೆ.

"ಇದೀಗ ತಾನೇ ತಾವು ಕೊಂಡ ಸ್ವೀಟುಗಳ ಬೆಲೆ."

ಸ್ಯಾಂಪಲ್ ಪ್ರಕರಣ ಪುನರಾವರ್ತಿಸಲಿಲ್ಲ. ಆದರೆ ಹೊಸ ಸಮಸ್ಯೆಯೊಂದು ಉದ್ಭವಿಸಿತು. ಸಾಕ್ಷಾತ್ ಅವರೇ ಒಂದು ದಿವಸ ಒಂದಷ್ಟು ಉದ್ಗ್ರಂಥಗಳ ಹೊರೆಯನ್ನು ಆಳಿನ ಪತ್ತಿರ ಹೊರಿಸಿಕೊಂಡು ಬಂದು ನನ್ನ ಎದುರು ಮಡಗಿದರು : "ಇವೆಲ್ಲ ತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ಅಮೂಲ್ಯ ಗ್ರಂಥಗಳು. ಕಾಲೇಜಿನ ಪುಸ್ತಕ ಭಂಡಾರಕ್ಕೆ ಬೇಕೆಂದು ನಾನೇ ಖುದ್ದು ಮೈಸೂರಿನಲ್ಲಿ ಬಿಕರಿ ಮಾಡಿ ಇವನ್ನು ತಂದಿದ್ದೇನೆ. ಹೇಗೂ ನೀವು ತಾನೇ ಗ್ರಂಥಾಲಯಕ್ಕೆ ಸರಬರಾಜು ಮಾಡುವವರು. ಇವನ್ನು ಅಲ್ಲಿಗೆ ಮಾರಿ ಮೌಲ್ಯವನ್ನು ನನಗೆ ಪಾವತಿ ಮಾಡಿ."

"ಸರಿ, ನೀವೇ ಶಿಫಾರಸು ಮಾಡಿದ ಮೇಲೆ ಹಾಗೆಯೇ ಆಗಲಿ. ಇವುಗಳ ಬೆಲೆ ?"

"ನಾನು ನಗದು ಹಣ ಪಾವತಿ ಮಾಡಿ ತಂದಿದ್ದೇನೆ. 200 ರೂಪಾಯಿಗಳಾಗಿವೆ. ಅಷ್ಟನ್ನು ನೀವು ನನಗೆ ಕೊಟ್ಟರೆ ಸಾಕು. ಇವುಗಳ ಮುಖ ಬೆಲೆ 300 ರೂಪಾಯಿಗಳಾಗುತ್ತವೆ, ನೋಡಿ."

''ಸರಿ, ಹಣ ಪಾವತಿ ಮಾಡಲು ನಮಗೆ ಮೈಸೂರಿನ ಆ ಅಂಗಡಿಯ ಮೂಲ ಇನ್ವಾಯಿಸ್ ಮತ್ತು ರಶೀತಿ ಬೇಕಲ್ಲ.''

''ಅಯ್ಯೋ ! ಅವೆಲ್ಲ ಕಳೆದುಹೋಗಿವೆ. ಪುಸ್ತಕಗಳು ಹೇಗೂ ಇಲ್ಲಿಯೇ ಇವೆಯಲ್ಲ.''

''ಅಡ್ಡಿ ಇಲ್ಲ. ನಾನು ಅವರಿಗೆ ಕಾಗದ ಬರೆದು ದ್ವಿಪ್ರತಿಗಳನ್ನು ತರಿಸಿಕೊಳ್ಳುವೆನು. ಅಂಗಡಿ ಹೆಸರು ?'' ಎನ್ನುತ್ತ ಉದ್ಗ್ರಂಥಗಳನ್ನು ಒಂದೊಂದಾಗಿ ''ಅನಾವರಣ'' ಮಾಡಿದಾಗ ಕಂಡದ್ದೇನು ? ''ದಿ ಹಿಂದೂ'', ''ಟೈಮ್ಸ್ ಆಫ್ ಇಂಡಿಯಾ'', ''ತ್ರಿವೇಣಿ'' ಮುಂತಾದ ಪ್ರಸಿದ್ಧ ಪತ್ರಿಕೆಗಳಿಂದ ವಿಮರ್ಶೆಗಾಗಿ ಮತ್ತು ಹಲವಾರು ಹೆಸರಾಂತ ಪ್ರಕಾಶಕರಿಂದ ಮುಫತ್ತಾಗಿ ಬಂದಿದ್ದ ಪುಸ್ತಕಗಳವು. ಆ ಮೊಹರುಗಳು ನನ್ನನ್ನು ಏಡಿಸುತ್ತಿವೆ ಅನ್ನಿಸಿತು.

''ಸ್ವಾಮೀ ! ನಾನು ಶಂಕರ ಸಿದ್ಧಾಂತದಲ್ಲಿ ಮಿಂದವನಲ್ಲ, ಮಾಧ್ವದರ್ಶನದಲ್ಲಿ ಮುಳುಗಿದವನಲ್ಲ, ಗೀತೆಯ ತಿರುಳನ್ನು ತಿಂದವನಲ್ಲ. ಆದರೆ ಒಂದು ಅಂಶವಂತೂ ನನಗೆ ನಿಚ್ಚಳವಾಗಿ ತಿಳಿದಿದೆ : ನನ್ನ ಇಡೀ ಬದುಕು ಅಖಂಡವಾದ ಸ್ವಚ್ಛ ಗ್ರಂಥವಾಗಿರಬೇಕು. ನಿಮ್ಮ ಈ ದಗಲಬಾಜಿಯಲ್ಲಿ ನನ್ನ ಪಾಲು ಇಲ್ಲ.'' ಇಂಗು ತಿಂದ ಸಿಂಗಳೀಕದಂತೆ ಮುಸುಡು ಸೊಟ್ಟ ಮಾಡಿಕೊಂಡು ಅವರು ಅಲ್ಲಿಂದ ಕಂಬಿ ಕಿತ್ತರು.

ಐದನೆಯದು, ಕಾಲೇಜ್ ಶಿಕ್ಷಣ ಇಲಾಖೆಯ ನಿರ್ದೇಶಕರ ನಿರ್ದೇಶನ. ನಮ್ಮ ಕಾಲೇಜಿನ ವಾರ್ಷಿಕೋತ್ಸವಕ್ಕೆ ಈ ಮಹಾಶಯರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಆ ವೇಳೆಗೆ ನಮ್ಮ ಅಂಗಡಿ ಗಡದ್ದಾಗಿ ಬೆಳೆದು ಸರ್ವವಸ್ತು ಭಂಡಾರದ (ಅಥವಾ ಇಂದಿನ ಜನತಾ ಬಝಾರಿನ) ವ್ಯಾಪ್ತಿ ಅಂತಸ್ತುಗಳನ್ನು ಪಡೆದಿತ್ತು. ನಮಗೆ ಪೂರ್ಣಾವಧಿಯ ಮ್ಯಾನೆಜರ್ ಮುಂತಾದ ನೌಕರರು ಇದ್ದರು. ದೂರವಾಣಿ ಬಂದಿತ್ತು. ಮಡಿಕೇರಿಗೆ ಬಂದ ಸಂದರ್ಶಕರೆಲ್ಲರೂ ಕಾಲೇಜು ಸೂರಡಿಯ ಸಂಘಕ್ಕೆ ಬರುವುದು ಸಂಪ್ರದಾಯವಾಯಿತು. ಮಹಾಘನತೆವೆತ್ತ ನಿರ್ದೇಶಕರು ಸಪರಿವಾರ ನಮ್ಮ ಮಳಿಗೆಗೆ ದರ್ಶನವಿತ್ತರು. ನನ್ನೊಡನೆ ಚೆನ್ನಾಗಿ ಮಾತಾಡಿ, ಆತ್ಮೀಯ ಪ್ರಶ್ನೆಗಳಿಂದ ನನ್ನನ್ನು ಹುರಿದುಂಬಿಸಿ, ಮುಕ್ತವಾಗಿ ಈ ಸೇವೆಯನ್ನು ಪ್ರಶಂಸಿಸಿ, ನಮ್ಮ ರಾಜ್ಯದ (ಕರ್ನಾಟಕ) ಬೇರೆ ಯಾವ ಕಾಲೇಜಿನಲ್ಲಿಯೂ ಈ ಮಾದರಿಯ ಸರ್ವಸೇವಾ ಸಂಘ ಇಲ್ಲವೆಂದು ಹೊಗಳಿ ತಾವೂ ಈ ಸರ್ವೋತ್ಕೃಷ್ಟ ಸಂಘದ ಓರ್ವ ಗ್ರಾಹಕನಾಗಿರಲು ತುಂಬ ಸಂತೋಷಪಡುವುದಾಗಿ ತಿಳಿಸಿದರು. ಸಾಕಷ್ಟು ವಸ್ತುಗಳನ್ನು ಅವರೇ ಖುದ್ದು ಆಯ್ದರು. ನನ್ನ ವಿವರಣೆಗಳಿಂದ ಉಲ್ಲಸಿತರಾದರು. ಅವರು ಆಯ್ದ ಸಾಮಾನುಗಳಿಗೆ ನಾನು ಎಂದಿನಂತೆ ಕ್ರಯ ಚೀಟಿ ಬರೆದು ಅವರ ಕೈಗಿತ್ತೆ. ನನ್ನನ್ನು ಹೊಗಳುವ ವೇಳೆ ಅವರಿಗಿದ್ದ ಉತ್ಸಾಹ ಮತ್ತು ಸಾಮಗ್ರಿಗಳನ್ನು ಆಯುವಾಗ ಅವರಿಗಿದ್ದ ಆಸಕ್ತಿ ಬಿಲ್ಲನ್ನು ಪಡೆಯುವಾಗ ಕಾಣಲಿಲ್ಲ. ತಾವು ಬೆಂಗಳೂರಿಗೆ ಮರಳಿದ ಬಳಿಕ ಮೊಬಲಗನ್ನು ಕಳಿಸುವುದಾಗಿ ಹೇಳಿ ಮಾಲು ಮತ್ತು ಬಿಲ್ ಸಮೇತ ನಿರ್ಗಮಿಸಿದರು. ಮುಂದೆ ತಿಂಗಳು ತಿಂಗಳು ಅವರು ನಿವೃತ್ತರಾಗುವ ತನಕವೂ ಅವರಿಗೆ ನಾವು ನೆನಪಿನೋಲೆಗಳನ್ನು ಕಳಿಸುತ್ತಲೇ ಇದ್ದೆವು. ಆದರೆ ನನ್ನ ಕಾರ್ಯದರ್ಶಿತ್ವದ ಅವಧಿಯಲ್ಲಿ ಆ ಹಣ ಬಂದಿರಲಿಲ್ಲ.

ಇವರೇ ನೆಲದ ಸಾರ

ದೊಡ್ಡವರ ಸಣ್ಣತನದ ಅನುಭವಗಳು ಕೆಲವೇ ಕೆಲವು ಮಾತ್ರ. ಆದರೆ ಸಣ್ಣವರ ದೊಡ್ಡತನದ ಅನುಭವಗಳು ದಿನ ದಿನ ಎಂಬಂತೆ ನನಗೆ ಒದಗಿ ಕೆಲಸಕ್ಕೆ ಅರ್ಥ ಆಯಾಮ ಗಳನ್ನು ನೀಡುತ್ತಿದ್ದವು. ಎರಡನೆಯದಕ್ಕೆ ಕೇವಲ ಮೂರು ಪ್ರಾತಿನಿಧ್ಯಾತ್ಮಕ ನಿದರ್ಶನ ಗಳನ್ನು ಇಲ್ಲಿ ನಿರೂಪಿಸುತ್ತೇನೆ.

ಕೊಡಗಿನ ಅಮ್ಮತ್ತಿಯ ಬಳಿ ಒಂದು ಕುಗ್ರಾಮ. ಅಲ್ಲಿನ ಶಾಲೆಯಲ್ಲಿ ಓದುತ್ತಿದ್ದ ಒಬ್ಬ ಬಡವ ಬೇಸೆ ಹಿಡಿದ ಸಣಕಲು ಹುಡುಗ. ಜಡಿ ಮಳೆಗಾಲದ ಗಾಳಿಮಳೆಯಿಂದ ತೊಯ್ದು ತೊಪ್ಪೆಯಾಗಿ ನಮ್ಮ ಅಂಗಡಿಗೆ ಬಂದ. ತಾನು ಆ ತನಕ ಪ್ರತಿ ವರ್ಷ ಮಡಿಕೇರಿ ಪೇಟೆ ಯಿಂದ ನಗದು ಹಣ ನೀಡಿ ಸಗಟು ದರದಲ್ಲಿ ಒಂದಿಷ್ಟು ಲೇಖನ ಸಾಮಗ್ರಿಗಳನ್ನು ಕೊಂಡೊಯ್ದು ತನ್ನ ಹಳ್ಳಿಯಲ್ಲಿ ಮಾರಿ ನಾಲ್ಕು ಕಾಸು ಸಂಪಾದಿಸಿ ಬದುಕುತ್ತಿದ್ದುದಾಗಿಯೂ ಆದರೆ ಈಚೆಗೆ ಖಾಯಿಲೆಯಿಂದಾಗಿ ಎಲ್ಲ ಬಂಡವಾಳವನ್ನೂ ಕಳೆದುಕೊಂಡು ನಿರ್ಗತಿಕನಾಗಿರು ವುದಾಗಿಯೂ ನಿವೇದಿಸಿದ. ಸಾಲವಾಗಿ ಒಂದಿಷ್ಟು ಮಾಲನ್ನು ನಾವು ಅವನಿಗೆ ಒದಗಿಸಿದ್ದಾದರೆ ಮುಂದಿನ ವಾರ ಮರಳಿ ಬಂದು ಆ ಹಣವನ್ನು ಖಾತ್ರಿ ಪಾವತಿ ಮಾಡುವುದಾಗಿ ಭರವಸೆ ನೀಡಿದ. ಯಾವ ಪ್ರಶ್ನೆಯನ್ನೂ ಹಾಕದೆ ಅವನಿಗೆ ಬೇಕಾದ ಸಾಮಾನುಗಳನ್ನು ಬೇಕಾದಷ್ಟು ಪ್ರಮಾಣದಲ್ಲಿ ಕೊಂಡೊಯ್ಯಲು ಅನುಮತಿ ಕೊಟ್ಟೆ. ಅದರ ಬೆಲೆ ಐವತ್ತು ರೂಪಾಯಿಗಳನ್ನು ದಾಟಲಿಲ್ಲ. ಮತ್ತೆ ಮರುವಾರ ಅವನು ಅದೇ ಹೊತ್ತಿಗೆ ಹಾಜರ್ ; ಹೀಗೆ ಬೆಳೆದ ವ್ಯವಹಾರದ ಪರಿಣಾಮವಾಗಿ ಅವನು ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ಯಶಸ್ವಿಯಾಗಿ ಮುಗಿಸಿ ನಮ್ಮ ಕಾಲೇಜಿನಲ್ಲೇ ವ್ಯಾಸಂಗಕ್ಕೆ ಬಂದ. ಆ ವೇಳೆ ಅವನಿಗೆ ಭಾಗಾವಧಿಯ ಕೆಲಸವನ್ನು ನಮ್ಮ ಸಂಘದಲ್ಲೇ ಒದಗಿಸಿಕೊಟ್ಟು ಸಂಬಳ ಕೊಟ್ಟದ್ದೂ ಇತ್ತು. ಅವನ ನಿಷ್ಠೆ ಅವನನ್ನು ರಕ್ಷಿಸಿತು.

ನಾಪೋಕ್ಲು.ಅಂದರೆ ಕೊಡಗಿನ ಅಂಡಮಾನ್. ಮಳೆಗಾಲದಲ್ಲಿ ಇದೊಂದು ಭಾರೀ ಪರ್ಯಾಯದ್ವೀಪ. ಮಡಿಕೇರಿಗೂ ನಾಪೋಕ್ಲಿಗೂ ನಡುವೆ ಕಾವೇರಿಯ ಮಹಾಪೂರ. ದೋಣಿ, ಜಂಗಲ್ಲುಗಳಲ್ಲಿ ಇದನ್ನು ದಾಟಿ ನಾಪೋಕ್ಲು ದಡ ಐದಬೇಕು, ಅಷ್ಟೆ. ಅಲ್ಲಿನ ಪ್ರಾಥಮಿಕ ಶಾಲೆಯ ಅಧ್ಯಾಪಕರವರು (ಈ ವೃತ್ತಿನಾಮದ ಹಿಂದೆ ಬಡ ಎಂಬ ವಿಶೇಷಣ ಸದಾ ಅಧ್ಯಾ ಹಾರ). ವಯಸ್ಸಿನಲ್ಲಿ ಅವರು ನನಗಿಂತ ಎಷ್ಟೋ ಹಿರಿಯರು. ಪ್ರತಿ ಆದಿತ್ಯವಾರ ನಮ್ಮ ಅಂಗಡಿಗೆ ಬಂದು ತಮ್ಮ ಸರ್ವಋತು ಸದಾ ಸಿದ್ಧ ದ್ವಿಚಕ್ರ ರಥದಲ್ಲಿ (ಸೈಕಲ್) ಹೊರುವಷ್ಟು ಹೇರನ್ನು ನಮ್ಮಿಂದ ಕೊಂಡು ಒಟ್ಟಿ ನಾಪೋಕ್ಲಿಗೆ ಒಯ್ದು ಅವರ ಶಾಲೆಯ ಸಹಕಾರ ಸಂಘ ದಿಂದ ಮಾರಿ ಅದನ್ನೊಂದು ಮಾದರಿ ಸಂಸ್ಥೆಯಾಗಿ ಮಾಡಿದರು. ಅವರು ತಮ್ಮ ಸೇವೆಗೆ ಒಂದು ಪೈಯನ್ನೂ ತೆಗೆದುಕೊಳ್ಳಲಿಲ್ಲ. ಸ್ವತಃ ಸಂಸಾರ ತಾಪತ್ರಯದಿಂದಲೂ ಆರ್ಥಿಕ ಸಂಕಷ್ಟದಿಂದಲೂ ಬಂಧಿತರಾಗಿದ್ದ ಆ ಹಿರಿಯರು ಜನತೆಗೆ ಒಪ್ಪಿಸಿದ ಈ ಸೇವೆಯನ್ನು ಬಣ್ಣಿಸ ಲಾಗಲಿ ಅಳೆಯಲಾಗಲಿ ನನಗೆ ಯೋಗ್ಯತೆ ಸಾಲದು.

ವ್ಯಾಪಾರ ಒಂದು ಅಮಲು. ತತ್ರಾಪಿ ಗೌರವಸೇವೆಯ ವ್ಯಾಪಾರ ಕ್ಷೇತ್ರ ನೇರ ಸಮಾಧಿ ಸ್ಥಿತಿಗೇ ಉತ್ತೇರಣೆಗೊಳಿಸುವ ಅಮೃತಪಾನ. ಇದರ ಮಂಚೂಣಿಯಲ್ಲಿ ನಿಂತವನಿಗೆ ದಿನ ದಿನ ಹೊಸ ಪಸಿರನ್ನು ಅರಸಿ ಸಾಗುವ ತನ್ಮೂಲಕ ವ್ಯಾಪಾರ ಮೊಬಲಗು ಏರಿದ್ದನ್ನು

ನೋಡುವ ರಸಾನಂದ ಒದಗುತ್ತಲೇ ಇರುವುದು. ಸಂಶೋಧಕನಿಗೆ ಪ್ರಾಪ್ತವಾಗುವ ಸಂತೋಷವಾದರೂ ಈ ಬಗೆಯದೇ ಇರಬೇಕು. ಹೀಗೆ ನಾನು ಹುಚ್ಚು ಕುದುರೆಯ ನಾಗಾಲೋಟದಿಂದ ದೌಡಾಯಿಸುತ್ತಿದ್ದಾಗ ಸಹಜವಾಗಿ ಮಾರಾಟ ಸಾಮಗ್ರಿಗಳ ಪೂರೈಕೆ, ಬಂದ ವಸ್ತುಗಳನ್ನು ಓರಣವಾಗಿ ಅಟ್ಟಳಿಗೆಗಳಲ್ಲಿ ಅಳವಡಿಸುವುದು, ಸಮಗ್ರವಾಗಿ ಮಳಿಗೆಯನ್ನು ಸುಟಿಯಾಗಿ ಇರಿಸುವುದು, ಲೆಕ್ಕಪತ್ರಗಳನ್ನು ಆಯಾ ದಿನವೇ ಚುಕ್ತಗೊಳಿಸುವುದು ಇವೇ ಮುಂತಾದ ಅತ್ಯಂತ ಆವಶ್ಯಕ ಹಾಗೂ ಜರೂರು ಆದರೆ ಬಲು ಬಿಡಿಚಲು ಹಿಡಿಸುವಂಥ ಕೆಲಸಗಳು ತುಂಬ ಹಿಂದೆ ಬೀಳುತ್ತಿದ್ದುವು. ಯಾವುದೇ ಸಾಹಸದ ಅಂತಿಮ ಯಶಸ್ಸಿಗೆ ಅದರ ಅಧೋರಚನೆ ಅತಿಭದ್ರವಾಗಿ ಇರಬೇಕಾದದ್ದು ಪ್ರಥಮಾವಶ್ಯಕತೆ ಎಂಬುದು ಸಿದ್ಧಾಂತ ರೂಪದಲ್ಲಿ ಮಾತ್ರ ನನ್ನನ್ನು ಸ್ಪರ್ಶಿಸಿತ್ತು. ಅದನ್ನು ನೆಲಕ್ಕೆ ಇಳಿಸಲು ಬೇಕಾಗುವ ಪ್ರವೃತ್ತಿ ಎಂದೂ ನನ್ನದಲ್ಲ. ಈ ಭೀಕರ ಕೊರಕಲನ್ನು ಸ್ವಯಂಪ್ರೇರಣೆಯಿಂದ ತುಂಬಿ ನಮ್ಮ ಸಂಘಕ್ಕೆ ಉಕ್ಕಿನ ನೆಲಗಟ್ಟನ್ನು ಒದಗಿಸಿದವರು ನನ್ನ ಸಹೋದ್ಯೋಗೀ ಮಿತ್ರರಾದ ಜನಾರ್ದನ ಬಾಳಿಗರು. ಕೆಲಸವೆಲ್ಲ ಅವರದು, ಹೆಸರು ಮಾತ್ರ ನನ್ನದು ಎಂದು ನಾನಿಲ್ಲಿ ಬರೆಯುವುದು ಭಾವುಕತನದಿಂದ ಅಲ್ಲ, ಉಪಚಾರಕ್ಕಾಗಿಯೂ ಅಲ್ಲ.

ಇವರೇ ನೆಲದ ಸಾರ. ಇಂಥ ಬಹುಮಂದಿಯ ಒಡನಾಟ ನಿರಂತರವಾಗಿ ಆ ದಿನ ಒದಗಿದ್ದರಿಂದಲೇ ನಾನು ಎಂದೂ ಹಿಂಗದ ಹುಮ್ಮಸ್ಸಿನಿಂದ ದಣಿವರಿಯದೇ ದುಡಿಯುವುದು ಸಾಧ್ಯವಾಯಿತು.

ಕಾರ್ಯ-ವರದಿ ಮುಖಗಳ ನಡುವೆ ಏರ್ಪಡದ ಸಮಕ್ಷರತೆ

ಯಾವುದೇ ಸಾರ್ವಜನಿಕ ವ್ಯವಹಾರದಲ್ಲಿ ಎರಡು ಪ್ರಮುಖ ಮುಖಗಳನ್ನು ಗುರುತಿಸಬಹುದು : ಕಾರ್ಯಮುಖ, ವರದಿಮುಖ. ವ್ಯವಹಾರದ ಉದ್ದೇಶ ಸಿದ್ಧಿಗೋಸ್ಕರ ಪ್ರತ್ಯಕ್ಷವಾಗಿ ನಾವು ಏನನ್ನು ಎಸಗುವೆವೋ ಅದೇ ಕಾರ್ಯ. ಇದನ್ನು ನಡೆಸುವ ಮುನ್ನ, ನಡೆಸುತ್ತಿರುವ ವೇಳೆ ಮತ್ತು ನಡೆಸಿ ಆದ ಮೇಲೆ ನಾವು ಶೇಖರಿಸಿ, ಸಂಸ್ಕರಿಸಿ, ಬರೆದು ದಫ್ತರಿಸುವ ಸಮಸ್ತ ದಾಖಲೆಗಳೂ ಈ ವ್ಯವಹಾರದ ವರದಿ. ಸಹಕಾರ ಸಂಘದಲ್ಲಿ ಪ್ರತ್ಯಕ್ಷ ವ್ಯಾಪಾರ ಅದರ ಕಾರ್ಯಮುಖವನ್ನು ಬಿಂಬಿಸಿದರೆ ರಶೀತಿ ಪುಸ್ತಕಗಳು, ಲೆಕ್ಕಪತ್ರಗಳು ಮುಂತಾದವು ವರದಿ ಮುಖವನ್ನು ಪ್ರತಿಬಿಂಬಿಸುತ್ತವೆ. ವಾಸ್ತವವಾಗಿ ಇಲ್ಲಿನದು ಬಿಂಬ-ಪ್ರತಿಬಿಂಬ ಸಂಬಂಧವೇ, ದತ್ತ ಮುಹೂರ್ತದಲ್ಲಿ ಯಾವುದು ಬಿಂಬ ಯಾವುದು ಪ್ರತಿಬಿಂಬ ಎಂಬುದರ ನಿರ್ಧರಣೆ ನಾವು ಏನನ್ನು ಅರಸುತ್ತಿದ್ದೇವೆ ಎನ್ನುವುದನ್ನು ಅವಲಂಬಿಸಿದೆ. ವರದಿಯ ತಪಾಸಣೆ ಮಾಡುತ್ತಿರುವಾಗ ಅದು (ವರದಿ) ಬಿಂಬವೂ ಆದ್ದರಿಂದ ಕಾರ್ಯ ಪ್ರತಿಬಿಂಬವೂ ಆಗುತ್ತವೆ. ಕಾರ್ಯ ಹೇಗೆ ನಡೆಯುತ್ತಿದೆ ಎಂಬುದರತ್ತ ಗಮನ ಹರಿಸಿದಾಗ ಅದು ಬಿಂಬ ಆದ್ದರಿಂದ ವರದಿ ಪ್ರತಿಬಿಂಬ ಎನ್ನಿಸಿಕೊಳ್ಳುತ್ತವೆ. ಎರಡೂ ಪರಿಶುದ್ಧವಿದ್ದಾಗ ಉದ್ದೇಶ ಸಿದ್ಧಿ ಸಮರ್ಪಕವಾಗಿರುತ್ತದೆ. ಯಾವುದೇ ಒಂದರಲ್ಲಿ ಐಬು ತಲೆದೋರಿದರೆ ಅದು ಇನ್ನೊಂದಕ್ಕೂ ತಾಗುವುದು ಇಲ್ಲಿನ ಸಯಾಮೀ ಅವಳಿಗಳ ಅವಿನಾಸಂಬಂಧದ ಒಂದು ಮುಖ್ಯ ಲಕ್ಷಣ. ಸಿದ್ಧಾಂತದ ಮಟ್ಟದಲ್ಲಿ ಇದು ಸರಿ. ಆದರೆ ರಂಗಕ್ಕೆ ಇಳಿದ ಪ್ರತಿಯೊಬ್ಬನೂ ಕೆಲವು ಪ್ರಾಯೋಗಿಕ ಸಮಸ್ಯೆಗಳನ್ನು ಎದುರಿಸುತ್ತಾನೆ. ನಮಗೆ ಎದುರಾದಂಥವನ್ನು ಮಾತ್ರ ಇಲ್ಲಿ ಪ್ರಸ್ತಾವಿಸುವೆನು.

ಸಹಕಾರ ಸಂಘವೆಂದು ಹೆಸರು ತಳೆದು ಸಹಕಾರ ಕಾಯದೆಗೆ ಅನುಗುಣವಾಗಿ ರಚಿತವಾದ ಸಂಘದ ಉಪನಿಬಂಧನೆಗಳ ರೀತ್ಯ ಕೆಲಸ ಮಾಡುತ್ತೇವೆ ಎಂದು ಒಪ್ಪಿ ರಂಗಕ್ಕೆ ಧುಮುಕಿದ ನಾವು ಪಾಲಿಸಬೇಕಾಗಿದ್ದ ಕೆಲವು ಮುಖ್ಯ ನಿಯಮಗಳಿವು : ವ್ಯಾಪಾರ ಕ್ಷೇತ್ರದಲ್ಲಿ ಗ್ರಾಹಕ ರಕ್ಷಣೆಯೊಂದನ್ನೇ ಹೆಗ್ಗುರಿಯಾಗಿ ಇರಿಸಿ ದುಡಿಯತಕ್ಕದ್ದು ; ಮುಕ್ತ ಮಾರುಕಟ್ಟೆಯೊಡನೆ ಪೈಪೋಟಿ ನಡೆಸತಕ್ಕದ್ದಲ್ಲ (ಪರದರೊಡನೆ ಸ್ಪರ್ಧೆ ಸಲ್ಲದು) ; ನಾವು ನಡೆಸುವ ಪ್ರತಿಯೊಂದು ವ್ಯವಹಾರವನ್ನೂ ಸಮರ್ಥಿಸುವಂಥ ದಾಖಲೆಗಳನ್ನು ಸಹಕಾರ ಇಲಾಖೆ ವಿಧಿಸಿರುವ ರೀತಿಯಲ್ಲಿ ಬರೆದು ಯಾವಾಗ ಬೇಕೆಂದರೆ ಆಗ ಕ್ಷಿಪ್ರ ತಪಾಸಣೆಗೆ ದೊರೆಯುವಂತೆ ಇಡತಕ್ಕದ್ದು ; ನಮ್ಮ ಸಮಸ್ತ ವ್ಯವಹಾರಗಳೂ ನಿಯತಕಾಲಿಕವಾಗಿ ಕಾರ್ಯನಿರ್ವಾಹಕ ಸಮಿತಿಯ ಕೂಲಂಕಷ ತಪಾಸಣೆಗೆ ಒಳಪಟ್ಟು ಅದರ ಮಂಜೂರಾತಿಯನ್ನು ಪಡೆಯತಕ್ಕದ್ದು. ಇವನ್ನು ನಿಭಾಯಿಸುವಾಗ ಸೀಮಿತ ಕಾಲಾವಕಾಶ, ಸೀಮಿತ ಜನಬಲ (ಎಲ್ಲರೂ ಬಿಟ್ಟಿ ದುಡಿಮೆಗಾರರೇ ; ನಮಗೆ ರಂಗದಲ್ಲಿ ಕುಣಿಯುವುದರಿಂದ ಲಭಿಸುತ್ತಿದ್ದ ಸಂತೋಷ ನೇಪಥ್ಯ ಕಾರ್ಯದಿಂದ ಒದಗುತ್ತಿರಲಿಲ್ಲ–ಮಾನವಸಹಜ ದೌರ್ಬಲ್ಯ ಎನ್ನಿ ಬೇಕಾದರೆ) ಇದ್ದ ನಮ್ಮ ಸಂಘದಲ್ಲಿ ಸಹಜವಾಗಿ ಕಾರ್ಯ–ವರದಿ ಮುಖಿಗಳ ನಡುವೆ ಸಮಶ್ರುತಿ ಸಮತಾಳ ಏರ್ಪಡಲಿಲ್ಲ. ಕನಿಷ್ಠಾವಶ್ಯಕತೆಯನ್ನು ಮಾತ್ರ ನಾವು ಪೂರೈಸಿಕೊಂಡು ಹೋಗಿದ್ದೆವು. ಅಂದರೆ ಪ್ರತಿಯೊಂದು ಮಾರಾಟವನ್ನೂ ಬಿಲ್ ಮೂಲಕವೇ ಮಾಡುವುದು, ಪ್ರತಿಯೊಂದು ನಗದು ಮತ್ತು ಸಾಲ ಕೊಡು–ಕೊಳು ವ್ಯವಹಾರಕ್ಕೂ ಲೆಕ್ಕ ಇಡುವುದು, ದಿನ ದಿನ ನಗದು ಹಣವನ್ನು ಲೆಕ್ಕ ಮಾಡಿ ಅಂದಂದಿನ ವಹಿವಾಟಿನೊಡನೆ ತಾಳೆ ನೋಡಿ ಸರಿಪಡಿಸುವುದು ಇಷ್ಟನ್ನು ಎಚ್ಚರಿಕೆಯಿಂದ ಮಾಡುತ್ತ ಆಯಾ ದಿನದ ಬೀಸುವ ದೊಣ್ಣೆಯಿಂದ ಪಾರಾಗಿ ಮರುದಿನವನ್ನು ಸ್ವಾಗತಿಸುತ್ತಿದ್ದೆವು. ವ್ಯಾಪಾರದ ಬಿರುಸಿನಿಂದಾಗಿ ಆದಿತ್ಯವಾರ ಕೂಡ ರಜೆ ತೆಗೆದುಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ. ಇತ್ತ ಕಾರ್ಯನಿರ್ವಾಹಕ ಸಮಿತಿಯ ಸಭೆಗಳು ಜರಗಲೇ ಇಲ್ಲ, ನಮ್ಮ ಚಟುವಟಿಕೆಗಳಿಗೆ ಅಧಿಕೃತ ಮಂಜೂರಾತಿಯ ಮೊಹರು ಬೀಳಲೇ ಇಲ್ಲ. ದಾಸ್ತಾನು ಪುಸ್ತಕವನ್ನಂತೂ ತೊಡಗಿಯೇ ಇರಲಿಲ್ಲ.

ದಾಸ್ತಾನು ಪುಸ್ತಕದಲ್ಲಿ ಎರಡು ಬಗೆಗಳಿವೆ ಎಂಬುದಾಗಿ ಸಹಕಾರ ಸಂಘಗಳ ಇನ್ಸ್‌ಪೆಕ್ಟರ್ ನಮಗೆ ಹೇಳಿದ್ದರು. ಒಂದನೆಯ ಬಗೆಯದರಲ್ಲಿ ವಸ್ತುವಾರು ಪುಟಗಳನ್ನು ತೆರೆಯಬೇಕು ; ಪ್ರತಿದಿನವೂ ಬಂದ ಮತ್ತು ಹೋದ ವಸ್ತುಗಳ ಸಂಖ್ಯೆಗಳನ್ನು ಈ ಪುಟಗಳಿಗೆ ಬರಾಯಿಸಿ ನಿವ್ವಳ ಸಂಖ್ಯೆ ಕ್ಷಿಪ್ರ ತಪಾಸಣೆಗೆ ದೊರೆಯುವಂತಿರಬೇಕು ; ಈ ಸಂಖ್ಯೆ ಆ ವಸ್ತುವಿನ ವಾಸ್ತವಿಕ ಸಂಖ್ಯೆಗೆ ತಾಳೆ ಆಗಬೇಕು. ಇಂಥ ದಾಸ್ತಾನು ಪುಸ್ತಕ ಸಂಘದ ಸಮಗ್ರ ವಸ್ತುಗಳ ಕ್ರಮೀಕೃತ ಪ್ರತಿಬಿಂಬ. ಇದರಲ್ಲಿನ ಪ್ರತಿಯೊಂದು ನಮೂದಿಗೂ ಒಡನೆ ಪರಿಶೀಲನೆಗೆ ದೊರೆಯುವ ದಾಖಲೆಗಳು ಇದ್ದೇ ಇರುವುದರಿಂದ ಸಂಘದಲ್ಲಿ ಲಪಟಾಯಿಸಿಕೆ ಬಲು ಕಷ್ಟಸಾಧ್ಯವಾಗುತ್ತದೆ. ಹೀಗೆ ಈ ವಸ್ತು–ಪುಟ ದಾಸ್ತಾನು ಪುಸ್ತಕ ಸಂಘದ ಹಿತವನ್ನು ಸದಾ ಕಾದಿಡುವ ಪಡಿಯಳ. ಎರಡನೆಯ ಬಗೆಯದರಲ್ಲಿ ದಿನದಿನ ಮಾರಾಟಕ್ಕಾಗಿ ತರಿಸಿದ ಸಾಮಗ್ರಿಗಳ ಮಾರಾಟ ಬೆಲೆಯನ್ನೂ (ಅಸಲು ಬೆಲೆಯನ್ನು ಅಲ್ಲ) ಆಯಾ ದಿವಸ ನಡೆದ ವ್ಯಾಪಾರ ಮೌಲ್ಯವನ್ನೂ ಯುಕ್ತ ಕಾಲಮುಗಳಲ್ಲಿ ಬರಾಯಿಸುತ್ತ ಸಾಗಬೇಕು. ಈ ಮಾರಾಟ ಮೌಲ್ಯ ಪುಸ್ತಕದ

ಪ್ರಕಾರ ಯಾವುದೇ ದಿನಾಂತ್ಯದಲ್ಲಿ ದೊರೆಯುವ ಸಂಖ್ಯೆ ಆ ಗಳಿಗೆ ಅಲ್ಲಿ ದಾಸ್ತಾನಿನಲ್ಲಿರುವ ಸಾಮಗ್ರಿಗಳ ಒಟ್ಟು ಮಾರಾಟ ಬೆಲೆಗೆ ಸಮವಾಗುತ್ತದೆ. ಮೊದಲನೆಯದು ಶುದ್ಧ ವೈಜ್ಞಾನಿಕವಾದದ್ದು ಎಂಬುದರಲ್ಲಿ ಸಂದೇಹ ಇಲ್ಲ. ಎರಡನೆಯದೋ ಅನುಕೂಲಸಿಂಧು, ಏನೂ ಇಲ್ಲದೇ ಇರುವುದಕ್ಕಿಂತ ಲೇಸು, ಅಷ್ಟೆ. ವಸ್ತು-ಪ್ರತಿ ದಾಸ್ತಾನು ಪುಸ್ತಕವನ್ನು ಸಮರ್ಪಕವಾಗಿ ಮಡಗಲು ಗುಮಾಸ್ತರ ಹಾಗೂ ತಪಾಸಣೆಗಾರರ ಒಂದು ಪಟಾಲವನ್ನೇ ಬೇಕಾಗುತ್ತದೆ. ಮಾರಾಟ ಮೌಲ್ಯ ಪುಸ್ತಕವನ್ನು ಮುಂದುವರಿಸಿಕೊಂಡು ಹೋಗಲು ಇಂಥ ತಾಪತ್ರಯ ಇಲ್ಲದಿದ್ದರೂ ಕೇವಲ ಒಂದೆರಡು ದಿವಸಗಳಲ್ಲೇ ಇದರ ಅಸಹಜತೆ ಹಾಗೂ ನಿಷ್ಪ್ರಯೋಜಕತೆ ಇದರ ಉಪಯುಕ್ತತೆಯ ವಿಚಾರ ನಮ್ಮ ನಂಬಿಕೆಯನ್ನೇ ಕೆಡಿಸಿ ಬಿಡುತ್ತವೆ. ಆದ್ದರಿಂದ ನಾವು ಹಿಡಿದ ಹಾದಿ ಏನು ? ಯಾವ ಬಗೆಯ ದಾಸ್ತಾನು ಪುಸ್ತಕವನ್ನೂ ಇಡಲೇ ಇಲ್ಲ ! ನಮ್ಮ ಮೂಲಭೂತ ಪ್ರಾಮಾಣಿಕತೆಯೇ ನಿಷ್ಠುರ ಶಿಸ್ತೇ ನಿಜವಾದ ದಾಸ್ತಾನು ಪುಸ್ತಕವೆಂದು ಧೈರ್ಯ ತಳೆದು ವ್ಯಾಪಾರವನ್ನು ಮುಂದುವರಿಸಿದೆವು.

ಮೊದಲ ವರ್ಷದ ವ್ಯವಹಾರಗಳನ್ನು ತಪಾಸಣೆ ಮಾಡಲು ಸಹಕಾರ ಇಲಾಖೆಯ ಹಿರಿಯ ಇನ್ಸ್‌ಪೆಕ್ಟರ್ ಬಂದರು. ನಮ್ಮ ಸಂಘ ಸ್ಥಾಪನೆಗೆ ಮುಖ್ಯ ಕಾರಣರಾದ ಈ ಸಹೃದಯರ ಮಾರ್ಗದರ್ಶನದಲ್ಲಿಯೇ ನಾವು ಲೆಕ್ಕಪತ್ರಗಳನ್ನು ಇರಿಸಿದ್ದೆವು. ವಿದ್ಯಾವಂತರು ನಿಸ್ಪೃಹತೆಯಿಂದ ನಡೆಸುತ್ತಿರುವ ಈ ಸಂಘ ಮಾದರಿ ಸಂಸ್ಥೆ ಆಗಬೇಕು ಎಂಬುದು ಇವರ ಆಸೆ. ನಮ್ಮ ಅಪ್ರಬುದ್ಧ ಲೆಕ್ಕಪತ್ರಗಳ ನಡುವೆ ವೈಜ್ಞಾನಿಕ ಕ್ರಮವನ್ನು ತಂದು ವ್ಯವಸ್ಥೆ ಏರ್ಪಡಿಸಲು ಇವರಂಥ ಅನುಭವಿಗಳು ಕೂಡ ಸಾಕಷ್ಟು ಕಾಲ ಹೋರಾಡಬೇಕಾಗಿತ್ತು. ಗಣಿತ ವಿದ್ಯಾರ್ಥಿ ಆದ ನಾನು ವಾಣಿಜ್ಯದ ಅಂಕೆ ಸಂಖ್ಯೆಗಳ ಗೊಂಡಾರಣ್ಯದಲ್ಲಿ ಅವೆಷ್ಟೋ ಒಳದಾರಿಗಳನ್ನು ಆಗಾಗ ಕಂಡುಕೊಂಡು, ಆದರೆ ಎಲ್ಲಿಯೂ ಬಿಡಿಗಾಸು ಸಹ ಪೋಲಾಗದಂತೆ ಎಚ್ಚರ ವಹಿಸಿ, ಮುಂದಕ್ಕೆ ನೆಗೆಯುತ್ತ ದಿನ ದಿನ ತಕ್ಕಡಿಯನ್ನು ಸರಿಯಾಗಿ ಸಂತುಲಿಸಿಕೊಂಡು ಹೋಗುತ್ತಿದ್ದೆ. ಸಾಂಪ್ರದಾಯಿಕ ಲೆಕ್ಕ ನಮೂದು ವಿಧಾನ, ಅದೆಷ್ಟೇ ಅವಶ್ಯ ಹಾಗೂ ವೈಜ್ಞಾನಿಕ ಎಂಬುದು ನನಗೆ ಮನವರಿಕೆ ಆಗಿದ್ದರೂ, ಎಂದೂ ಹಿಡಿಸಲಿಲ್ಲ. ಹೀಗೆ ನಾನು ವಿಹರಿಸುತ್ತಿದ್ದ ನಿರಂಕುಶ ಕ್ಷೇತ್ರದಲ್ಲಿ ವ್ಯವಸ್ಥೆಯ ಅಂಕುಶಪ್ರಯೋಗ ಮಾಡುವುದು, ಅದೂ ಮಾನವೀಯ ಆಸಕ್ತಿ ಮೌಲ್ಯಗಳು ಬೆರೆತಿರುವಲ್ಲಿ, ಎಷ್ಟು ಕಷ್ಟ ಎಂಬುದು ಈ ಬಗೆಯ ವ್ಯವಹಾರಗಳಲ್ಲಿ ಕೈ ಆಡಿಸಿರುವವರಿಗೆ ಎಲ್ಲರಿಗೂ ತಿಳಿದೇ ಇರುವುದು.

ಇನ್ಸ್‌ಪೆಕ್ಟರ್ ಮಹಾಶಯರು "ತಮಸೋಮಾ ಜ್ಯೋತಿರ್ಗಮಯ" ಎಂಬ ಉಕ್ತಿಯಲ್ಲಿ ಅಚಲ ನಂಬಿಕೆ ಇದ್ದವರು. ಅದನ್ನು ಅವರು ಪ್ರತ್ಯಕ್ಷ ಸಾಧಿಸಿ ಲೆಕ್ಕ ಪರಿಶೋಧನ ವರದಿಯನ್ನು ಸಿದ್ಧಪಡಿಸಿದರು. ವ್ಯಾಪಾರ ರಂಗದಲ್ಲಿ, ಗ್ರಾಹಕ ಸೇವೆ ಮತ್ತು ಶಿಕ್ಷಣದಲ್ಲಿ ನಾವು ನಡೆಸಿದ್ದು ಒಂದು ಪವಾಡವೆಂದೇ ಅವರು ಅಂಕೆ ಅಂಶಗಳ ಸಮೇತ ಸಾಬೀತುಪಡಿಸಿದರು. "ಸಹನಾವವತು" ಎಂಬ ನಮ್ಮ ಗುರಿಯನ್ನು ನಾವು ಸಾಧಿಸಿದ್ದೆವು. ಕೊನೆಯಲ್ಲಿ ಅವರು ಒಂದಿಷ್ಟು ವ್ಯವಹಾರ ನೀತಿಯನ್ನು ನನಗೆ ಖುದ್ದಾಗಿ ಬೋಧಿಸಿದರು : "ನಿಸ್ವಾರ್ಥ ಹಾಗೂ ಉತ್ಸಾಹೀ ಕಾರ್ಯಕರ್ತರು ಎಂಥ ವಿಜಯವನ್ನೂ ಸಾಧಿಸಬಹುದು ಎನ್ನುವುದನ್ನು ನಾನಿಲ್ಲಿ ಪ್ರತ್ಯಕ್ಷ ಕಂಡಿದ್ದೇನೆ. ಆದರೆ ಇದೊಂದು ಶಾಶ್ವತ ಸಂಸ್ಥೆಯಾಗಿ ಅಭಿವರ್ಧಿಸುತ್ತ ಮುನ್ನಡೆ

ಯುತ್ತಿರಬೇಕಾದರೆ ನೀವು ಈಗಿಂದಲೇ ಇದನ್ನು ಸುಭದ್ರ ತಳಹದಿಯ ಮೇಲೆ ನೆಲೆಗೊಳಿಸಬೇಕು. ವಿವಿಧ ಲೆಕ್ಕ ಪುಸ್ತಕ ಹಾಗೂ ಪತ್ರಗಳನ್ನು ಸಹಕಾರ ನಿಯಮಾನುಸಾರ ಮಡಗುವ ದಿಶೆಯಲ್ಲಿ ಆದ್ಯ ಲಕ್ಷ್ಯ ಹರಿಸಲೇಬೇಕು. ಇಲ್ಲವಾದರೆ ಖುದ್ದು ನಿಮ್ಮ ಚಾರಿತ್ರ್ಯಕ್ಕೆ ಕೂಡ ಕಳಂಕ ತಟ್ಟುವ ಅಪಾಯ ಉಂಟು. ಹೀಗೆ ಹೇಳುವಾಗ ಕಾಗದ ಪತ್ರ ಸರಿಯಾಗಿ ಇರುವಲ್ಲೆಲ್ಲ ವ್ಯವಹಾರ ತಂತಾನೇ ಪರಿಶುದ್ಧವಾಗಿರುತ್ತದೆ ಎಂಬ ಭ್ರಮೆ ಏನೂ ನನಗಿಲ್ಲ. ಆದರೆ ನಿಮ್ಮ ಹಿತದೃಷ್ಟಿಯಿಂದ ಇದು ತೀರ ಅವಶ್ಯ. ಇದನ್ನು ಹೇಗೆ ಸಾಧಿಸಬಹುದು ಎಂಬುದರ ವಿಚಾರ ನೀವೇ ಯೋಚಿಸಿ ನಿರ್ಧರಿಸಬೇಕು."

ಒಂದು ವಿಷಯವಂತೂ ಆ ವೇಳೆಗೆ ಸ್ಪಷ್ಟವಾಗಿ ನನಗೆ ಅರ್ಥವಾಗಿತ್ತು. ನಮ್ಮ ಸಂಘದ ಸಮಸ್ತ ವರದಿಗಳನ್ನು ಸಮರ್ಪಕವಾಗಿ ಇಡಲು ಬೇಕಾಗುವ ಕಾಲಾವಕಾಶ, ತಾಳ್ಮೆ, ಅನುಭವ ಯಾವುದೂ ಗೌರವ ಕಾರ್ಯಕರ್ತರಾದ ನಮಗೆ ಇರಲಿಲ್ಲ, ಎಂದೂ ಒದಗುತ್ತಲೂ ಇರಲಿಲ್ಲ. ಅನುಭವಿ ಆದ ಗುಮಾಸ್ತನನ್ನು ನೇಮಿಸೋಣ ಎಂದರೆ ಆರ್ಥಿಕವಾಗಿ ನಮಗೆ ಸಾಕಷ್ಟು ತ್ರಾಣ ಇರಲಿಲ್ಲ. (ಸರಕಾರದಿಂದ ಯಾ ಇತರ ಮೂಲಗಳಿಂದ ನಮಗೆ ಧನಸಹಾಯ ಏನೂ ಲಭಿಸಿರಲಿಲ್ಲ). ಆದ್ದರಿಂದ ನಾವೇ, ವ್ಯಾಪಾರ ಎಂದೂ ಹಿನ್ನಡೆಯದಂತೆ, ಸ್ವಸಾಮರ್ಥ್ಯದ ಪರಿಮಿತಿಯೊಳಗೆ ಲೆಕ್ಕಪತ್ರಗಳ ಉಸ್ತುವಾರಿ ಕೂಡ ನೋಡಿಕೊಳ್ಳುತ್ತ ಮುಂದುವರಿಯುವುದೊಂದೇ ತಾತ್ಕಾಲಿಕ ಪ್ರಾಯೋಗಿಕ ಪರಿಹಾರ ಎಂದು ನಿರ್ಧರಿಸಿದೆವು.

ಗುಮಾಸ್ತ ಕಲಿಸಿದ ಪಾಠ

ನಮ್ಮ ಅನುಕೂಲತೆ–ಅನನುಕೂಲತೆ ಒಂದನ್ನೂ ಕೇಳದೆ ಭೂಮಿ ಉರುಳಿತು, ಋತುಗಳು ಪುನರಾವರ್ತಿಸಿದುವು, ಹಳೆ ವಿದ್ಯಾರ್ಥಿಗಳು ನಿರ್ಗಮಿಸಿದರು, ಹೊಸ ಹುರುಪುಗಳು ಅಧಿಕ ಸಂಖ್ಯೆಯಲ್ಲಿ ಆಗಮಿಸಿದುವು. ನಮಗೆ ಮೂರು ವರ್ಷ ಪ್ರಾಯ ಆಗಿಯೇ ಹೋಯಿತು (1957). ಆ ವೇಳೆಗೆ ಕೊಡಗು ರಾಜ್ಯ ಅಖಿಲ ಕರ್ನಾಟಕದಲ್ಲಿ ವಿಲೀನಗೊಂಡಿದ್ದುದರಿಂದ ಕೊಡಗಿನ ಪ್ರಜಾಸರ್ಕಾರ ಬರಖಾಸ್ತಾಗಿತ್ತು. ಇತ್ತ ಗ್ರಾಹಕರಿಂದ ಉಕ್ಕು ಪಾತ್ರೆಗಳಿಗೆ ಬೇಡಿಕೆ ಉಕ್ಕುತ್ತಿತ್ತು. ಒಮ್ಮೆ ರುಚಿ ನೋಡಿದ ಅವರು ಮತ್ತೆ ಅವುಗಳಿಗಾಗಿ ನಮ್ಮಲ್ಲಿಗೆ ಬಂದಾಗ ಹತಾಶರಾಗಿ ಪೇಟೆಗೆ ಹೋಗುತ್ತಿದ್ದರು. ಅಲ್ಲೋ ? ಈಗ ಉಕ್ಕಿನ ದರ ಬೆಳ್ಳಿಯ ದರಕ್ಕೆ ಜಿಗಿದಿತ್ತು–ಸೌದಾಮಿನಿಯ ಕ್ಷಣಿಕ ಮಿಂಚಿನಿಂದ ಉದ್ಭವಿಸಿದ ನಿರ್ವಾತದಲ್ಲಿ ವಾಯು ಅಣುಗಳು ಅಧಿಕ ಸಂಖ್ಯೆಯಲ್ಲಿ ಸಂಘಟ್ಟಿಸುವಂತೆ. ಪ್ರತಿ ವರ್ಷದ ಲೆಕ್ಕ ಪರಿಶೋಧನ ವರದಿಯಲ್ಲಿ ಕಾಣಿಸುತ್ತಿದ್ದ ಅಭ್ಯಂತರಗಳು ಗೌರವ ಕಾರ್ಯದರ್ಶಿಯಾದ ನನ್ನನ್ನು ನೇರ ಸೆರೆಮನೆಗೆ ರವಾನಿಸಲು ಸಾಕಾಗುವಷ್ಟು ಹಿರಿಗಾತ್ರದಲ್ಲಿದ್ದುವು. ಹಿಂದಿನ ವಿದ್ಯಾರ್ಥಿ ಮಿತ್ರರು ಓದು ಮುಗಿಸಿ ಕಾಲೇಜು ಬಿಟ್ಟುಹೋಗಿದ್ದರು. ಹೊಸಬರು ಸಿಗಲಿಲ್ಲ. ಬಾಳಿಗರು ಮತ್ತು ನಾನು ಇಬ್ಬರೇ "ಹಳೆ ಅಪರಾಧಿ"ಗಳಾಗಿ ಉಳಿದವರು. ಆದರೆ ಸಂಘ ನಮ್ಮ ಪೂರ್ಣಾವಧಿಯ ಸೇವೆಯಿಂದಲೂ ತೃಪ್ತಿ ತಳೆವ ಸ್ಥಿತಿಯಲ್ಲಿರಲಿಲ್ಲ. ಇವೆಲ್ಲ ಅಂಶಗಳನ್ನೂ ಅನುಲಕ್ಷಿಸಿ, ಪ್ರಾಂಶುಪಾಲರ ಅನುಮತಿ ಮೇರೆಗೆ, ಎರಡು ನಿರ್ಧಾರಗಳನ್ನು ತಳೆದೆ : ಒಂದು, ಉಕ್ಕು ವಿಭಾಗವನ್ನು ಪುನರಾರಂಭಿಸಿ ಸದಾ ಸ್ತಿಮಿತ ವ್ಯಾಪಾರ ಇರುವಂತೆ ಮಾಡುವುದು ; ಎರಡು, ಪೂರ್ಣಾವಧಿಯ ಒಬ್ಬ ಗುಮಾಸ್ತ–ಮತ್ತು–ಮಾರಾಟಗಾರನನ್ನು ನೇಮಿಸುವುದು.

ಈ ಮೊದಲು ಉಲ್ಲೇಖಿಸಿದ ಇನ್ಸ್‌ಪೆಕ್ಟರ್ ಮಹಾಶಯರು ಈ ವೇಳೆಗೆ ಸ್ಥಳೀಯ ಸಹಕಾರೀ ಶಿಕ್ಷಣಶಾಲೆಯಲ್ಲಿ ಒಬ್ಬ ಶಿಕ್ಷಕರಾಗಿದ್ದರು. ಅವರ ಶಿಫಾರಸಿನ ಮೇರೆಗೆ ಅವರ ಶಿಷ್ಯನೇ ಆದ ಓರ್ವ ಅಭ್ಯರ್ಥಿಯನ್ನು ಗುಮಾಸ್ತನಾಗಿ ನೇಮಿಸಿಕೊಂಡೆವು. ಅತ್ಯಂತ ಶುಭ್ರ ಚಾರಿತ್ರ್ಯವಂತನೀತ, ಕಾರ್ಯನಿಷ್ಠನೀತ, ಶಿಸ್ತುಗಾರನೀತ ಎನ್ನುವ ವಿಚಾರದಲ್ಲಿ ಅವರಿಂದ ನಮಗೆ ಪೂರ್ಣ ಭರವಸೆ ದೊರೆತಿತ್ತು. ಇಲ್ಲಿನ ಸನ್ನಿವೇಶ ಹೇಗಿತ್ತು ? ಹಲವು ಹತ್ತು ಸಾವಿರ ರೂಪಾಯಿ ಮೌಲ್ಯದ ಸಾರ್ವಜನಿಕ ನ್ಯಾಸವನ್ನು ಯಾವುದೇ ವಿಧವಾದ ದಾಖಲೆ ಯಾ ಇಡು ಗಂಟು ಇಲ್ಲದೇ ಅವನಿಗೆ ನಾವು ವ್ಯಾಪಾರಮಾಡಲು ನೇರವಾಗಿ ಒಪ್ಪಿಸುವವರಿದ್ದೆವು-ವಿಶ್ವಾಸಾರ್ಹತೆ, ಪ್ರಾಮಾಣಿಕತೆ, ಋಜುತ್ವ, ಆರ್ಜವ ಎಂಬಿವೇ ಮುಂತಾದ ಅಮೂರ್ತ (ಅಸ್ಪಷ್ಟವೂ ಅನ್ನಿ ಬೇಕಾದರೆ) ಗುಣಗಳನ್ನು ಅವನಲ್ಲಿ ನಾವು ನಿರೀಕ್ಷಿಸಿದ್ದೆವು. ನಾನೂ ಅವನೊಡನೆ ಸಮಭುಜನಾಗಿ, ಈ ಹಿಂದಿನಂತೆಯೇ, ದುಡಿದು ವ್ಯಾಪಾರಾಭಿವೃದ್ಧಿಯನ್ನು ಸಾಧಿಸುವವನಿದ್ದೆ. ಬಾಳಿಗರ ಸೇವೆ ಹಾಗೂ ಆಯ್ದ ಕೆಲವು ವಿದ್ಯಾರ್ಥಿಗಳ ಸೇವೆ ಕೂಡ ನಮಗೆ ದೊರೆಯುತ್ತಿತ್ತು. ಇತ್ತ ನಮ್ಮ ಹೊಸ ಗುಮಾಸ್ತನಿಗೆ ಸ್ಥಳೀಯವಾಗಿ ಎಲ್ಲಿಯೂ ದೊರೆಯದಿದ್ದ ಆರ್ಥಿಕ ಸಂಭಾವನೆ ಮತ್ತು ಇತರ ಸವಲತ್ತುಗಳನ್ನು ನೀಡಿದ್ದೆವು. ಬೋನಸ್, ವೇಳೆ ಮೀರಿದ ದುಡಿಮೆಗೆ ಅಧಿಕ ಸಂಭಾವನೆ, ಸಾಲ ರೂಪದಲ್ಲಿ ಅವನಿಗೆ ಬೇಕಾಗುವ ಸಾಮಗ್ರಿಗಳು ಇವೇ ಮುಂತಾದ ರಿಯಾಯಿತಿಗಳನ್ನು ನಾವಾಗಿಯೇ ತಿಳಿದು ಒದಗಿಸಿದ್ದೆವು. ಅವನು ಸಂತೋಷಿಯಾಗಿ ಪೂರ್ಣನಿಷ್ಠೆಯಿಂದ ಈ ಸಂಘವನ್ನು ಬೆಳೆಸಬೇಕು, ಸಂಘದ ಆದರ್ಶವನ್ನು ಇನ್ನಷ್ಟು ಸಫಲಗೊಳಿಸಬೇಕು ಎಂಬುದು ನಮ್ಮ ಉದ್ದೇಶ. ಆದರೆ ತಿಂಗಳುಗಳು ಉರುಳಿದಂತೆ ಒಂದು ಸಂಗತಿ ಸ್ಪಷ್ಟವಾಯಿತು : ನಮ್ಮ ಗುಮಾಸ್ತನ ಒಲವು ಇದ್ದುದು "ಅಧಿಕ ಸಂಬಳ, ಅಧಿಕ ಸವಲತ್ತು, ಕಡಿಮೆ ಕೆಲಸ"ದ ಕಡೆಗೆ. ತಡವಾಗಿ ಬಂದು ಬೇಗ ಹೋಗಿ ಇದ್ದಾಗ ಕೆಲಸ ಮಾಡದೇ ಗೊಣಗುವುದು ಇವನ ನೀತಿ ಆಯಿತು. ಕಡವಾಗಿ ಇವನು ಕೊಂಡ ಉಕ್ಕು ಪಾತ್ರೆಗಳನ್ನು ನಗದಾಗಿ ಹೊರಗೆ ಮಾರಿ ಚಲಾವಣೆಗೆ ದುಡ್ಡು ಮಾಡಿಕೊಳ್ಳುತ್ತಿದ್ದ ಎಂಬುದು ನನಗೆ ಗೊತ್ತಾಯಿತು. ಅತಿ ಹೆಚ್ಚು ಕೆಲಸ ಇದ್ದ ದಿವಸವೇ ಇವನು ಗೈರುಹಾಜರ್. ಪ್ರತಿ ದಿನ ಸಾಯಂಕಾಲ ನಗದು ಹಣವನ್ನು ತಾಳೆ ಮಾಡುವಾಗ ಹೊಂದಾಣಿಕೆಯೇ ಇರುತ್ತಿರಲಿಲ್ಲ-ಒಂದೊ ಹೆಚ್ಚು ಇಲ್ಲವೆ ಕಡಿಮೆ. ಹೆಚ್ಚು ಹಣ ಇದ್ದರೆ ಬಿಲ್ ಬರೆಯದೇ ವ್ಯಾಪಾರ ನಡೆದಿದೆ ಎಂದೂ ಕಡಿಮೆ ಹಣ ಇದ್ದರೆ ಹಣ ಸೋರಿಹೋಗಿದೆ ಎಂದೂ ಮೊದಲಿಗೆ ಹೊಳೆವ ಕಾರಣ. ಗುಮಾಸ್ತನ ಕುಹಕ ಮನಸ್ಸು ಇಂಥ ಸನ್ನಿವೇಶಗಳನ್ನು ಕೃತಕವಾಗಿ ನಿರ್ಮಿಸಿ ನಮ್ಮನ್ನು ಬೇಸ್ತು ಬೀಳಿಸುವುದು ಅಸಂಭಾವ್ಯ ಏನೂ ಅಲ್ಲ. ವಸ್ತು-ಪುಟ ದಾಸ್ತಾನು ಪುಸ್ತಕ ಇಲ್ಲದ (ವಾಸ್ತವವಾಗಿ ಯಾವುದೇ ವಿಧದ ದಾಸ್ತಾನು ಪುಸ್ತಕ ಇಲ್ಲದ) ನಮ್ಮ ಸಂಘದ ಬೆಲೆ ಬಾಳುವ ಪಾತ್ರೆಗಳನ್ನು ಈತ ನೇರ ಲಪಟಾಯಿಸಿದರೆ ಅದು ನನಗೆ ತಿಳಿವ ಬಗೆಯೇ ಇರಲಿಲ್ಲ–"ಕದಳಿಯೊಳು ಮದದಾನೆ ಹೊಕ್ಕಂಥ" ಪರಿಸ್ಥಿತಿ. ನಿದ್ರಾನಾಶ ಏನೆಂದೇ ಗೊತ್ತಿರದಿದ್ದ ನನಗೆ ಈಗ ಅದರ ಅನುಭವ ಕಟುವಾಗಿ ಆಗತೊಡಗಿತ್ತು. ನನ್ನ ಕೆಲಸ ಏನಾದರೂ ಕಡಿಮೆ ಆಯಿತೇ ? ಕೆಲಸ ಜಾಸ್ತಿ, ಚಿಂತೆ ಹೆಚ್ಚು, ದುಗುಡ ದುಮ್ಮಾನ ದಿನ ದಿನ ಏರಿಕೆ. ಎಲ್ಲಿ ತನಕ ? ಮಾಲಿಕ ಕೆಲಸದ ಹೊಣೆಯನ್ನು ಹಗುರ ಮಾಡಿಕೊಳ್ಳಲು ಸಹಾಯಕನನ್ನು ನೇಮಿಸುವನು. ಆದರೆ ಅವನಿಗೆ ತಿಳಿಯು

ದಂತೆ ಆ ಸಹಾಯಕ ಹೊಸ ಒಂದು ಸಮಸ್ಯೆಯನ್ನು ತನ್ನೊಡನೆ ತಂದಿರುತ್ತಾನೆ. ಹೀಗಾಗಿ ಪರದನಿಗೆ ಈಗ ಮೊದಲಿನ ಕೆಲಸದ ಜೊತೆಗೆ ಈ ಸಮಸ್ಯಾಪರಿಹಾರದ ಚಿಂತೆಯೂ ಸೇರಿಕೊಳ್ಳು ವುದು. ಪಾರ್ಕಿನ್ಸನ್ನನ ಈ ಸೂತ್ರದ ಪ್ರತ್ಯಕ್ಷಾನ್ವಯ ನನ್ನ ಮೇಲೆಯೇ ಆಗ ತೊಡಗಿದಾಗ ಸಹಜವಾಗಿ ನಾನು ಶಾಶ್ವತ ಪರಿಹಾರಾನ್ವೇಷಣೆ ಮಾಡಲು ಹವಣಿಸಿದೆ. ಜಬರದಸ್ತು ಅನು ನಯವಿನಯ ನೀತಿಬೋಧನೆ ಯಾವುದೂ ಅವನನ್ನು ಸರಿ ಹಾದಿಗೆ ತರಲಿಲ್ಲ. ಸ್ವತಃ ಅವನ ಗುರುಗಳನ್ನೇ ನಿಂದಿಸುವ ಧಾರ್ಷ್ಟ್ಯ ಅವನದಾಗಿತ್ತು. ಈಗೀಗ ಕೆಲಸ ಮಾಡದೆ ಹೋರುವುದು, ಎದುರಾಡುವುದು, ಗಿರಾಕಿಗಳೊಡನೆ ಅಸಡ್ಡೆಯಿಂದ ವರ್ತಿಸುವುದು, ವಿನಾಕಾರಣ ಗೈರುಹಾಜ ರಾಗುವುದು ಎಲ್ಲವೂ ಜಾಸ್ತಿ ಆದುವು. ಅವನನ್ನು ವಜಾಗೊಳಿಸುವುದೊಂದೇ ಶಾಶ್ವತ ಪರಿಹಾರ ಎಂದು ಭಾವಿಸಿ ಯುಕ್ತ ಮುಹೂರ್ತಕ್ಕಾಗಿ ಹೊಂಚುಹಾಕುತ್ತಿದ್ದೆ. ಈ ಪೊಲೀಸ್– ಕಳ್ಳ ವ್ಯವಹಾರ ನನಗೆ ತುಂಬ ಸಂಕಟವನ್ನೂ ಕ್ಲೇಶವನ್ನೂ ಉಂಟುಮಾಡುತ್ತಿತ್ತು. ಆದರೆ ವಿಧಿ ಬೇರೆ ಇರಲಿಲ್ಲ.

ಒಂದು ಅಪರಾಹ್ನ. ತರಗತಿ ಪಾಠ ಮುಗಿಸಿದ ಬಳಿಕ ಎಂದಿನಂತೆ ನಾನು ಸಂಘಕ್ಕೆ ಬಂದು ಗಲ್ಲದಲ್ಲಿ ಕುಳಿತೆ. ಗಿರಾಕಿಗಳು ಬರುತ್ತಿದ್ದರು. ಗುಮಾಸ್ತ ಗೋಣಗುತ್ತ ಅವರಿಗೆ ಸಾಮಾನು ಕೊಡುತ್ತಿದ್ದ ; ನಾನು ಬಿಲ್ ಬರೆದು ಹಣ ಪಡೆಯುತ್ತಿದ್ದೆ. ಹೀಗೆಯೇ ಮುಂದು ವರಿಯುತ್ತಿದ್ದಾಗ ಒಬ್ಬ ವಿದ್ಯಾರ್ಥಿ ಬಂದು "ಸರ್ ! ನಾನು ಇದೀಗ ತಾನೇ ಕೊಂಡು ಹೋದ ಈ ಕ್ಲಿಪ್ಪರ್ ಪೆನ್ ಬದಲು ಹೆಚ್ಚು ಕ್ರಯದ ಬೇರೆ ಒಂದು ಪೆನ್ ಬೇಕು" ಎಂದು ಅದನ್ನೂ ಅದರ ಬಿಲ್ಲನ್ನೂ ನನಗೆ ಕೊಟ್ಟ. ಬಿಲ್ಲಿನ ಮೇಲೆ ಪೆನ್ನಿನ ಬೆಲೆ ರೂ 4.50 ನ್ನು ಗುಮಾಸ್ತ ಸರಿಯಾಗಿಯೇ ಬರೆದಿದ್ದ. ಅದರ ದ್ವಿಪ್ರತಿಯನ್ನು ನಾನು ಸಹಜವಾಗಿ ತೆರೆದು ನೋಡಿದಾಗ ಅಲ್ಲಿ ಕಂಡದ್ದೇನು ? ಆ ಇಂಗಾಲ ಪ್ರತಿಯಲ್ಲಿ ಸ್ಪಷ್ಟವಾಗಿ ಇದ್ದದ್ದು "ಸ್ವೀಟ್ಸ್ 0.25." ಮೂಲ ಬಿಲ್ಲನ್ನೂ ದ್ವಿಪ್ರತಿಯನ್ನೂ ಗುಮಾಸ್ತನ ಎದುರೊಡ್ಡಿದೆ. ಈ ಹಠಾತ್ ಆಕ್ರಮಣ ದಿಂದ ತತ್ತರಿಸಿಹೋದ ಆತ ಆ ಕ್ಷಣ ದೀರ್ಘ ದಂಡ ಪ್ರಣಾಮ ಮಾಡಿ "ತಪ್ಪಾಯ್ತು, ತಪ್ಪಾಯ್ತು ಕ್ಷಮಿಸಬೇಕು ಸರ್" ಎಂದು ಅತ್ತ. ಆ ಗಳಿಗೆಯಲ್ಲಿ ನಾನು ಯಾವ ಪ್ರತಿಕ್ರಿಯೆ ಯನ್ನೂ ವ್ಯಕ್ತಪಡಿಸದೆ (ನನ್ನ ಸ್ವಭಾವಕ್ಕೆ ತೀರ ವಿರುದ್ಧವಾದ ವರ್ತನೆ ಇದು) ಗಿರಾಕಿಗಳೆಲ್ಲ ರನ್ನೂ ತೃಪ್ತಿಪಡಿಸಿ ಕಳಿಸಿದ್ದಾಯಿತು. ಅಂದಿನ ಸಂಜೆಯ ಲೆಕ್ಕ ತಪಾಸಣೆ ಮುಗಿಯಿತು. ಮಾಮೂಲಿನಂತೆ ಹಣದಲ್ಲಿ ಖೋತಾ ಇತ್ತು. ಈ ವೇಳೆಗೆ ನನ್ನ ಮನಸ್ಸು ಪೂರ್ಣಾಹುತಿಗೆ ಪಕ್ವವಾಗಿತ್ತು. ಆದ್ದರಿಂದ ಯಾವ ಉದ್ವೇಗವೂ ಇಲ್ಲದೇ ಶಾಂತವಾಗಿ ಆದರೆ ಖಚಿತವಾಗಿ ಮಾತಾಡತೊಡಗಿದೆ.

"ನಿಮ್ಮ ಮೇಲೆ ನಾವು ಇರಿಸಿದ ವಿಶ್ವಾಸಕ್ಕೆ, ನಿಮಗೆ ನೀಡಿದ ರಿಯಾಯಿತಿಗಳಿಗೆ ಸರಿ ಯಾದ ಪ್ರತಿಫಲ ದೊರೆಯಿತು."

"ಮನ್ನಿಸಬೇಕು ಸರ್ ! ತಪ್ಪಾಯಿತು."

"ಖಚಿತ ಪುರಾವೆ ದೊರೆತದ್ದರಿಂದ ತಾನೇ ಈ ನಿಮ್ಮ ತಪ್ಪೊಪ್ಪಿಗೆ ? ನಮ್ಮ ಲೆಕ್ಕಕ್ಕೆ ಸಿಕ್ಕದೇ ಸೋರಿಹೋದ ಪ್ರಸಂಗಗಳೆಷ್ಟೊ ?"

ಮಾತಿಲ್ಲ. ನಾನೇ ಮುಂದುವರಿಸಿದೆ : "ಈಗೇನು ಮಾಡಬೇಕು ?"

"ಕ್ಷಮಿಸಿ ಬಿಡಿ ಸರ್. ಮುಂದೆ ನೀವು ಹೇಳಿದ ಹಾಗೆ ವಿಧೇಯನಾಗಿ ಇರುವೆನು."

"ವಿಶ್ವಾಸಘಾತಕ್ಕೆ ಕ್ಷಮೆ ಇಲ್ಲ. ಈಗ ಎರಡು ಪರ್ಯಾಯಗಳನ್ನು ಸೂಚಿಸುತ್ತೇನೆ : ಈ ಪ್ರಸಂಗವನ್ನು ಪೋಲೀಸರಿಗೆ ಒಪ್ಪಿಸುವುದು ಒಂದು, ಮರುಮಾತಾಡದೆ ಈಗೀದೀಗಲೇ ನೀವು ರಾಜೀನಾಮೆ ಕಾಗದ ಬರೆದು ಒಪ್ಪಿಸಿ ಇಲ್ಲಿಂದ ಹೊರಟುಹೋಗುವುದು ಎರಡು. ಹೇಳಿ, ಏನುಮಾಡುತ್ತೀರೆಂದು?"

ಅವನು ಅತ್ತ, ಗೋಗರೆದ, ಕಾಲು ಹಿಡಿದ. ಇವೆಲ್ಲ ನಾಟಕಗಳಿಗೆ ನಾನು ಬಗ್ಗಲಿಲ್ಲ, ಜಗ್ಗಲಿಲ್ಲ. ಕೊನೆಗೆ ರಾಜೀನಾಮೆ ಕಾಗದ ನಾನು ಹೇಳಿದಂತೆ ಬರೆದು ನಮ್ಮಲ್ಲಿಂದ ಬಿಡುಗಡೆಗೊಂಡು ತೊಲಗಿ ಹೋದ. ಹೀಗೆ ಒಂದು ದುಸ್ವಪ್ನ ಕರಗಿ ಹೋಯಿತು. ಅವನ ಒಂದು ವರ್ಷದ ಸೇವಾವಧಿಯಲ್ಲಿ ಸೋರಿ ಮರೆ ಆಗಿರಬಹುದಾದ ಹಣ, ಮಾಲು ಎಷ್ಟು ಎಂಬುದರ ಅಂದಾಜೇ ನನಗೆ ಆಗಲಿಲ್ಲ.

ಈ ಘಟನೆ ನನ್ನೆದುರು ಎರಡು ಮುಖ್ಯ ಪ್ರಶ್ನೆಗಳನ್ನು ಎತ್ತಿತು : ಅವನ ದುರ್ವರ್ತನೆ ವೈಯಕ್ತಿಕ ಅಪರಾಧವೆಂದು ತಿಳಿಯಬೇಕೇ ? ಅಥವಾ ಸಹಕಾರ ರಂಗದಲ್ಲಿ (ವ್ಯಾಪಕವಾಗಿ ಸಾರ್ವಜನಿಕ ವಲಯದಲ್ಲಿ) ಹಬ್ಬುತ್ತಿರುವ ವೈರಸ್ಸಿನ ಪ್ರತೀಕವೆಂದು ಭಾವಿಸಬೇಕೇ ? ಸಮಕಾಲೀನರು ಯಾರೂ ಇವುಗಳಿಗೆ ಉತ್ತರ ನೀಡಲಾರರು.

ಬಹುಮುಖಿಯಾಗಿ ಬೆಳೆದ ಸಂಘ

ಬುದ್ಧಿವಂತನಾದ ವಂಚಕನಿಗಿಂತಲೂ ದಡ್ಡನಾದ ಪ್ರಾಮಾಣಿಕನೇ ಲೇಸು ಎಂದು ತೀರ್ಮಾನಿಸಿ ಇಂಥ ಒಬ್ಬನನ್ನು ಅರಸಲು "ಕರಿಯ ಕೈಗೆ ಕುಸುಮ ಮಾಲೆಯಿತ್ತು" ಕಳಿಸಿದೆವು. ನಮ್ಮ ಅದೃಷ್ಟದಿಂದ ನಗುಮೊಗದ ದುಡಿಮೆಗಾರ ಪ್ರಾಮಾಣಿಕ ಬಡವನೊಬ್ಬ ದೊರೆತ. ಇವನಿಗೆ ಕೆಲಸದ ಯಾವ ಮಾಹಿತಿಯೂ ಇರಲಿಲ್ಲ. ಆದರೆ ಕೆಲಸ ಕಲಿಯುವುದರಲ್ಲೂ ಮಾಡುವುದರಲ್ಲೂ ಅತಿ ಶ್ರದ್ಧೆ ಆಸಕ್ತಿಗಳಿದ್ದುವು. ಇವನು ಬಂದದ್ದರಿಂದ ನಮ್ಮ ಒಳಾಡಳಿತದ ಸಮಸ್ಯೆಗಳೆಲ್ಲವೂ ಮಾಯವಾಗಿ ಹೋದುವು. ವ್ಯಾಪಾರ ಹಾಗೂ ಗ್ರಾಹಕ ಸೇವೆ ಅತಿ ಕ್ಷಿಪ್ರವಾಗಿ ವರ್ಧಿಸಿದುವು. ನಮಗೆ ಐದು ವರ್ಷ ತುಂಬುವ ವೇಳೆಗೆ ಇವನನ್ನು ಮ್ಯಾನೇಜರ್ ಪದವಿಗೆ ಏರಿಸಿ ಒಬ್ಬ ಅಕೌಂಟೆಂಟನನ್ನೂ ಒಬ್ಬ ಸೇವಕನನ್ನೂ ನೇಮಿಸಿದೆವು. ಹೀಗೆ ಭಾರೀ ಒಂದು "ಸಾಮ್ರಾಜ್ಯ"ದ ಹಿರಿತನ ನನಗೆ ಸಹಜವಾಗಿ ಬಂದೊದಗಿತು. ಸಂಘದ ಶಾಶ್ವತ ಅಭಿವರ್ಧನೆಗೆ ಬೇಕಾಗುವ ಲೆಕ್ಕ ಪತ್ರಗಳನ್ನು ವ್ಯವಸ್ಥೆಗೊಳಿಸುವ ದಿಶೆಯಲ್ಲಿ ದಿಟ್ಟ ಹಾಯಿಸುವುದು ಈಗ ನನಗೆ ಸಾಧ್ಯವಾಯಿತು.

ನಮ್ಮ ಅಂದಿನ ಘೋಷಣೆ ಜಾಹೀರಾತುಗಳ ಮಾದರಿ ನೋಡಿ :

ನಿಮ್ಮ ಹಣಕ್ಕೆ ಯೋಗ್ಯವಾದ ಪ್ರತಿಫಲ ಮತ್ತು ಸೇವೆ ಬೇಕೇ ?
ಏರುತ್ತಿರುವ ಧಾರಣೆಯನ್ನು ತಡೆಹಿಡಿದಿಡಲು ಬಯಸುವಿರೇ ?
ನಿಮಗಿರುವ ದಾರಿ ಒಂದೇ : ಬನ್ನಿ ಕಾಲೇಜ್ ಸಂಘಕ್ಕೆ !
ಸಹಕಾರ ವ್ಯಾಪಾರೋದ್ಯಮದ ಮಹೋನ್ನತ ನಿದರ್ಶನಕ್ಕೆ!!

ಓದಲು ಪುಸ್ತಕ ಬರೆಯಲು ಕಾಗದ
ತಿನ್ನಲು ಬಿಸ್ಕತ್ ಧರಿಸಲು ಸ್ವೆಟ್ಟರ್
ಬೇಕಾದ್ದೆಲ್ಲವ ಹರ್ಷದೊಳೀಯುವ
ಕಾಮಧೇನುವನು ಕೇಳಲು ಬನ್ನಿ !

ಉದ್ಗ್ರಂಥಗಳಾ ಸಾಲೇ ಸಾಲು
ಬಣ್ಣಬಣ್ಣದಾ ಮಾಲೇ ಮಾಲು
ಮಿರಮಿರಗುತ್ತಿಹ ಸ್ಟೀಲೇ ಸ್ಟೀಲು
ಈ ವೈಭವವನು ನೋಡಲು ಬನ್ನಿ !

ಗ್ರಂಥಗಳು ಪಠ್ಯ ಹಾಗೂ ಉಪಪಠ್ಯ ಪುಸ್ತಕಗಳು, ಮಾರ್ಗದರ್ಶಿ ಪುಸ್ತಕಗಳು, ವಿದ್ಯಾರ್ಥಿಗಳಿಗೂ ಮುದ್ರಣಾಲಯಗಳಿಗೂ ಕಛೇರಿಗಳಿಗೂ ಬೇಕಾಗುವ ಸಮಸ್ತ ಲೇಖನ ಸಾಮಗ್ರಿಗಳು, ಉಕ್ಕಿನ ಪಾತ್ರೆಗಳು, ಸರ್ವವಿಧವಾದ ಶೃಂಗಾರ ವಸ್ತುಗಳು, ಉಣ್ಣೆ ವಸ್ತ್ರಗಳು ಮತ್ತು ನೇಯ್ಗೆಗಳು ನೈಲಾನ್ ಕಾಲುಚೀಲಗಳು, ಬಿಸ್ಕತ್ ಬಗೆಗಳು, ಸಕ್ಕರೆ ಜೇನು ಕಾಫಿಬೀಜ ಗೋಡಂಬಿ ಯಾಲಕ್ಕಿ ದ್ರಾಕ್ಷೆ ಕೇಸರಿ ತೆಂಗಿನೆಣ್ಣೆ ಎಳ್ಳೆಣ್ಣೆ ರಿಫೈನ್ಡ್ ಆಯಿಲ್ ಮುಂತಾದ ಆಹಾರ ಪದಾರ್ಥಗಳು, ಬಹುಮಾನವೀಯಲು ಕಪ್ಪುಗಳು ಮೆಡಲುಗಳು ಷೀಲ್ಡುಗಳು ಮುಂತಾದ ಆಕರ್ಷಕ ವಸ್ತುಗಳು, ಕೊಡೆಗಳು ಮಳೆಕೋಟುಗಳು ಗಂಬೂಟುಗಳು–ಹೀಗೆಯೇ ಬೆಳೆಸಬಹುದು–ಈ ತೆರನಾಗಿ ನಮ್ಮ ಸೇವೆ ವ್ಯಾಪ್ತಿ ಪಡೆದಿತ್ತು. ಸ್ಥಳಾವಕಾಶ ದೊರೆತಿದ್ದರೆ ವಸ್ತ್ರವಿಭಾಗವನ್ನು ಪ್ರಾರಂಭಿಸುವ ಯೋಚನೆಯೂ ಇತ್ತು. ಕೆಲವು ಹಿತೈಷಿಗಳು ಮಡಿಕೇರಿ ಪೇಟೆಯಲ್ಲಿ ನಮ್ಮ ಒಂದು ಶಾಖೆಯನ್ನು ತೆರೆಯಬೇಕೆಂದು ಸೂಚಿಸಿದರು. ಅದು ಸಂಘಕ್ಕೆ ಪೂರ್ಣಾವಧಿಯ ಕಾರ್ಯದರ್ಶಿ ಬರುವ ತನಕ ಯೋಚಿಸತಕ್ಕದ್ದಲ್ಲ, ಈಗಾಗಲೇ ಗೌರವ ಕಾರ್ಯದರ್ಶಿಯ ನಿಜವೃತ್ತಿ ಸಂಘ ಸೇವೆ, ಉಪವೃತ್ತಿ ಕಾಲೇಜು ಅಧ್ಯಾಪನ ಎನ್ನುವ ತಿರುಗಾಮುರುಗಾ ಪರಿಸ್ಥಿತಿ ಆಗಿದೆ ; ಇನ್ನು ಶಾಖೆಯನ್ನೇನಾದರೂ ಆರಂಭಿಸಿದರೆ ಆಗ ಒಂಟಿಯೇ ಡೇರೆಯ ಯಜಮಾನ ಪೂರ್ತಿ ಆಗುವುದು ಖರೆ ಎಂದು ಭಾವಿಸಿ ಈ ಸೂಚನೆಯನ್ನು ತಳ್ಳಿಹಾಕಿದೆವು.

ಕೆಲವು ವೇಳೆ ವಿಶೇಷ ಅನುಜ್ಞೆಗಳು ಬರುವುದಿತ್ತು—ಉದಾಹರಣೆಗೆ ಹಲವಾರು ಸಂಸ್ಥೆಗಳಿಗೆ ಗಾದ್ರೆಜ್ ಅಲ್‌ಮೈರಾಗಳು, ಸ್ಟೀಲಿನ ಪೀಠೋಪಕರಣಗಳು ಇತ್ಯಾದಿ. ಇಂಥವನ್ನು ಸಕಾಲದಲ್ಲಿ ಆಕರ್ಷಕ ಬೆಲೆಯಲ್ಲಿ ಒದಗಿಸಿ ಅವುಗಳ ಕೃತಜ್ಞತೆಗೆ ನಾವು ಪಾತ್ರರಾಗಿದ್ದೆವು. ಒಮ್ಮೆ ಒಬ್ಬ ಮಿತ್ರರು "ನಮಗೆ ಹಾಲುಗರೆಯಲು ಎಮ್ಮೆ ಒದಗಿಸುವಿರಾ ?" ಎಂದು ಲಘು ವಿನೋದ ಮಿಶ್ರಿತವಾಗಿ ಕೇಳಿದ್ದರು. ಅವರನ್ನು ಹೆಬ್ಬಾಲೆಯ (ಕೊಡಗಿನಲ್ಲಿ ಎಮ್ಮೆಗಳಿಗೆ ಹೆಸರಾಂತ ಮಾರುಕಟ್ಟೆ) ಗಿರಾಕಿ ಮಿತ್ರರೊಬ್ಬರಿಗೆ ಪರಿಚಯಿಸಿ ಈ ವ್ಯವಹಾರವನ್ನು ಕುದುರಿಸಿದ್ದೆವು. ಮುಫತ್ತಾಗಿ ನೀಡಿದ ಇಂಥ ಸಲಹೆ ನೆರವುಗಳು ಅವೆಷ್ಟೋ. ನಮ್ಮ ಸಂಘವೆಂದರೆ ಕೇವಲ ವ್ಯಾಪಾರ ಸಂಸ್ಥೆ ಅಲ್ಲ, ಒಂದು ಸಾಮಾಜಿಕ ಕೇಂದ್ರ, ಯಾವ ವಿಷಯವನ್ನೂ ಕುರಿತು ಸಮರ್ಥ ಸಲಹೆ ಸಿಕ್ಕಬಲ್ಲ ಒಂದು ವಿನಿಮಯ ಕೇಂದ್ರ ಎಂಬ ಭಾವನೆ ನಂಬಿಕೆ ಸಾರ್ವತ್ರಿಕವಾಗಿ ಬೆಳೆದುವು.

ನಮ್ಮ ಗಿರಾಕಿಗಳೀಗ ಅಖಿಳ ಪ್ರಪಂಚ ವ್ಯಾಪ್ತಿ ಪಡೆದಿದ್ದರು. ದೇಶ ವಿದೇಶಗಳಿಂದ ಕೊಡಗಿಗೆ ಬರುತ್ತಿದ್ದ ಪ್ರವಾಸಿಗರು ರಾಜಧಾನಿ ಮಡಿಕೇರಿಯನ್ನು ಸಂದರ್ಶಿಸುತ್ತಿದ್ದುದು ವಾಡಿಕೆ. ಇವರೆಲ್ಲರೂ ತಪ್ಪದೆ ಕಾಲೇಜು ಸಂಘಕ್ಕೆ ಬಂದು ಏನಿಲ್ಲೆಂದರೂ ಇಲ್ಲಿನ ಹೆಸರಾಂತ ಜೇನು ಯಾಲಕ್ಕಿಯನ್ನು ಕೊಂಡೊಯ್ಯುತ್ತಿದ್ದರು. ಕಾಲೇಜು ಸೊಸೈಟಿಯ ಮಾಲು ಎಂದರೆ ಮುಗಿಯಿತು, ಜನ ಕಣ್ಮುಚ್ಚಿ ಬೆಲೆ ವಿಚಾರ ಮರುಮಾತಾಡದೆ ತೆಗೆದುಕೊಂಡು ಹೋಗುತ್ತಿದ್ದರು. ನಮ್ಮಲ್ಲಿ ಮಾರುತ್ತಿದ್ದ ಉಕ್ಕಿನ ಪಾತ್ರೆಗಳ ಬೆಲೆ ನೆರೆಯ ಮೈಸೂರು ಬೆಂಗಳೂರು ಮಂಗಳೂರುಗಳ ಪೈಪೋಟಿ ಮಾರುಕಟ್ಟೆಗಳ ಬೆಲೆಗಳಿಗಿಂತ ಎಷ್ಟೊ ಕಡಿಮೆ ಇತ್ತು. ಇನ್ನು ತೂಕ, ಗುಣಮಟ್ಟ, ಸೇವೆ ಮುಂತಾದವುಗಳಲ್ಲಿ ನಮ್ಮದೊಂದು ವಿಶೇಷ ದರ್ಜೆಯೇ ಆಗಿತ್ತು.

ಸಹಜವಾಗಿ ನಮಗೆ ಪದೇ ಪದೇ ತೀವ್ರ ಆರ್ಥಿಕ ಸಂಕಷ್ಟ ತಲೆದೋರುತ್ತಿತ್ತು. ಬೆಳೆಯುತ್ತಿರುವ ಪ್ರತಿಯೊಂದು ವ್ಯಾಪಾರ ವ್ಯವಸ್ಥೆಯಲ್ಲಿಯೂ ಇದು ಇದ್ದದ್ದೇ. ಬಹು ವರ್ಷಕಾಲ ಬ್ಯಾಂಕ್ ಸಾಲ ಏನನ್ನೂ ಪಡೆಯದೆ ನಿರಖು ಠೇವಣಾತಿಗಳನ್ನು ಹಿತೈಷಿಗಳಿಂದ ಆಹ್ವಾನಿಸಿ ಮತ್ತು ಸಗಟು ಪೂರೈಕೆದಾರರಿಗೆ ನಮ್ಮ ವಿಶ್ವಾಸವನ್ನೇ ಒತ್ತೆ ಇಟ್ಟು ಕ್ಷಿಪ್ರಾವಧಿ ಸಾಲದ ಮೇರೆಗೆ ಸಾಮಾನುಗಳನ್ನು ತರಿಸಿ ವ್ಯಾಪಾರ ಮಾಡುತ್ತಿದ್ದೆವು. ಎಲ್ಲಿಯೂ ಎಂದೂ ಮರ್ಯಾದೆ ಹೋಗುವ ಪ್ರಸಂಗ ಎದುರಾಗಲಿಲ್ಲ. ಉದಾಹರಣೆ ನೋಡಿ : ಇಂದು ಅಪರಾಹ್ನ 2 ಗಂಟೆ ಒಳಗೆ ಬ್ಯಾಂಕಿಗೆ 2000 ರೂಪಾಯಿ ತುಂಬಲೇಬೇಕು ; ಈಗ ಬೆಳಿಗ್ಗೆ 10 ಗಂಟೆ ; ನಮ್ಮಲ್ಲಿ ಒಟ್ಟಾಗಿ ಇರುವುದು ಕೇವಲ 600 ರೂಪಾಯಿ ಮಾತ್ರ ; ಆದರೆ ನಿಶ್ಚಿತ ಮುಹೂರ್ತದ ಮೊದಲು ವ್ಯಾಪಾರ ಕುದುರಿ ಅಥವಾ ಹಳೆ ಬಾಕಿ ಬಂದು ಅಥವಾ ಎರಡೂ ಕಾರಣಗಳಿಂದ ಬೇಕಾದ ಹಣ ಒದಗುವುದು ಖಾತ್ರಿ. ಅನೇಕ ಸಲ ನಾನು ಖಾಸಗಿ ಆಗಿ ಸಾಲ ಪಡೆದು ಆರ್ಥಿಕ ತೊಂದರೆಗಳನ್ನು ಪರಿಹರಿಸಿದ್ದುಂಟು. ನಮ್ಮಿಂದ ಸಾಲವಾಗಿ ಮಾಲು ಕೊಂಡು ಹೋದ ನನ್ನ ಸಹೋದ್ಯೋಗಿ ಮಿತ್ರರು ಎಲ್ಲರೂ ಶಿಸ್ತಿನಿಂದ ಸಕಾಲದಲ್ಲಿ ಹಣ ಮರುಪಾವತಿ ಮಾಡಿದ್ದರೆ ಇಂಥ ಪ್ರಸಂಗಗಳು ನಮಗೆ ಎಂದೂ ಎದುರಾಗುತ್ತಿರಲಿಲ್ಲ. ಬಹುಶಃ ನನ್ನ ನಿರೀಕ್ಷೆ ಅತಿ ಆಯಿತೋ ಏನೋ ? ಇನ್ನು ಲಾಭದ ಅಂಚನ್ನು ಎತ್ತರಿಸಿದ್ದರೆ ನಾವು ಎಂದೋ ಹೇರಳ ಹಣ ಕೂಡಿಡಬಹುದಿತ್ತು. ಆದರೆ ಲಾಭ ಗಳಿಸುವುದೊಂದೇ ನಮ್ಮ ನೀತಿ ಅಲ್ಲವಷ್ಟೆ ? ಹೀಗಾಗಿ ನಮ್ಮ ಸಂಚಿ ಸದಾ ಖಾಲಿ ; ವ್ಯಾಪಾರ ಸದಾ ಟಾಪ್ ಗಿಯರ್ ; ಚಿಂತೆ ಎಂದೂ ತಪ್ಪಿದ್ದಿಲ್ಲ. ಬ್ಯಾಂಕ್ ಸಾಲ ಸುಲಭವಾಗಿ ದೊರೆಯಲಿದ್ದುದರಿಂದ (ವಾಸ್ತವವಾಗಿ ಸಹಕಾರೀ ಬ್ಯಾಂಕಿನಿಂದ ಪದೇ ಪದೇ ಈ ಸೌಕರ್ಯವನ್ನು ನಾವು ಪಡೆದು ಉಪಯೋಗಿಸಿಕೊಳ್ಳಬೇಕೆಂಬ ಕೋರಿಕೆ ಬರುತ್ತಿತ್ತು) ಅನಿವಾರ್ಯವಾಗಿ ಅದನ್ನು ಪಡೆದುಕೊಂಡೆವು (ಕೇವಲ 10,000 ರೂಪಾಯಿ ಮಿತಿಯಲ್ಲಿ). "ಕಡ ಹುಟ್ಟಿ ಬಡವ ಕೆಟ್ಟ" ಎಂಬ ಗಾದೆಯ ಅರ್ಥ ಬೇಗನೆ ನಮಗೆ ಚೆನ್ನಾಗಿ ಮನವರಿಕೆ ಆಯಿತು : ವ್ಯವಹಾರ ಸ್ವಾತಂತ್ರ್ಯವನ್ನು ಕಡದೊಂದಿಗೆ ನಮ್ಮ ಅರಿವಿಲ್ಲದೆ ಕಳೆದುಕೊಂಡಿದ್ದೆವು. ಪರಿಣಾಮವಾಗಿ, ಮಾನಧನನಾದ ನಾನು ಮತ್ತು ದಿಟ್ಟ ನಿಲುವಿನ ನಮ್ಮ ಸಂಘ, ಕೆಲವು ಅಹಿತಕರ ಕಹಿಗುಳಿಗೆಗಳನ್ನು ನುಂಗಬೇಕಾಯಿತು. ಹೀಗಾಗಿ ಅದಷ್ಟು ಬೇಗನೆ ಈ ಸಾಲಖಾತೆಯನ್ನು ಮುಚ್ಚಿಬಿಡಬೇಕೆಂದು ನಿರ್ಧರಿಸಿದೆ. ಆದರೆ ಸಾಲವನ್ನು ಪಡೆದಷ್ಟು ಸುಲಭ ಖಂಡಿತ ಅಲ್ಲ ಅದನ್ನು ಸಂದಾಯಿಸಿ ಮುಕ್ತನಾಗುವುದು ಎಂಬ

ಸತ್ಯವೂ ಅರಿವಾಯಿತು. ಹಾಸಿಗೆಯಷ್ಟೇ ಕಾಲು ಚಾಚುವುದು, ಸ್ವಪ್ರಯತ್ನದಿಂದ ನಿಧಾನವಾಗಿ ಹಾಸಿಗೆಯನ್ನು ವಿಸ್ತರಿಸಿ ಮತ್ತೆ ಹೆಚ್ಚಿನ ಸುಖ ಪಡೆಯುವುದು—ನಿಜವಾಗಿ ಇವೇ ಚಿರ ಶಾಂತಿಯ ಸೂತ್ರಗಳು.

ಈ ಪ್ರಕಾರವಾಗಿ ನಮ್ಮ ಬಲು ಎತ್ತರದ ಬಿಗಿ ಸರಿಗೆ ಮೇಲಿನ ಸುಟಿನಡಿಗೆ ಮುಂದುವರಿದಿತ್ತು.

ಸರ್ಕಾರದಿಂದ ಬಂದ ಪ್ರೇಮಪತ್ರ

ನಮ್ಮ ಕಾಲೇಜಿನ ಸಮಸ್ತ ಕಟ್ಟಡಗಳೂ, ಸಂಘದ ಕಟ್ಟಡವೂ ಸೇರಿದಂತೆ, ಸರ್ಕಾರದ ಕಾಮಗಾರಿ ಇಲಾಖೆಯ ಸುಪರ್ದಿಗೆ ಒಳಪಟ್ಟಿದ್ದುವು. ಕೊಡಗು ಸರ್ಕಾರ ಇದ್ದಾಗ ಸಂಘ ಮತ್ತು ಕ್ಯಾಂಟೀನುಗಳಿಗಾಗಿ ಈ ಸೌಧವನ್ನು ನಿರ್ಮಿಸಿ ಒದಗಿಸಿದ್ದರು. ನಾವು ಇದನ್ನು ಪ್ರವೇಶಿಸುವ ವೇಳೆಗೆ ಮೈಸೂರು ಸರ್ಕಾರ ಅಧಿಕಾರ ವಹಿಸಿಕೊಂಡಿತ್ತು. ಕೆಲವು ವರ್ಷಗಳ ಬಳಿಕ ಮಡಿಕೇರಿಗೆ ವರ್ಗವಾಗಿ ಬಂದ ಅಸಿಸ್ಟೆಂಟ್ ಎಂಜಿನಿಯರ್ ಒಬ್ಬ ಮಾಮೂಲಿನಂತೆ ನಮ್ಮ ಸಂಘಕ್ಕೂ ಬಿಜಯಂಗೈದ. ತನ್ನ ಪ್ರವರವನ್ನು ಒಪ್ಪಿಸಿ ಖಾಸಗಿಯಾಗಿ ನನಗೊಂದು ಮನವಿ (=ಹುಕುಂ) ಸಲ್ಲಿಸಿದ : ಅವನ ಬೇಡಿಕೆಯ ಸಾಮಗ್ರಿಗಳನ್ನು ನಾವು ಕಾಣಿಕೆಯಾಗಿ ಅವನಿಗೆ ಒಪ್ಪಿಸಬೇಕು. ಅಧಿಕಾರದ ವಿವಿಧ ಸ್ತರಗಳಿಂದ ಆಗ ಈಗ ಬರುತ್ತಿದ್ದ ಇಂಥ ಕೋರಿಕೆಗಳಿಗೆ ಮತ್ತು ಕಿರುಕುಳಗಳಿಗೆ ಎದುರಾಗಿ ನಾನು ಖಾಯಂ ಅಸ್ತ್ರವೊಂದನ್ನು ಇರಿಸಿದ್ದೆ : "ಇದು ಸಾರ್ವಜನಿಕ ನ್ಯಾಸ. ನನ್ನನ್ನೂ ಒಳಗೊಂಡಂತೆ ಇಲ್ಲಿ ಯಾರಿಗೂ ಇಂಥ ಸೌಕರ್ಯ ದೊರೆಯದು. ದಯಮಾಡಿ ಮನ್ನಿಸಬೇಕು." ಹೆಚ್ಚಿನ ಮಂದಿ ನನ್ನ ನಿಲುವನ್ನು ಮೆಚ್ಚಿ ಮತ್ತೆ ಎಂದೂ ಇಂಥ ಪ್ರಾರ್ಥನೆಗಳನ್ನು ಸಲ್ಲಿಸುತ್ತಿರಲಿಲ್ಲ. ಆದರೆ ಈ ಅಸಿಸ್ಟೆಂಟ್ ಎಂಜಿನಿಯರ್ ಮಹೋದಯ ತನ್ನ ಬೇಡಿಕೆಯನ್ನು ನಾವು ಈಡೇರಿಸದಿದ್ದರೆ ಪರಿಣಾಮ ಒಳಿತಾಗಲಿಕ್ಕಿಲ್ಲ ಎಂಬುದಾಗಿ ಬೆದರಿಕೆ ಹಾಕಿದ. ತಿಪ್ಪೆಗೆ ಕಲ್ಲೆಸದರೆ ರಾಡಿ ಮುಖಕ್ಕೆ ರಟ್ಟಿ ಹೇಸಿಕೆ ಮಾಡುವುದಲ್ಲದೆ ಬೇರೇನಾದರೂ ಆದೀತೇ ? ಹಾಗಾಗಿ ನಾನು ಸುಮ್ಮನಿದ್ದೆ. ಕೆಲವು ತಿಂಗಳುಗಳ ಅನಂತರ ನಮಗೆ ಸರ್ಕಾರದಿಂದ (ಕಾಮಗಾರಿ ಇಲಾಖೆಯ ಮೂಲಕ) ಒಂದು ಪ್ರೇಮಪತ್ರ ಬಂತು. ಅದರ ಪ್ರಕಾರ ನಾವು ತಿಂಗಳೊಂದರ 200 ರೂಪಾಯಿಯಂತೆ ಬಾಡಿಗೆ ಪಾವತಿ ಮಾಡಬೇಕು ಮತ್ತು ಆ ತನಕದ ಹಳೆ ಬಾಕಿಯನ್ನು (12000 ರೂಪಾಯಿಗಳನ್ನು ಮಿಗುತ್ತಿತ್ತು) ಒಡನೆ ಸಲ್ಲಿಸಬೇಕು ಎಂದಿತ್ತು. ಅಲ್ಲದೇ ಸಂಘ ಲಾಭದಾಯಕವಾಗಿ ಕೆಲಸ ಮಾಡುತ್ತಿರುವುದರಿಂದ ಈ ಮೊಬಲಗನ್ನು ಕೇಳಿರುವುದು ನ್ಯಾಯವಾಗಿಯೇ ಇದೆ ಎಂಬ ವಿವರಣೆಯೂ (ಬರೆಯ ಮೇಲೆ ಬಿಸಿನೀರಿನ ಎರೆತ) ಇತ್ತು. ಪ್ರಾಂಶುಪಾಲರ ಮೂಲಕ ನಾವು ಸರ್ಕಾರಕ್ಕೆ ನಮ್ಮ ಹಾಲೆಹವಾಲೆಗಳನ್ನು ಸಲ್ಲಿಸಿದೆವು. ಸಾರಾಂಶ ಇಷ್ಟೇ : ಕಾಲೇಜಿನ ಈ ಸಂಘ ಗ್ರಂಥಾಲಯ, ಪ್ರಯೋಗ ಮಂದಿರ, ಕಛೇರಿ, ತರಗತಿ ಕೊಠಡಿಗಳಂಥ ಒಂದು ಉಪಯುಕ್ತ ಅಂಗ ; ಇದು ಖಾಸಗಿ ಸಂಸ್ಥೆ ಅಲ್ಲ ; ವಿದ್ಯಾರ್ಥಿಗಳಿಗೆ ಸರ್ಕಾರ ಒದಗಿಸಬೇಕಾದ ಸೌಕರ್ಯವೊಂದನ್ನು ಇದು, ಸರ್ಕಾರಕ್ಕೆ ಯಾವುದೇ ಆರ್ಥಿಕ ಭಾರ ತಾಗದಂತೆ, ಚೆನ್ನಾಗಿ ನೀಡುತ್ತಿದೆ ; ನಮ್ಮ ಮುಂಘತ್ತು ಸೇವೆ ಹಾಗೂ ದಕ್ಷ ಆಡಳಿತೆಯ ಪರಿಣಾಮವಾಗಿ ಇದರಲ್ಲಿ ಲಾಭ ಉಂಟಾಗುತ್ತಿದೆ, ಅಷ್ಟೆ ; "ಲಾಭ ಬರುತ್ತಿದೆ ಆದ್ದರಿಂದ

ಬಾಡಿಗೆ ಕೊಡಿ" ಎಂದರೆ ಲಾಭ ಮಾಡುವುದು ಅಪರಾಧ ಎಂಬ ಅರ್ಥ ಧ್ವನಿಸುವುದಲ್ಲ–ಇದು ಸರಿ ಅಲ್ಲ ; ಇನ್ನು ಯಾರು ಯಾರನ್ನು ಬಾಡಿಗೆ ಕೇಳುವುದು ? ಎಡಗೈ ಬಲಗೈಯನ್ನೇ ? ಸರ್ಕಾರ–ಕಾಲೇಜು–ಸಂಘ ಎಲ್ಲ ಒಂದು ಅಖಂಡ ವ್ಯವಸ್ಥೆಯ ಭಿನ್ನ ಏರ್ಪಾಡುಗಳು ಮಾತ್ರ.

ಬಾಡಿಗೆ ಹಾಗೂ ಬಾಕಿ ಪಾವತಿಗಾಗಿ ಅಸಿಸ್ಟೆಂಟ್ ಎಂಜಿನಿಯರನ ಕೀಟಲೆ ಕೋಟಲೆ ದಾಂಧಲೆಗಳು ಅತಿರೇಕಕ್ಕೆ ಮುಟ್ಟಿದಾಗ ಆತನ ಮೇಲಧಿಕಾರಿ ಎಕ್ಸಿಕ್ಯೂಟಿವ್ ಎಂಜಿನಿಯ ರೊಡನೆ ನಾನು ಖುದ್ದು ಮಾತಾಡಿ ಇವನ್ನು ತಾತ್ಕಾಲಿಕವಾಗಿ ನಿವಾರಿಸಿಕೊಂಡೆ. ಕೆಲವು ತಿಂಗಳುಗಳ ಅನಂತರ ಸರ್ಕಾರೀ ಆಜ್ಞೆ ಪ್ರಕಟವಾಯಿತು : ಅದರ ಪ್ರಕಾರ ಎಲ್ಲ ಸರ್ಕಾರೀ ಕಾಲೇಜುಗಳೂ ವಿದ್ಯಾರ್ಥಿಗಳ ಉಪಯೋಗಾರ್ಥ ಮಡಿಕೇರಿ ಸರ್ಕಾರೀ ಕಾಲೇಜಿನ ಸಹಕಾರ ಸಂಘದ ಮಾದರಿಯಲ್ಲಿ ಸಂಘಗಳನ್ನು ಸ್ಥಾಪಿಸಬಹುದೆಂದೂ ಅವುಗಳಿಗೆ ಕಾಲೇಜಿನಲ್ಲಿ ಮುಫತ್ತಾಗಿ ಕೊಠಡಿ ಪೀಠೋಪಕರಣ ಮುಂತಾದವನ್ನು ಒದಗಿಸಬೇಕೆಂದೂ ಇತ್ತು. ಹೀಗೆ ನಮ್ಮ ನ್ಯಾಯಸಮ್ಮತವಾದ ನಿಲುವು ಮತ್ತು ವಿವರಣೆ ಸಾರ್ವತ್ರಿಕವಾಗಿ ಉಪಕಾರಿ ಆದ ಒಂದು ಆಜ್ಞೆಗೆ ಕಾರಣವಾದುವು.

ಆತ್ಮವಿಶ್ಲೇಷಣೆಯ ಪರ್ವಬಿಂದು

ಸಂಘದ ವ್ಯವಹಾರದಲ್ಲಿ ನನ್ನ ಕೆಲಸವಾಗಲಿ ಹೊಣೆಗಾರಿಕೆ ಆಗಲಿ ಎಂದೂ ಕಡಿಮೆ ಆಗಲಿಲ್ಲ, ಆಗುವ ಲಕ್ಷಣವೂ ಇರಲಿಲ್ಲ. ಏನಿದ್ದರೂ ಏರುವುದೊಂದೇ. ನಮ್ಮೆಲ್ಲರ ಸೇವೆ ಯನ್ನೂ ಅದು ಸ್ವಾಹಾಕರಿಸಿ ಅಧಿಕ ಗ್ರಾಸವನ್ನು ಬೇಡುತ್ತಿತ್ತು. ಯಾವುದೋ ಗಳಿಗೆಯಲ್ಲಿ ಯಾವುದೋ ಭಾವನೆಯಿಂದ ಪ್ರವರ್ತಿಸಿದ ಈ ಸಂಘ ಈಗ ನನ್ನ ಸಮಸ್ತ ವ್ಯಕ್ತಿತ್ವವನ್ನೂ ಹಿಂಡಿ ಹಿಪ್ಪೆ ಮಾಡುತ್ತಿರುವಂತೆ ನನಗೆ ಅನ್ನಿಸತೊಡಗಿತು. ಇದಕ್ಕೆ ಹಲವಾರು ಬೇರೆ ಕಾರಣ ಗಳೂ ಇದ್ದುವು. ಅವುಗಳ ಪೈಕಿ ಮುಖ್ಯವಾದ ನಾಲ್ಕನ್ನು ಮಾತ್ರ ಇಲ್ಲಿ ಬರೆಯುತ್ತೇನೆ.

ಒಂದನೆಯದು, ಸಹಕಾರ ಇಲಾಖೆಯ ರಂಗಿನಲ್ಲಿ ಕ್ರಮೇಣ ಆದ ಬದಲಾವಣೆ. ನಮ್ಮ ಸಂಘಕ್ಕೆ "ಸಹಕಾರ" ಎಂಬ ವಿಶೇಷಣ ಒದಗಿಸಿದ ಸವಲತ್ತು ಒಂದೇ ಒಂದು : ನಾವು ಆ ದಿನಗಳ ಕಾನೂನು ಪ್ರಕಾರ ನಮ್ಮ ಲಾಭದ ಮೇಲೆ ಆದಾಯ ತೆರಿಗೆ ಪಾವತಿಸಬೇಕಾಗಿರಲಿಲ್ಲ. ಇದೇನೂ ಭಾರಿ ಉಳಿತಾಯ ಆಗಿರಲಿಲ್ಲ, ಕಾರಣ ನಮ್ಮ ಲಾಭಾಂಶ ಸದಾ ಬಲು ಕಡಿಮೆ. ಇದರಲ್ಲೂ ಹೆಚ್ಚಿನ ಅಂಶವನ್ನು ನಾವು ಬಡ ವಿದ್ಯಾರ್ಥಿಗಳಿಗೆ ಹಂಚಿ ಬಿಡುತ್ತಿದ್ದೆವು. ಇತ್ತ ಸಹಕಾರ ಇಲಾಖೆಗೆ ನಮ್ಮ ಅಸ್ತಿತ್ವ ತುಂಬ ಹೆಸರನ್ನು ತಂದಿತ್ತು. ಸಂದರ್ಭ ಬಂದಾಗಲೆಲ್ಲ ಇಲಾಖೆಯ ವಕ್ತಾರರು ನಮ್ಮ ಹಿರಿಮೆಯನ್ನು ಹಾಡಿ ಹೊಗಳಿ ತಮ್ಮ ಉತ್ತಮ ಸಂಘಟನೆಯ ಪ್ರತೀಕವೆಂದು ಪ್ರಚಾರ ಮಾಡಲು ಹಿಂಜರಿಯುತ್ತಿರಲಿಲ್ಲ. ಹಾಗಿದ್ದರೂ ನಮ್ಮನ್ನು ಅವರು ನಡೆಸಿಕೊಂಡ ರೀತಿ ನಾವು ಇಲಾಖೆಯ ಒಂದು ಅಂಗ, ಅವರ ಕೃಪಾಶ್ರಯದಲ್ಲಿ ಇರುವ ತಾಬೆದಾರರು ಎಂಬಂತೆ. ಇದರಿಂದಾಗಿ ಇಲಾಖೆ ಸಂಘ ನಡುವೆ ಒಂದು ತರಹದ ಬಿಗುವಾದ ರಂಗೇರತೊಡಗಿತು. ವಾರ್ಷಿಕ ಲೆಕ್ಕ ಪರಿಶೋಧನೆಗೆ ಬರುತ್ತಿದ್ದ ಕಿರಿ–ಮರಿ–ಹೊಸ ಇನ್ಸ್‌ಪೆಕ್ಟರು ಗಳಿಗೆ ಸ್ವಂತ ಕೆಲಸದಲ್ಲಿ ಯಾವ ಅನುಭವ ಯಾ ಪ್ರಾವೀಣ್ಯ ಇಲ್ಲದಿದ್ದರೂ ಅಧಿಕಾರದ ಹಮ್ಮಿಗೆ ಏನೂ ಕೊರತೆ ಇರಲಿಲ್ಲ. ಲೆಕ್ಕ ತಪಾಸಣೆ ಮಾಡುವ ಮುಖ್ಯ ಕರ್ತವ್ಯವನ್ನು ಬಿಟ್ಟು

ನಾನಿಲ್ಲದಾಗ, ಮ್ಯಾನೇಜರನಿಗೆ ಅಕೌಂಟೆಂಟನಿಗೆ ಕಿರುಕುಳ ಕೊಡಲು ತೊಡಗಿದರು. ಈ ಸಲ್ಲದ ನಡವಳಿಕೆಯನ್ನು ವಿರೋಧಿಸಿ ನಾನವರಿಗೆ ತಿಳಿಯಹೇಳಿದ್ದು ಪಥ್ಯವಾಗಲಿಲ್ಲ. ಫಲಿತಾಂಶ ವಾರ್ಷಿಕ ಲೆಕ್ಕ ಪರಿಶೋಧನ ವರದಿ ಕ್ಷುದ್ರ ಲೋಪದೋಷಗಳನ್ನು ಎತ್ತಿ ಹಿಡಿಯುವ ಮತ್ತು ನಮ್ಮ ಕಾರ್ಯನೀತಿಯ ಮೇಲೆ ಟೀಕೆಮಾಡುವ ಭಾರಿ ಹೊತ್ತಗೆ ಆಯಿತು. ವ್ಯಾಪಾರ ಉದ್ದೇಶವಾಗಿರುವ ನಮ್ಮ ಸಂಘವನ್ನು ಸರ್ಕಾರದ ಯಾವುದೇ ಕಛೇರಿಯನ್ನು ತಪಾಸಿಸುವ ರೀತಿ ಪರಿಶೀಲಿಸತಕ್ಕದ್ದಲ್ಲ, ಬದಲು, ವಾಣಿಜ್ಯ ಲೆಕ್ಕ ಪರಿಶೋಧನೆಗೆ ಇದನ್ನು ಒಳಪಡಿಸಬೇಕು ಎಂದು ನಾನು ವಾದಿಸಿದೆ. ಲಕ್ಷಾಂತರ ರೂಪಾಯಿಗಳ ವ್ಯಾಪಾರ ಆಗಿ ಅಸಂಖ್ಯಾತ ಗ್ರಾಹಕರಿಗೆ ವಿಪುಳ ಸೇವೆ ಒದಗಿ ಮಾರುಕಟ್ಟೆಯ ಮೇಲೆ ತುಂಬ ಆರೋಗ್ಯಕರ ಪ್ರಭಾವ ಬೀರಿ ಸಾವಿರಾರು ರೂಪಾಯಿಗಳ ಲಾಭ ಪಡೆದು ಸಹಕಾರ ಕ್ಷೇತ್ರಕ್ಕೇ ಹೆಸರು ತಂದಿದ್ದ ನಮ್ಮ ಸಂಘದ ಲೋಪ ದೋಷಗಳು ಯಾವುವು ಗೊತ್ತೇ ? ನಾಲ್ಕಾಣೆ, ಎಂಟಾಣೆ ಕೂಲಿ ಪಾವತಿ ಮಾಡಿದ್ದಕ್ಕೆ ರಶೀತಿಗಳು ಇಲ್ಲದಿರುವಿಕೆ (ಒಂದು ವರ್ಷದಲ್ಲಿ ಈ ಸಂಖ್ಯೆ 1000 ವನ್ನು ಮೀರುತ್ತದೆ) ; ಖಾಲಿ ಗೋಣಿ, ಟಿನ್ ಮುಂತಾದವನ್ನು ಒಟ್ಟಾಗಿ ಮೊದಲೇ ಪ್ರಕಟಿಸಿ ಸಾರ್ವಜನಿಕವಾಗಿ ಹರಾಜು ಹಾಕದೆ ಆಗಾಗ ಮಾರಿ ಮುಗಿಸಿದ್ದು ; ರಜಾದಿನ ಕೂಡ ಬಂದು ದುಡಿದು ವ್ಯಾಪಾರ ವನ್ನು ಏರಿಸಿ ತನ್ಮೂಲಕ ಲಾಭಾಂಶವನ್ನು ವರ್ಧಿಸಿದ ನೌಕರರಿಗೆ ಆಯಾ ತಿಂಗಳೇ ಅಧಿಕ ವೇಳೆ ದುಡಿಮೆ ಭತ್ಯ ನೀಡಿದ್ದು ; ಗೌರವ ಕಾರ್ಯದರ್ಶಿ ಮಂಗಳೂರಿಗೋ ಮೈಸೂರಿಗೋ ಸ್ವಂತ ಕೆಲಸಕ್ಕಾಗಿ ಯಾ ಇತರ ಕೆಲಸಕ್ಕಾಗಿ ಹೋಗಿದ್ದಾಗ ಸಂಘದ ಕಾರ್ಯವನ್ನೂ ಮಾಡಿ ಅದಕ್ಕಾಗಿ ವೆಚ್ಚವಾದ ಕೇವಲ ಕೂಲಿ, ಲಗ್ಗೇಜು ಮೊದಲಾದ ವಾಸ್ತವ ಮೊಬಲಗನ್ನು ಮಾತ್ರ ಖರ್ಚು ಹಾಕಿದ್ದಕ್ಕೆ ಕಾರ್ಯಕಾರೀ ಮಂಡಳಿಯ ಅನುಮೋದನೆ ಪಡೆಯದಿದ್ದುದು ; ಗೌರವ ಕಾರ್ಯ ದರ್ಶಿ ಉಪನಿಬಂಧನೆ ಪ್ರಕಾರ ಗೌರವ ಸಂಭಾವನೆ (ವಾರ್ಷಿಕವಾಗಿ ಐನೂರು ಆರುನೂರು ರೂಪಾಯಿಗಳನ್ನು ಇದು ಮೀರಿರಲಿಲ್ಲ) ಪಡೆದದ್ದಕ್ಕೆ (ಈ ಮೊತ್ತವನ್ನಾದರೂ ಅವನು ಆಗಾಗಲೇ ಅರ್ಹ ಬಡ ವಿದ್ಯಾರ್ಥಿಗಳಿಗೆ ಹಂಚಿಬಿಟ್ಟಿದ್ದ ಎಂಬುದಕ್ಕೆ ಅಲ್ಲಿಯೇ ಲಿಖಿತ ಪುರಾವೆ ಗಳಿದ್ದರೂ) ಇಲಾಖೆಯ ಅನುಮತಿ ಪಡೆಯದಿದ್ದುದು ; ಕೆಲವೊಂದು ಸಾರ್ವಜನಿಕ ಸಂಸ್ಥೆ ಗಳಿಗೆ, ಉಪನಿಬಂಧನೆಗಳ ಷರತ್ತುಗಳಿಗೆ ವಿರುದ್ಧವಾಗಿ, ಸಾಲವಾಗಿ ಮಾಲುಗಳನ್ನು ನೀಡಿದ್ದು; ಇತ್ಯಾದಿ. ಇವೆಲ್ಲವೂ ಇಲಾಖೆಯ ದೃಷ್ಟಿಯಿಂದ ಸರಿಯೇ ಇರಬಹುದು, ಸಹಕಾರ ಕ್ಷೇತ್ರದ ಒಳಿತಿಗಾಗಿಯೇ ಇರಬಹುದು. ಆದರೆ ಈ ಜೀವರಹಿತ ಶುಷ್ಕ ನಿಯಮಗಳು ನನ್ನಲ್ಲಿ ತಿರಸ್ಕಾರ ಭಾವನೆಯನ್ನು ಉಂಟುಮಾಡಿದುವು. ಬೆಳೆಯುತ್ತಿರುವ ಆರೋಗ್ಯವಂತ ಉಪಕಾರೀ ಪ್ರಾಣಿಗೆ ಅದರ ಒಳಿತಿಗಾಗಿಯೇ ತೊಡಿಸುವ ಸಂಕೋಲೆಗಳಿವು ಎಂದು ನಾನು ಭಾವಿಸಿದೆ. ಇನ್ಸ್‌ಪೆಕ್ಟರರ ಪುಟಗಟ್ಟಲೆ ದೋಷಯಾದಿಗೆ ನಾನು ಒಂದೇ ಒಂದು ಸಮಜಾಯಿಸಿಕೆ ನೀಡುತ್ತಿದ್ದೆ : ಪ್ರಸಕ್ತ ವ್ಯಾಪಾರ-ಸಿಬ್ಬಂದಿ ನಿಷ್ಪತ್ತಿಯಲ್ಲಿ ಇದು ಅನಿವಾರ್ಯ ; ಮುಂದೆ ನೌಕರರ ಸಂಖ್ಯೆಯನ್ನು ಏರಿಸಿ ದಾಗ ಇದನ್ನು ಗಮನಿಸಲಾಗುವುದು. ಸಹಜವಾಗಿ ನನ್ನ ಧೋರಣೆ ಇಲಾಖೆಗೆ ಹಿಡಿಸಲಿಲ್ಲ.

ಎರಡನೆಯದು, ಪ್ರಾಂಶುಪಾಲರೊಬ್ಬರ ಅನುಚಿತ ವರ್ತನೆ. ಅವರು ಕಾಲೇಜಿಗೆ ವರ್ಗ ವಾಗಿ ಬಂದು ಅಧಿಕಾರ ವಹಿಸಿಕೊಂಡ ತರುಣದಲ್ಲಿ ನನ್ನನ್ನು ಕರೆದು ಸಂಘದ ವಿಚಾರ ಆತ್ಮೀಯ ವಾಗಿ ಮಾತಾಡಿ ವಿವರಗಳನ್ನು ಕೇಳಿ ತಿಳಿದುಕೊಂಡರು. ಮತ್ತೆ ನಾಲ್ಕು ದಿವಸಗಳ ಬಳಿಕ

ಪುನಃ ನನ್ನನ್ನು ಬರಹೇಳಿ ಕಳಿಸಿ ಮಾತು ಆರಂಭಿಸಿದರು : "ಸಂಘದಲ್ಲಿ ಹಣಕಾಸಿನ ವಹಿವಾಟು ಹೇಗೆ ?"

"ಸದಾ ಮುಗ್ಗಟ್ಟು. ಆದರೆ ಆ ಕಾರಣದಿಂದ ವ್ಯಾಪಾರ ಎಂದೂ ಕುಂಠಿತವಾಗಲಿಲ್ಲ."

"ಅದಲ್ಲ ನಾನು ಕೇಳಿದ್ದು. ದಿನ ದಿನ ನಗದು ಸಂಗ್ರಹದ ವಿಲೇವಾರಿ ಏರ್ಪಾಡು ಏನು ?"

"ನೇರ ಬ್ಯಾಂಕಿಗೆ ಜಮೆ ಆಗುತ್ತದೆ. ಪಾವತಿಗಳೆಲ್ಲವೂ ಹೆಚ್ಚಾಗಿ ಚೆಕ್ ಮೂಲಕವೇ. ಈ ಎಲ್ಲ ಕ್ರಿಯೆಗಳೂ ಖುದ್ದು ನನ್ನ ನಿರ್ದೇಶನದಲ್ಲಿಯೇ ನಡೆಯುತ್ತವೆ."

"ಅದು ಸರಿ. ಹಾಗಾದರೆ ಅಧ್ಯಕ್ಷನಾಗಿ ನನ್ನ ಹೊಣೆಗಾರಿಕೆ ಏನು ?"

"ಅದು ಉಪನಿಬಂಧನೆಗಳಲ್ಲಿ ಸ್ಪಷ್ಟವಾಗಿ ಇದೆ. ಮುಖ್ಯವಾಗಿ ಗೌರವಕಾರ್ಯದರ್ಶಿ ಯನ್ನು ನಾಮಕರಿಸುವುದು ನಿಮ್ಮ ಖುಷಿ. ಮತ್ತೆ ಆತ ಹದ್ದು ಮೀರಿ ಹೋಗದಂತೆ ಉಸ್ತು ವಾರಿ ವಹಿಸುವುದು ಇತ್ಯಾದಿ."

"ಹಾಗೋ ? ಈಗ ಅಧ್ಯಕ್ಷನಾಗಿರುವ ನನಗೆ ಸಂಘದಿಂದ ಒಂದೈನೂರು ರೂಪಾಯಿ ಬೇಕಲ್ಲ ?"

"ನಮ್ಮದು ಹಣ ಲೇವಾದೇವಿ ಸಂಘ ಅಲ್ಲ, ವ್ಯಾಪಾರ ಸಂಘ. ಇಲ್ಲಿ ಅಂಥ ಏರ್ಪಾಡು ಇಲ್ಲ."

"ಆದರೆ ಅಧ್ಯಕ್ಷನಾದ ನಾನು ಅಪ್ಪಣೆ ಮಾಡಿದರೆ ?"

"ಇದೇ ಮಾತನ್ನು ಆ ಕಾಗದದ ಮೇಲೆ ಷರಾ ಬರೆದು ತಮಗೆ ಒಪ್ಪಿಸುವುದೊಂದೇ ನನ ಗಿರುವ ಹಾದಿ."

ಮಾತು ಮುಂದುವರಿಯಲಿಲ್ಲ. ಮತ್ತೆ ಕೆಲವು ದಿವಸಗಳ ಬಳಿಕ ನನಗೊಂದು ಸಂಗತಿ ತಿಳಿಯಿತು : ಅವರು ಹಲವಾರು ಮಂದಿ ಅಧ್ಯಾಪಕರನ್ನು ತಮ್ಮ ಕೊಠಡಿಗೆ ಕರೆಸಿ ಗೌರವ ಕಾರ್ಯದರ್ಶಿತ್ವವನ್ನು ಅವರಿಗೆ ಕಟ್ಟಲು ಸೂಚಿಸಿದ್ದರಂತೆ ; ಆದರೆ ಪ್ರತಿಯೊಬ್ಬರೂ ಈ ಹೊಣೆಗಾರಿಕೆಯನ್ನು ಎರಡನೆಯ ಯೋಚನೆ ಇಲ್ಲದೇ ನಿರಾಕರಿಸಿದ್ದರಂತೆ ; ಕೆಲವರಂತೂ ಭಾವಾವಿಷ್ಟರಾಗಿ ನನ್ನ ಗುಣಗಾನ ಮಾಡಿದ್ದರಂತೆ.

ಪ್ರಾಂಶುಪಾಲರ ಕೊಠಡಿಗೆ ಹೋದೆ : "ಈ ಗೌರವ ಕಾರ್ಯದರ್ಶಿತ್ವ ನಾನು ಬಯಸಿ ಬಂದದ್ದಲ್ಲ, ವಿಶ್ವಾಸದಿಂದ ಬಿದ್ದ ಮಾಲೆ. ವಿಶ್ವಾಸ ಕೆಟ್ಟಾಗ ಮಾಲೆ ಉರುಳಾಗುವುದು ಸರಿ ಅಷ್ಟೆ. ನನ್ನನ್ನು ಈ ಹೊಣೆಗಾರಿಕೆಯಿಂದ ಒಡನೆ ಬಿಡುಗಡೆ ಮಾಡಿ."

ಇಂಥ ಒಂದು ಸನ್ನಿವೇಶದ ತೀವ್ರತೆಯನ್ನು ಅರ್ಥಮಾಡಿಕೊಳ್ಳಬಲ್ಲ ಸಂವೇದನೆಯೇ ಅವರ ಬರಡು ಬುದ್ಧಿಗೆ ಇರಲಿಲ್ಲ. ಯಾವ ಪ್ರತಿಕ್ರಿಯೆಯೂ ಅವರಿಂದ ಪ್ರಕಟವಾಗಲಿಲ್ಲ. ನಾನೇ ಭಂಡನಾಗಿ ಅಲ್ಲಿಂದ ಹೊರಟೆ. ಯಥಾಸ್ಥಿತಿ ಮುಂದುವರಿಯಿತು. ಆದರೆ ಈ ಶೀಂತ್ರಿ ಪ್ರಾಂಶುಪಾಲ ಎಂದಾದರೂ ನನ್ನನ್ನು ಕಂಬಿ ತಪ್ಪಿಸುವುದು ಕಟ್ಟಿಟ್ಟದ್ದೇ ಎಂಬ ಹೊಸ ಅರಿವು ಮೂಡಿತು. ಇದು ಸಂಘದ ಆರೋಗ್ಯದ ದೃಷ್ಟಿಯಿಂದ ಅಪೇಕ್ಷಣೀಯವಾಗಿರಲಿಲ್ಲ.

ಮೂರನೆಯದು, ಕಾಲೇಜಿನ ಹವೆ ಕ್ರಮೇಣ ಬಿಗಡಾಯಿಸಿತು. ವಿದ್ಯಾರ್ಥಿಗಳ ಸಂಖ್ಯೆ ಏರುತ್ತಿದ್ದಂತೆ ಸಹಜವಾಗಿ ಅವರಲ್ಲಿ ಆಗೀಗ ಹಲವು ನಿಷೇಧಾತ್ಮಕ ಪ್ರವೃತ್ತಿಗಳು ತಲೆದೋರ್ರು

ತ್ತಿದ್ದುವು. ಇವು ಮುಷ್ಕರಗಳ ರೂಪದಲ್ಲಿ, ಕೆಲವು ಅಧ್ಯಾಪಕರ ವಿರುದ್ಧ ಸಂಪಿನ ರೂಪದಲ್ಲಿ, ಸಾಮೂಹಿಕವಾಗಿ ಅತಿರೇಕ ವರ್ತನೆಯ ರೂಪದಲ್ಲಿ ಮುಂತಾಗಿ ಪ್ರಕಟವಾಗುತ್ತಿದ್ದುವು. ಅಧಿಕಾರದ ವಿರುದ್ಧ ವಿನಾ ಕಾರಣ ಬಂಡೇಳುವುದು ಪ್ರಗತಿಯ ಲಕ್ಷಣ ಎಂದು ಹಲವಂದಿ ವಿದ್ಯಾರ್ಥಿಗಳು ತಪ್ಪಾಗಿ ತಿಳಿದಿದ್ದರು ಎಂದು ಅನಿಸುತ್ತಿತ್ತು. ಇಂಥ ಒಂದು ಸಂದರ್ಭದಲ್ಲಿ ಕೆನಮ್ಮ ಸಂಘ (ಅಪರದು ಕೂಡ) ಇವರ ವಕ್ರದೃಷ್ಟಿಗೆ ಎದುರಾಯಿತು. ಸಂಘದ ಚಟುವಟಿ ಗಳನ್ನು ಚರ್ಚಿಸಲು ವಿಶೇಷ ಮಹಾಸಭೆಯೊಂದನ್ನು ಕರೆಯಬೇಕು ಎಂಬ ಲಿಖಿತ ಮತ್ತು ಸಾಕಷ್ಟು ಮಂದಿ ವಿದ್ಯಾರ್ಥಿ ಸದಸ್ಯರ ರುಜು ಪಡೆದ ಮನವಿಯನ್ನು ಅವರು ಸಂಘದ ಅಧ್ಯಕ್ಷ ರಾದ ಪ್ರಾಂಶುಪಾಲರಿಗೆ ಸಲ್ಲಿಸಿದರು. ಅವರಿದನ್ನು ಅಭಿಪ್ರಾಯಕ್ಕಾಗಿ ನನ್ನಲ್ಲಿಗೆ ಕಳಿಸಿದರು. ಸ್ಪಷ್ಟ ವಿಷಯವನ್ನು ನಮೂದಿಸದೇ ಕೇವಲ ಕುಹಕೋದ್ದೇಶದಿಂದ ಪ್ರಭಾವಿತವಾದ ಈ ಮನವಿಯನ್ನು ತಿರಸ್ಕರಿಸುವುದೊಂದೇ ಸರಿಯಾದ ಕ್ರಮ ಎಂಬುದಾಗಿ ನನ್ನ ಮಿತ್ರರು ಅನೇಕರು ಬೋಧನೆ ನೀಡಿದರು. ನಾನು ಪ್ರಾಂಶುಪಾಲರ ಕೊಠಡಿಗೆ ಹೋಗಿ ವಿಶೇಷ ಮಹಾ ಸಭೆಯ ದಿನವನ್ನು ಆಗಿಂದಾಗಲೇ ಗೊತ್ತುಪಡಿಸಿ ಯಾವುದೇ ವಿಧವಾದ ಚರ್ಚೆಗೂ ಸಂಘ ಸಿದ್ಧ ವಾಗಿದೆ ಎಂಬುದಾಗಿ ಪ್ರಕಟಪಡಿಸಿದೆ. ಬಹುಶಃ ಈ ನಿಲುವು ರುಜುಗಾರರಲ್ಲಿ ಹಲವಂದಿಗೆ ಅನಿರೀಕ್ಷಿತವಾಗಿದ್ದಿರಬೇಕು. ಅವರೆಲ್ಲರೂ ನನಗೆ ಪರಿಚಿತರೇ, ಹೆಚ್ಚಿನವರು ಹೇಗೂ ನನ್ನ ವಿದ್ಯಾರ್ಥಿಗಳೇ. ಅವರು ಬಿಡಿಬಿಡಿಯಾಗಿ ಬಂದು ನನ್ನನ್ನು ಕಂಡು ತಾವು ತಿಳಿಯದೇ ಮಾಡಿದ ತಪ್ಪನ್ನು ನಾನು ಮನ್ನಿಸಬೇಕೆಂದು ಕೋರಿದರು. "ಹೇಗೂ ಸಭೆ ಏರ್ಪಡಿಸಿ ಆಗಿದೆ. ಅಲ್ಲಿಗೆ ಖಂಡಿತ ಬನ್ನಿ. ಬಂದು ನಿಮ್ಮ ಹೊಗಳಿಕೆ ತೆಗಳಿಕೆ ಎಲ್ಲವನ್ನೂ ಸಕಾರಣವಾಗಿ ಮಂಡಿಸಿ. ಪ್ರಾಮಾಣಿಕತೆಗೆ ಚ್ಯುತಿ ಬರದಿರಲಿ" ಎಂದು ಅವರನ್ನು ಕಳಿಸಿದೆ.

ಸಭೆ ಸೇರಿತು. ಪ್ರಾಂಶುಪಾಲರೇ ಅಧ್ಯಕ್ಷರು. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಸೇರಿ ದ್ದರು. ಪ್ರಾಸ್ತಾವಿಕ ಮಾತು ಮುಗಿದ ಬಳಿಕ ಮನವಿದಾರರ ಮುಂದಾಳಿಗೆ ಮಾತಾಡಲು ಎಡೆ ಮಾಡಿಕೊಟ್ಟೆವು. ಅವನು ಭಾರೀ ಕಡತಗಳನ್ನು ಹೊತ್ತು ತಂದಿದ್ದುದನ್ನು ನೋಡಿದ್ದೆ; ತಯಾರಿಸಿದ್ದು ಏನನ್ನೋ ಆದರೆ ಅಲ್ಲಿ ಒದರಿದ್ದರ ಸಾರಾಂಶವಿಷ್ಟು : "ನಮ್ಮ ಹೆಮ್ಮೆಯ ಸಂಘ ಎಂದರೆ ನಮ್ಮ ಅಭಿಮಾನದ ಗೌರವ ಕಾರ್ಯದರ್ಶಿಯವರ ದುಡಿಮೆಯ ಫಲ. ಇವರಿಲ್ಲ ದಿದ್ದರೆ ಇದು ಎಂದೋ ಹೇಳಹೆಸರಿಲ್ಲದೇ ಹೋಗುತ್ತಿತ್ತು." ಈ ಧಾಟಿಯಲ್ಲಿ ಮುಂದುವರಿಸಿ "ಈಗ ನಮ್ಮ ಬೇಡಿಕೆಗಳು ಬಲು ಸಾಮಾನ್ಯವಾದವು. ಅವನ್ನು ತಾವು ಈಡೇರಿಸಿದರೆ ತುಂಬ ಉಪಕೃತರಾಗುವೆವು. ಒಂದನೆಯದು, ಮಹಾಸಭೆಯಲ್ಲಿ ಸದಸ್ಯರೆಲ್ಲರಿಗೂ ಉಪಾಹಾರದ ಏರ್ಪಾಡಾಗಬೇಕು. ಎರಡನೆಯದು, ವಿದ್ಯಾರ್ಥಿ ಸದಸ್ಯರಿಗೆ ಮಾಲುಗಳನ್ನು ಕಡವಾಗಿ ಕೊಡ ಬೇಕು. ಮೂರನೆಯದು, ನಾವೇ ಸಂಘದ ಒಳಹೊಕ್ಕು ಬೇಕಾದ ಸಾಮಗ್ರಿಗಳನ್ನು ನೋಡಿ ಆಯ್ದು ತೆಗೆದುಕೊಳ್ಳುವ ವ್ಯವಸ್ಥೆ ಆಗಬೇಕು" ಎಂಬುದಾಗಿ ಮುಗಿಸಿದ. ಅಪಸ್ವರ ಎಲ್ಲೂ ಬರಲಿಲ್ಲ. ಅಷ್ಟೇ ಅಲ್ಲ—ನನ್ನ ಕೊರಳಿಗೆ ಒಂದು ಹೂ ಹಾರ ತೊಡಿಸಿಯೂ ಬಿಟ್ಟ !

ಇಂಥ ತಿಪ್ಪಲರ್ಾಗವನ್ನು ಕಲ್ಪನೆಯಲ್ಲಿಯೂ ನಿರೀಕ್ಷಿಸದಿದ್ದ ನನಗೆ ಆ ಗಳಿಗೆ ಏನು ಹೇಳಬೇಕೆಂಬುದು ತಿಳಿಯಲಿಲ್ಲ. ವಿದ್ಯಾರ್ಥಿಗಳನ್ನು ಹೊಗಳಿ ಅವರ ಬೆಂಬಲವೇ ಸಂಘದ ನಿಜ ವಾದ ತ್ರಾಣ ಎಂಬುದಾಗಿ ನುಡಿದು ಹೊರಬಂದೆ.

ಆದರೆ ಈ ಘಟನೆ ಒಟ್ಟಾಗಿ ನನ್ನಲ್ಲಿ ಒಂದು ವಿಧದ ಸಾತ್ತ್ವಿಕ ರೋಷವನ್ನು ಉಂಟು ಮಾಡಿತ್ತು. ಸಾರ್ವಜನಿಕ ಬಿಟ್ಟಿ ಸೇವೆಯಲ್ಲಿ ಹೊಗಳಿಕೆ ನನಗೆ ಬೇಕಿರಲಿಲ್ಲ. ಆದರೆ ನನ್ನ ಪ್ರಾಮಾಣಿಕತೆಯನ್ನು ಪ್ರಶ್ನಿಸುವಂಥ ನಡವಳಿಕೆಗಳನ್ನು "ಅವೇನು ಮಹಾ! ಸತ್ಯಹರಿಶ್ಚಂದ್ರನಿಗೂ ತಪ್ಪಿದ್ದಲ್ಲ. ಶ್ರೀರಾಮನೂ ಅವುಗಳಿಂದ ವಿಮುಕ್ತನಾಗಿರಲಿಲ್ಲ" ಎಂಬ ನಿರ್ಲಕ್ಷ್ಯಭಾವದಿಂದ ಸ್ವೀಕರಿಸುವ ಸ್ಥಿತಪ್ರಜ್ಞತ್ವ ನನಗೆ ಖಂಡಿತ ಇರಲಿಲ್ಲ.

ನಾಲ್ಕನೆಯದು, ಕಡ ಪಡೆದ ಒಡನಾಡಿಗಳಿಂದ ಬಿದ್ದ ಒದೆ. ಕಾಲೇಜಿನ ಸಮಸ್ತ ನೌಕರರಿಗೂ (ಇವರೆಲ್ಲರೂ ನನ್ನ ಸಹೋದ್ಯೋಗಿಗಳೇ ತಾನೇ) ಮಾಲುಗಳನ್ನು ಸಾಲವಾಗಿ ಕೊಟ್ಟು ಸಂಬಳದ ದಿನದಂದು ಪೂರ್ತಿ ಮೊಬಲಗನ್ನು ಪಡೆಯುವ ಸವಲತ್ತನ್ನು ಸಂಘದಲ್ಲಿ ಒದಗಿಸಿದ್ದೆವು. ವರ್ಷಗಳು ಉರುಳಿದಂತೆ ಸತ್ಯದ ಒಂದು ಹೊಸ ಮುಖ ಗೋಚರವಾಯಿತು. ಬಹುಮಂದಿ ಸಂಭಾವಿತರಿಗೆ "ಸಾಲವನ್ನು ಕೊಂಬಾಗ" ಇದ್ದ ಹಾಲೋಗರ ತಿಂದ ಮುಖ ಅದನ್ನು ಮರುಪಾವತಿ ಮಾಡುವಾಗ ಇರಲಿಲ್ಲ. ಇಂಥವರು ಮೇರೆ ಮೀರಿ ಸಾಮಾನುಗಳನ್ನು ಸಾಲವಾಗಿ ಕೊಂಡು ನಮ್ಮ ಆರ್ಥಿಕತೆಗೆ ಮುಳುವಾಗಿ ಪರಿಣಮಿಸಿದರು. ಸಂಘದ ನೌಕರರು ಹೋಗಿ ಹಣ ಕೇಳಿದರೆ ಇವರಿಗೆ ಅಪಮಾನ. ತಾವೇ ಪಾವತಿ ಮಾಡರು. ಖುದ್ದು ನಾನೇ ಹೋದಾಗ ಸುಣುಚಿಕೊಳ್ಳುವ ಉತ್ತರ. ಇನ್ನು ಮುಂದೆ ಸಾಲ ಕೊಡುವುದಿಲ್ಲ ಎಂದರೆ ಜಗಳ. ಸದಾ ತೀರ್ಥಕ್ಷೇತ್ರ ಸಂಚಾರನಿರತನೂ ಭಗವದ್ಭಕ್ತನೂ ಆದ ಒಬ್ಬ ಸಹೋದ್ಯೋಗಿ ಮಿತ್ರನಂತೂ ನನ್ನ ಮೇಲೆ ಕೈಮಿಲಾಯಿಸಲು ಮೇಲೆದ್ದು ಬಂದ. ಅವನನ್ನು ತಡೆದು ಎರಡು ಇಕ್ಕಡಿಸುವ ದೈಹಿಕ ತಾಕತ್ತು ನನಗಿದ್ದರೂ ಇಂಥ ಒಂದು ದೃಶ್ಯ ಕಾಲೇಜಿನ ಹೆಸರನ್ನು (ಮತ್ತು ವೈಯಕ್ತಿಕವಾಗಿ ನಮ್ಮಿಬ್ಬರ ಹೆಸರುಗಳನ್ನು ಕೂಡ) ಮಸಿ ಮಾಡದಿರದು ಎಂಬುದರ ಅರಿವಾಗಿ ನಾನು ಆ ಸ್ಥಳದಿಂದ ಓಡಿಹೋದೆ. "ಶುದ್ಧ ಹೇಡಿ, ಅಯೋಗ್ಯ" ಎಂದು ಕೂಡ ಆತನಿಂದ ಬಿರುದುಗಳನ್ನು ಪಡೆದೆ.

ಆತ್ಮ ಶೋಧನೆ

ಮೇಲೆ ನಮೂದಿಸಿದ ಘಟನೆಗಳು ಮತ್ತು ಇತರ ಅಸಂಖ್ಯಾತ ಕೀಟಲೆಗಳು ನಾನು ಏಕಾಂಗಿ ಆಗಿರುವಾಗ ನನ್ನ ಮನಶ್ಶಾಂತಿಯನ್ನು ಕದಡುವ ಹಿರಿಮಟ್ಟಕ್ಕೆ ಐದಿದ್ದುವು. ಅತಿ ವ್ಯಾಪಾರದ (ಅತಿ ಯಶಸ್ಸಿನ ಕೂಡ) ಪರಿಣಾಮವಾಗಿ "ನೆತ್ತಿಗೇರಿದ್ದ ಪಿತ್ತ"ಇಳಿದು ವಾಸ್ತವಾಂಶವನ್ನು ನಾನು ನಿರಪೇಕ್ಷವಾಗಿ ಪರಿಶೀಲಿಸುವುದು ಅನಿವಾರ್ಯವಾಯಿತು (1962).

ಮನಸ್ಸಾಕ್ಷಿ : ಗಣಿತಾಧ್ಯಾಪಕನಾದ ನೀನು ಸ್ವಕ್ಷೇತ್ರದಲ್ಲಿ ಸಾಧಿಸಿದ್ದೇನು ?

ನಾನು : ಪಾಠ ಪ್ರವಚನಗಳನ್ನು ಶ್ರದ್ಧೆಯಿಂದ ನಿರ್ವಹಿಸಿದ್ದು ಮಾತ್ರ.

ಮ : ವ್ಯಾಪಾರ ಕ್ಷೇತ್ರದಲ್ಲಿ ಊರನ್ನು ಉದ್ಧರಿಸಲು ವಿನಿಯೋಗಿಸಿದ ಶ್ರಮ ವೇಳೆಗಳಲ್ಲಿ ಸ್ವಲ್ಪಾಂಶವನ್ನಾದರೂ ನೀನು ಗಣಿತಾಧ್ಯಯನ ಮಾಡಲು ಮೀಸಲಿಟ್ಟಿದ್ದರೆ ಬೌದ್ಧಿಕವಾಗಿ ಸಾಕಷ್ಟು ಮೇಲೆರಬಹುದಿತ್ತಲ್ಲ ?

ನಾ : ಗೊತ್ತಿಲ್ಲ. ಆ ಅವಕಾಶವೇ ಒದಗಲಿಲ್ಲವಲ್ಲ.

ಮ : ಅವಕಾಶ ಎಂದೂ ತಾನಾಗಿಯೇ ಬರದು. ಅದನ್ನು ಪ್ರಯತ್ನಪೂರ್ವಕವಾಗಿ ದೊರಕಿಸಿಕೊಳ್ಳಬೇಕು ಎಂಬುದು ನಿನಗೆ ತಿಳಿಯದ್ದೇ ?

ನಾ : ಹೌದು, ತಿಳಿದಿದೆ.

ಮ : ಹಾಗಾದರೆ ನೀನು ತಾರುಣ್ಯದ ಈ ಎಂಟು ವರ್ಷಗಳನ್ನು ವೃಥಾ ಪೋಲು ಮಾಡಿದೆಯಲ್ಲ ?

ನಾ : ಆದರೆ ಸಂಘದಲ್ಲಿ ನಾನು ಯಶಸ್ಸನ್ನು ಗಳಿಸಿದೆನಲ್ಲ ?

ಮ : ಅದು ಬರಿ ಭ್ರಮೆ. ಗಣಿತಾಧ್ಯಾಪಕನಾಗಿ ನೀನು ಗಣಿತ ಚಿಂತನೆ ಮುಂದುವರಿಸಲಿಲ್ಲ. ಸಂಸಾರವಂದಿಗನಾಗಿ ಮನೆಮಂದಿಯನ್ನು ಗಮನಿಸಲಿಲ್ಲ. ಊರಿಗೆ ಕೊಡೆ ಹಿಡಿದೆನೆಂಬ ಹಮ್ಮು ಮಾತ್ರ ನಿನ್ನದು. ಹೋಗಲಿ—ಈ ಸಂಸ್ಥೆ ನಿನ್ನ ಅನಂತರ ಉಳಿದೀತೆಂದು ನಂಬಿದ್ದೀಯಾ ?

ನಾ : ಆ ಗೊಡವೆ ನನ್ನದಲ್ಲ. ನಾನು ಅನಿವಾರ್ಯ ಎಂದು ಯಾವ ಹೊತ್ತಿನಲ್ಲೂ ಭಾವಿಸುವ ಮೂರ್ಖ ನಾನಲ್ಲ. ಆದರೆ ಈ ತನಕ ನಾನು ಮಾಡಿರುವ ಗ್ರಾಹಕ ಸೇವೆ, ಹಲವಾರು ಮಂದಿಗೆ ಉದ್ಯೋಗಾವಕಾಶವನ್ನು ಒದಗಿಸಿದ್ದು, ಈ ಮಾರುಕಟ್ಟೆಯಲ್ಲಿ ನಮ್ಮ ಸಂಸ್ಥೆ ಒಂದು ಪ್ರಭಾವೀ ಕೇಂದ್ರವಾಗಿ ಉಳಿದಿರುವುದು ಎಲ್ಲವೂ ವ್ಯರ್ಥವೆ ? ಸುಳ್ಳೆ ?

ಮ : ಅದು ಯಾವುದನ್ನೂ ಕಡೆಗಣಿಸುವಂತಿಲ್ಲ. ಆದರೆ ಅದರಿಂದ ನಿನ್ನ ಉದ್ಧಾರ ಆಗಲಿಲ್ಲ.

ನಾ : ನನ್ನ ಉದ್ಧಾರ ಅಂದರೇನು ?

ಮ : ನಿನ್ನ ಕ್ಷೇತ್ರದಲ್ಲಿ ನಿನ್ನ ವೃತ್ತಿಯಲ್ಲಿ ಅತ್ಯುನ್ನತ ಶಿಖರ ಏರಲು ಪ್ರಯತ್ನಿಸುವುದೊಂದೇ ನಿನ್ನ ಉದ್ಧಾರದ ಮಾರ್ಗ. ಮಿಕ್ಕದ್ದೆಲ್ಲ ಒಂದು ವಿಧವಾದ ಕರ್ತವ್ಯ ಪರಾಙ್ಮುಖತೆ, ಕಠಿನ ಕರ್ತವ್ಯದಿಂದ ಪಲಾಯನಮಾಡುವ ತಂತ್ರ, ಭಾನಗಡಿ ಮನಸ್ಸಿನ ದೊಂಬರಾಟಗಳು ಮಾತ್ರ.

ನನ್ನ ಮನಸ್ಸಾಕ್ಷಿ ಮುಂಜಾನೆಯ ಮೂರು ಗಂಟೆಯ ನೀರವತೆಯಲ್ಲಿ ನನ್ನನ್ನು ಬಡಿದೆಬ್ಬಿಸಿ ತಿವಿದು ಕೇಳುತ್ತಿದ್ದ ಈ ಪ್ರಶ್ನೆಗಳನ್ನು ಎದುರಿಸಲು ನಾನು ಅಸಮರ್ಥನಾಗಿದ್ದೆ. ಬೆಳಗಾದೊಡನೆ ಸಂಘ ಯಮಭಾರದಿಂದ ನನ್ನನ್ನು ಜಗ್ಗುವುದು ಮಾಮೂಲಾಯಿತು—ಈ ಭಾರವೇನಾದರೂ ಅಕಸ್ಮಾತ್ತಾಗಿ ಕಳಚಿ ಹೋಗಿದ್ದರೆ ಚಂದ್ರನ ಮೇಲೆ ಆಕಾಶಪೋಷಾಕುರಹಿತನಾಗಿ ಇಳಿದ ಮಾನವನ ಪಾಡು ನನ್ನದಾಗಿ ಹೋಗುತ್ತಿತ್ತೋ ಏನೋ ! ಮಡಿಕೇರಿಯಲ್ಲಿ ಇರುವ ತನಕವೂ ನನಗೆ ಮೋಕ್ಷ ಅಲಭ್ಯ. ಆದ್ದರಿಂದ ಪರ ಊರಿಗೆ ವರ್ಗ ಪಡೆದು ನೆಮ್ಮದಿಯಿಂದ ಕರಗಿ ಹೋಗುವುದೊಂದೇ ಸರಿಯಾದ ಹಾದಿ ಎಂದು ಯೋಚಿಸತೊಡಗಿದೆ.

ಸಂಘದ ವಿಸಂಘಟನೆ

1962ರ ದ್ವಿತೀಯಾರ್ಧದಲ್ಲಿ ಚೈನಾದೇಶ ಭಾರತದ ವಿರುದ್ಧ ಹಠಾತ್ತಾಗಿ ಯುದ್ಧ ಸಾರಿತು. ಆಗ ರಾಷ್ಟ್ರ ಕೈಗೊಂಡ ಹಲವಾರು ದೇಶರಕ್ಷಕ ಕಾರ್ಯಗಳ ಪೈಕಿ ಎನ್‌ಸಿಸಿಯ ಕ್ಷಿಪ್ರ ವಿಸ್ತರಣೆಯೂ ಒಂದು. ಆ ವೇಳೆಗೆ ಎನ್‌ಸಿಸಿಯಲ್ಲಿ ಕ್ಯಾಪ್ಟನ್ ದರ್ಜೆಯ ಅಧಿಕಾರಿ

ಆಗಿದ್ದ ನಾನು ಈ ವಿಸ್ತರಣೆಯ ಅಂಗವಾಗಿ ದೂರದ ಬೆಳ್ಳಾರಿಗೆ ಪೂರ್ಣಾವಧಿ ಮಿಲಿಟರಿ ಸೇವೆಯ ಅಧಿಕಾರಿಯಾಗಿ ಹೋಗಬೇಕಾಯಿತು. ಹೀಗೆ ನನ್ನ ಅರಿವಿಲ್ಲದೇ, ಒಂದು ರೀತಿ ಸ್ವಯಂಚಲಿಯಾಗಿ, ನಾನು ಕಾಲೇಜಿನ ಹುದ್ದೆಯಿಂದ ಮತ್ತು ಮಡಿಕೇರಿಯಿಂದ ಬಿಡುಗಡೆ ಗೊಂಡು ಹೊರಟುಬಿಟ್ಟೆ (1963ರ ಜುಲೈ 31). ಇಂಥ ಒಂದು ಬದಲಾವಣೆ ಸಂಭವಿಸಲಿದೆ ಎಂಬ ಕುರುಹು ನನಗೆ ಆ ಹಿಂದಿನ ಏಪ್ರಿಲ್ ವೇಳೆಗೇ ತಿಳಿದಿದ್ದುದರಿಂದ ಸೊಸೈಟಿಯ ಹಿರಿತನ ವನ್ನು ವ್ಯವಸ್ಥಿತವಾಗಿ ಬೇರೆ ಅಧ್ಯಾಪಕ ಗೌರವ ಕಾರ್ಯದರ್ಶಿಯವರಿಗೆ ವಹಿಸಿಕೊಟ್ಟು ಅವರಿಗೆ ಯುಕ್ತ ತರಬೇತು ಕೊಡುವುದು ಸಾಧ್ಯವಾಯಿತು. ಸಂಘಕ್ಕೆ ಆರಂಭದಿಂದಲೂ ಬೆನ್ನೆಲುಬಿ ನಂತಿದ್ದ ಜನಾರ್ದನ ಬಾಳಿಗರ ಅಜ್ಞಾತ ಅಯಾಚಿತ ಸೇವೆ ಹೇಗೂ ಇತ್ತು (ಆದರೆ ಅವರು ಮಾತ್ರ ಯಾವ ಹೆಸರನ್ನೂ ಎಂದೂ ಸ್ವೀಕರಿಸಿದವರಲ್ಲ). ಇನ್ನು ಖುದ್ದು ನನ್ನೊಡನೆ ಪಳಗಿದ ಪೂರ್ಣಾವಧಿಯ ಮ್ಯಾನೇಜರ್, ಅಕೌಂಟೆಂಟ್, ಸೇವಕ ಇವರ ದಂಡು ದಕ್ಷತೆಯ ಉನ್ನತ ಮಟ್ಟದಲ್ಲಿತ್ತು. ವ್ಯಾಪಾರ, ಸುನಾಮ, ಗಿರಾಕಿಗಳ ಪೀಳಿಗೆ, ತಾಂತ್ರಿಕ ಜ್ಞಾನ ಎಲ್ಲವೂ ಸಮರ್ಪಕವಾಗಿದ್ದುವು. ಆರ್ಥಿಕ ಸ್ಥಿತಿಗತಿಗಳು ಆರೋಗ್ಯವಾಗಿ ವರ್ಧಿಸುತ್ತಲೇ ಇದ್ದುವು. ನನ್ನ ಉತ್ತರಾಧಿಕಾರಿಯವರಿಗೆ ನಾನು ನೀಡಿದ ಸಲಹೆ ಇದು : "ನಮ್ಮ ಸಂಘ ವೊಂದು ಭಾರೀ ಮರ್ಸಿಡೆಸ್ ಬೆನ್ಜ್ ಲಾರಿ. ಇದರ ಯಾಂತ್ರಿಕ ಸ್ಥಿತಿ ಸೊಗಸಾಗಿದೆ. ಉತ್ಕೃಷ್ಟ ಮಾಲುಗಳನ್ನು ಇದರಲ್ಲಿ ಹೇರಲಾಗಿದೆ. ಕಂಡಕ್ಟರ್, ಕ್ಲೀನರ್ ಎಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ನುರಿತವರು. ಆಸಕ್ತರು, ಪ್ರಾಮಾಣಿಕರು. ದಾರಿ ವಿಶಾಲವಾಗಿ ಮಟ್ಟಸ ವಾಗಿ ಹಬ್ಬಿದೆ. ಈಗ ಇದು ಒಳ್ಳೆ ವೇಗದಲ್ಲಿ ಓಡುತ್ತಿದೆ. ನೀವು ಚುಕ್ಕಾಣಿ ಚಕ್ರ ಹಿಡಿದು ಇದನ್ನು ಮುತುವರ್ಜಿಯಿಂದ ಓಡಿಸಿ. ವೇಗದ ಅಮಲು ನಿಮ್ಮ ತಲೆಗೆ ಹುಗದಿರಲಿ.''

ಮುಂದಿನ ಆರೇಳು ವರ್ಷಗಳಲ್ಲಿ ಸಂಘದ ಗೌರವ ಕಾರ್ಯದರ್ಶಿತ್ವದಲ್ಲಿ ಪದೇ ಪದೇ ಬದಲಾವಣೆಗಳಾದುವು. ಓರ್ವ ಗೌಡಬಂಗಾಳೀ ಮಹಾಶಯನ ಅಪ್ರಾಮಾಣಿಕ ದಬ್ಬಾಳಿಕೆಯ ಹೊಡೆತವನ್ನು ಸೈರಿಸಲಾರದ ಮ್ಯಾನೇಜರ್ ಹಾಗೂ ಅಕೌಂಟೆಂಟ್ ಕೆಲಸ ಬಿಟ್ಟು ಬೇರೆ ಊರು ಗಳಿಗೆ ಹೊರಟು ಹೋದರು. ವ್ಯಾಪಾರ ತಗ್ಗಿತು, ಸಗಟು ಪೂರೈಕೆದಾರರಿಗೆ ಸಂಘದ ವಿಚಾರ ವಿಶ್ವಾಸ ಹಾರಿಹೋಯಿತು, ಗಿರಾಕಿಗಳಿಗೆ ಇಲ್ಲಿ ಯಾವುದೂ ಖಾತ್ರಿ ಬೆಲೆಗೆ ದೊರೆಯುವ ನಂಬಿಕೆ ಉಳಿಯಲಿಲ್ಲ. ಒಟ್ಟು ಗೋಟಾಳೆ. ಇಂಥ ಇಳಿಕೆಯ ದಿನಗಳಂದು ಬೇರೆ ಒಬ್ಬನನ್ನು ಮ್ಯಾನೇಜರನಾಗಿ ತಂದು ಪಟ್ಟ ಕಟ್ಟಿದರು. "ಮಾರಿಗೌತಣವಾಯ್ತು" ಮುಂದಿನ ಈತನ ರಾಜ್ಯಭಾರ. ಆ ವೇಳೆ ಸಂಘದ ಪೂರ್ಣ ವಿಸರ್ಜನೆ ವ್ಯವಸ್ಥಿತವಾಗಿ ನಡೆದು 1973-74ರ ವೇಳೆಗೆ ಅದರ ಬಾಗಿಲಿಗೆ ಶಾಶ್ವತ ಬೀಗ ಬಿತ್ತು.

ನಾನು ಮಡಿಕೇರಿಯವನೇ ಆದ್ದರಿಂದ (1963 ರ ಅನಂತರ ಪರ ಊರುಗಳಲ್ಲಿ ಕೆಲಸ ಮಾಡುತ್ತಿದ್ದೇನೆ) ಅಲ್ಲಿಗೆ ಹೋದಾಗಲೆಲ್ಲ ಯಾರಿಗೂ ತಿಳಿಯದಂತೆ ಕಾಲೇಜು ವರೆಗೆ ಅಲೆದಾಡಿ ಸಂಘದ ಕಟ್ಟಡಕ್ಕೆ ಪ್ರದಕ್ಷಿಣೆ ಹಾಕಿ ಬರುವುದು ವಾಡಿಕೆ. ಆ ನೀರವ ಏಕಾಂತತೆಯಲ್ಲಿ ನನಗೆ ಸ್ಫುರಿಸುವುದು ಈ ಮುಂದಿನ ಚರಣ (ಕಡೆಂಗೋಡ್ಲು ಕ್ಷಮೆ ಕೋರಿ) :

ಗಾಳೀಬೀಡಿನ ದಿಬ್ಬದ ಮೇಲಿನ
ಕಾಲೇಜ್ ನಿಂತಿಹ ನೆಲದಲ್ಲಿ
ಕಟ್ಟಳೆಯುಂಟೇ ಕಟ್ಟುಗಳುಂಟೇ
ಹೊಯ್ದಿಡುವಾ ಮಳೆ ಚಾಟಿಯಲಿ ?

ನನ್ನ ಹಳೆಯ ಮಿತ್ರರು ಸಹೋದ್ಯೋಗಿಗಳು ಹಾಗೂ ಗಿರಾಕಿಗಳು ಈ ದುರಂತವನ್ನು ಕುರಿತು ಪ್ರಸ್ತಾವಿಸುವುದುಂಟು. ಇಂಥ ಮಾತುಗಳು ಮೂರು ವರ್ಗಗಳಲ್ಲಿ ಅಳವಡುತ್ತವೆ : ಒಂದು, ಈಗ ನನ್ನ ಭಾವನೆ ಏನು ? ಎರಡು, ನನ್ನಂಥ ದುಡಿಮೆಗಾರರ ಅಭಾವದಿಂದಾಗಿ ಈ ದುರಂತ ಸಂಭವಿಸಿತು ; ಮೂರು, ಮೂಲ ವ್ಯವಸ್ಥಾಪನೆಯಲ್ಲೇ ಹುದುಗಿದ್ದ ಯಾವುದೋ ಐಬಿನಿಂದಾಗಿ ಹೀಗಾಗಿರಬಹುದೇ ? ಈ ವಿಚಾರಗಳನ್ನು ನಾನು ಬಿಡುವಿದ್ದಾಗ ಯೋಚಿಸುವುದುಂಟು. ನನ್ನ ಅನ್ನಿಸಿಕೆಗಳು ಹೀಗಿವೆ.

ಒಂದನೆಯದಾಗಿ, ಈಗ ನನ್ನ ಭಾವನೆ ತಾತ್ತ್ವಿಕ ವಿಷಾದ ಮಾತ್ರ. ಚೆನ್ನಾಗಿ ಸಾರ್ವಜನಿಕೋಪಕಾರಿಯಾಗಿ ಕೆಲಸ ಮಾಡುತ್ತಿದ್ದ ಒಂದು ಸಂಸ್ಥೆ ಮುಚ್ಚಿ ಹೋಯಿತಲ್ಲ ಎಂಬ ಕಾರಣದಿಂದ. ಅದರ ಸಾರಥ್ಯವನ್ನು ನಾನು ವಹಿಸಿದ್ದಾಗ ನನಗೆ ದೊರೆತ ಅನುಭವ ಸಂತೃಪ್ತಿ ಹೇಗೂ ಪೂರ್ಣ ನನ್ನ ಸೊತ್ತೇ ತಾನೇ.

ಎರಡನೆಯದಾಗಿ, ಮೇಲುನೋಟಕ್ಕೆ ಇದು ನಿಜವೆಂದೇ ತೋರಬಹುದಾದರೂ (ಜೊತೆಗೆ ಇಂಥ ಹೇಳಿಕೆಗಳು ವೈಯಕ್ತಿಕ ಬಡಾಯಿ ಪ್ರತಿಷ್ಠೆಗಳಿಗೆ ಪೋಷಕಗಳಾಗಿರುವುವಾದರೂ) ವಾಸ್ತವವಾಗಿ ಖೇದವನ್ನು ಉಂಟು ಮಾಡುತ್ತದೆ. ರಾಷ್ಟ್ರದ ಭವಿಷ್ಯವನ್ನು ರೂಪಿಸುವಂಥ ಮತ್ತು "ಶೀಲಂ ಸರ್ವಸ್ಯ ಭೂಷಣಂ" ಆದರ್ಶವನ್ನು ಧರಿಸಿದ್ದಂಥ ಆ ಮಹಾ ವಿದ್ಯಾಮಂದಿರದಲ್ಲಿ ಒಬ್ಬನೇ ಒಬ್ಬ ಸಮರ್ಥ ಪ್ರಾಮಾಣಿಕ ಧುರೀಣನೂ ದೊರೆಯದಾದನೇ ? ಸಂಘ ನಡೆಸಲು ಬೇಕಾದದ್ದು ಮಹಾ ಮಿದುಳಲ್ಲ, ಸುಟಿ ವ್ಯಾಪಾರ ಚಾಕಚಕ್ಯವೂ ಅಲ್ಲ ; ಬದಲು ಪ್ರಾಮಾಣಿಕತೆ, ಶಾಂತಚಿಂತನೆ, ನಿರಂತರ ದುಡಿಮೆ. ಯಾವುದೇ ಸಂಸ್ಥೆ (ಅಥವಾ ಅದಕ್ಕಿಂತ ಹಿರಿಯದಾದ ಯಾವುದೇ ವ್ಯವಸ್ಥೆ) ಕೇವಲ ಓರ್ವ ವ್ಯಕ್ತಿಯನ್ನು ಅವಲಂಬಿಸಿರುವ ವ್ಯಕ್ತಿ-ಕೇಂದ್ರ ಸಂಘಟನೆಯಾದರೆ ಅದು ದೀರ್ಘಕಾಲ ಬಾಳಲು ಅರ್ಹತೆ ಪಡೆಯಲಾರದು.

ಮೂರನೆಯದಾಗಿ, ಇದಕ್ಕೆ ಉತ್ತರ ಹೇಳಲು ನಾನು ಸಮರ್ಥನಲ್ಲ. ಸಾರ್ವತ್ರಿಕವಾಗಿ ಒಂದು ಮಾತು ಹೇಳಬಹುದು ಅಷ್ಟೆ. ನಾವು ಸಂಘವನ್ನು ಸ್ಥಾಪಿಸಿದಾಗ ಯಾವುದೇ ವಿಧವಾದ ಸಿದ್ಧಾಂತ ಲೇಖ್ಯವೂ ನಮ್ಮ ಮುಂದೆ ಇರಲಿಲ್ಲ. ಈ ಸುದೀರ್ಘ ಲೇಖನದಲ್ಲಿ ವಿವರಿಸಿರುವಂತೆ ಎಲ್ಲವೂ "ಗ್ರಾಹಕರಿಗೆ ಕ್ಷಿಪ್ರ ಪ್ರಾಮಾಣಿಕ ಸೇವೆ" ಎಂಬ ಏಕೈಕೋದ್ದೇಶದ ಸುತ್ತ ವಿಕಸಿಸಿದುವು. ಇಂಥ ವಿಕಾಸಕ್ಕೆ ಪೋಷಕವಾಗಿದ್ದ ಪ್ರಧಾನ ಘಟಕಗಳೆಂದರೆ ಗೌರವ ಕಾರ್ಯದರ್ಶಿಯ ವ್ಯಕ್ತಿತ್ವ, ಕಾಲೇಜಿನ ಅಂತಸ್ತು ಹಾಗೂ ಸಮಕಾಲೀನ ಪರಿಸರ. ಅನೇಕ ವೇಳೆ ನಮ್ಮ ಸಂಘವೊಂದು ವ್ಯಕ್ತಿಕೇಂದ್ರ ವ್ಯವಸ್ಥೆಯೇ ಆಗಿದೆಯೋ ಏನೋ ಎಂಬ ಸಂದೇಹ ನನಗೆ ಬಂದದ್ದುಂಟು. ಆದರೆ ಮನುಷ್ಯನ ಚಟುವಟಿಕೆಗಳಲ್ಲಿ ಭಾರಿ ಭಾರಿ ಸರ್ಕಾರಗಳು ಕೂಡ ವ್ಯಕ್ತಿ-ಕೇಂದ್ರ ಸಂಘಟನೆಗಳೇ ಆಗಿ ಏಳುವುದನ್ನೂ ಬೀಳುವುದನ್ನೂ ಇತಿಹಾಸ ನಮಗೆ ಪದೇ ಪದೇ ಎತ್ತಿ ಕಾಣಿಸುತ್ತದೆ. ಯಾವುದೇ ಸಂಸ್ಥೆ ವ್ಯಕ್ತಿಸ್ವಾರ್ಥಕೇಂದ್ರ ವ್ಯವಸ್ಥೆಯಾಗಿ ಬೆಳೆಯು

ಬಾರದು, ಬದಲು "ನಿಮಿತ್ತಮಾತ್ರಂ ಭವಸವ್ಯಸಾಚಿನ್" ನಿಲುವಿನ ವ್ಯಕ್ತಿಕೇಂದ್ರವ್ಯವಸ್ಥೆಯಾಗಿ ಬಾಳಬೇಕು ಎಂದು ಮಾತ್ರ ನಾನು ಸೂಚಿಸಬಲ್ಲೆ. ತಾತ್ತ್ವಿಕವಾಗಿ ಇನ್ನೂ ಎತ್ತರಕ್ಕೆ ಏರಿ ಒಂದು ಮಾತು ಹೇಳಬಹುದು : ಪರಿಸರಕ್ಕೆ ಇಂಥ ಒಂದು ಸಂಘ ಅವಶ್ಯ ಎನ್ನಿಸಿದಾಗ ಅನುಕೂಲ ಬಲಗಳು ಒಂದೆಡೆ ಸೇರಿ ಕೆಲವು ವ್ಯಕ್ತಿಗಳಲ್ಲಿ ಆವಾಹನೆಗೊಂಡು ಉದ್ದೇಶ ಈಡೇರಿತು ; ಸಂಘದ ಉಪಯುಕ್ತತೆ ಸಾಕೆಂದಾದಾಗ ಅವೇ ಬಲಗಳು ವಿಸಂಘಟನೆಗೊಂಡುದರಿಂದ ಸಂಘ ಬರಖಾಸ್ತಾಗುವುದು ಅನಿವಾರ್ಯವಾಯಿತು.

ಸಮಾರೋಪ

ವ್ಯಾಪಾರ ಪ್ರಪಂಚದಲ್ಲಿ ಗಿರಾಕಿ ಅನುಭವಿಸುವ ಬಗೆಬಗೆಯಾದ ಮೋಸ ವಂಚನೆ ಕೋಟಲೆಗಳ ಎದುರಾಗಿ ಅವನಿಗೆ ರಕ್ಷಣೆ ಕೊಡುವ ದಿವ್ಯಮಂತ್ರ ಯಾ ರಕ್ಷಕ ಅಸ್ತ್ರ ಯಾವುದೂ ನನಗೆ ತಿಳಿದಿಲ್ಲ. ಅಂಥಾದ್ದು ಒಂದು ಎಲ್ಲಿಯಾದರೂ ಇದ್ದರೆ ಅದು "ಸಹಕಾರ"ವಂತೂ ಖಂಡಿತ ಅಲ್ಲ.

ಮನುಷ್ಯನ ಯಾವುದೇ ಸಮಸ್ಯೆಗಳಿಗೆ ಪರಿಹಾರಗಳನ್ನು ಅರಸುವಾಗ ಸಮಕಾಲೀನ ಪರಿಸರವನ್ನು ಗಣನೆಗೆ ತೆಗೆದುಕೊಳ್ಳಲೇಬೇಕು. ಇಂಗ್ಲೆಂಡಿನ ಅಂದಿನ ಪರಿಸರದಲ್ಲಿ (ಔದ್ಯಮಿಕ ಕ್ರಾಂತಿ, 18ನೆಯ ಶತಮಾನದ ಕೊನೆಭಾಗ) ಉದ್ಭವಿಸಿದ ಸಹಕಾರ ತತ್ತ್ವ ಇಂದಿನ ಭಾರತದ ವಿಭಿನ್ನ ಪರಿಸರದಲ್ಲಿ ತಾರಕಮಂತ್ರವಾದೀತೆಂಬ ನಂಬಿಕೆ ಅವೈಜ್ಞಾನಿಕವೆಂದು ನನ್ನ ಭಾವನೆ.

ಮನುಷ್ಯಮನಸ್ಸಿನ ವ್ಯಾಪಾರಗಳು ವಿಧಿನಿಯಮ ಪುಸ್ತಕಾತೀತವಾದವು. ಪ್ರಾಮಾಣಿಕತೆ ಅಪ್ರಾಮಾಣಿಕತೆ ಇದರ ಎರಡು ಮುಖಗಳು. ವ್ಯಕ್ತಿ ಪ್ರಾಮಾಣಿಕನಾದಲ್ಲಿ ದಫ್ತರಗಳು ಅನಾವಶ್ಯಕ ಹೊರೆಗಳಾಗುತ್ತವೆ ; ಅಪ್ರಾಮಾಣಿಕನಾದಲ್ಲಿ ಅವು ನಿಷ್ಪ್ರಯೋಜಕಗಳಾಗುತ್ತವೆ ಅಥವಾ ಅಪ್ರಾಮಾಣಿಕ ವ್ಯವಹಾರಗಳಿಗೆ ಪ್ರಾಮಾಣಿಕತೆಯ ಸೋಗಿನ ಮೊಗವಾಡವನ್ನು ಒದಗಿಸುವ ರಕ್ಷಕ ಕವಚಗಳಾಗುತ್ತವೆ. ಆದ್ದರಿಂದ ಬೆಳೆಯುತ್ತಿರುವ ಒಂದು ಜೈವಿಕ ವ್ಯವಸ್ಥೆಯಲ್ಲಿ ಪ್ರಧಾನ ಲಕ್ಷ್ಯ ಇರಬೇಕಾದದ್ದು ವ್ಯಕ್ತಿಗಳ ಪ್ರಾಮಾಣಿಕತೆ, ನಿಷ್ಠೆ, ಶ್ರದ್ಧೆ ಮುಂತಾದ ಜೀವಂತ ಸದ್ಗುಣಗಳೆಡೆಗೆ, ಜೀವರಹಿತ ವಿಧಿ ನಿಯಮ ನಿರ್ಬಂಧಗಳೆಡೆಗಲ್ಲ.

ಜೈವಿಕವಾಗಿ ಅಭಿವರ್ಧಿಸುತ್ತಿರುವ ಒಂದು ಸಂಸ್ಥೆಯ ಆರೋಗ್ಯ ಹದಗೆಡದಷ್ಟು ಪ್ರಮಾಣದಲ್ಲಿ ಮಾತ್ರ ವಿಧಿ ನಿಯಮ ನಿರ್ಬಂಧಗಳು ಇರಬೇಕು—ಭೂಮಿಯ ಗುರುತ್ವ ಬಲ ನಮ್ಮ ಮೇಲಿರುವಂತೆ—ಹೊರತು ಸಾಕ್ಷಾತ್ ಅದರ ಬೆಳೆವಣಿಗೆಯನ್ನೇ ಕುಂಠಿಸುವ ಹಂಜರಗಳು ಅವು ಆಗಬಾರದು.

ನಗದು ಪುಸ್ತಕದ ವಿಚಾರ ನಾವು ಎಚ್ಚರ ವಹಿಸಿದರೆ ಖಾತೆ ಪುಸ್ತಕಗಳು ತಂತಾವೇ ಶುದ್ಧವಾಗಿರುತ್ತವೆ. ನಮ್ಮ ಯಾವುದೇ ವ್ಯವಹಾರದಲ್ಲಿ ಉದ್ದೇಶ ಶುದ್ಧವಾಗಿದ್ದು ದೈನಂದಿನ ನಡವಳಿಕೆ ನೇರವಾಗಿದ್ದರೆ ನಾವು ಸಾಕ್ಷಾತ್ ಪರಬ್ರಹ್ಮನಿಗೆ ಕೂಡ ಅಂಜಬೇಕಾಗಿಲ್ಲ.

ಯಾವುದೇ ಸಂಘದ ಅಭಿವರ್ಧನೆ ಎಂದೂ ಹಣದ ಕೊರತೆಯಿಂದ ನಿಲ್ಲಲಾರದು ; ಅದು ಸ್ಥಗಿತವಾಗುವುದು ಯಾ ಇಳಿಮೊಗವಾಗುವುದು ನಿಸ್ಪೃಹತೆಯಿಂದ ದುಡಿಯಬಲ್ಲ ವ್ಯಕ್ತಿಗಳ ಅಭಾವದಿಂದ. ಆದ್ದರಿಂದ ಆದ್ಯ ಗಮನ ಹರಿಯಬೇಕಾದದ್ದು ನಿಷ್ಠಾವಂತ ಕರ್ತವ್ಯಪರಾಯಣರ ಸಂಚಯನದತ್ತ, ಆರ್ಥಿಕ ಸಂಪನ್ಮೂಲಗಳ ಸಂಗ್ರಹದತ್ತ ಅಲ್ಲ.

ಮೂಲ : ಕೆ. ಎಸ್. ದೇಶಪಾಂಡೆ

ಅನುವಾದ : ಬಾ. ವೇ. ಶ್ರೀಧರ್

ಜನಸಾಮಾನ್ಯರಿಗೆ ಗ್ರಂಥಾಲಯಗಳು

ಇಡೀ ಜಗತ್ತಿನ ಜನಸಾಮಾನ್ಯರ ದೃಷ್ಟಿಯಿಂದ 1972ನೆಯ ಇಸವಿ ಚರಿತ್ರಾರ್ಹವಾಗಿ ಉಳಿಯುತ್ತದೆ. ಅದನ್ನು 'ಯುನೆಸ್ಕೋ ಅಂತರರಾಷ್ಟ್ರೀಯ ಪುಸ್ತಕ ವರ್ಷ'ವೆಂದು ಘೋಷಿಸಿತು. ಆ ವರ್ಷವನ್ನು ಆಚರಿಸಲು ಅದು ಬಳಸಿದ ಘೋಷಣೆ 'ಎಲ್ಲರಿಗೂ ಪುಸ್ತಕಗಳು'. ಈ ತೀರ್ಮಾನದ ಹಿಂದೆ ಇರುವ ಅನೇಕ ಸ್ತುತ್ಯರ್ಹ ಉದ್ದೇಶಗಳಲ್ಲಿ ಒಂದನ್ನು ಇಲ್ಲಿ ಹೇಳಲೇಬೇಕು. ಇದು ಜನಸಾಮಾನ್ಯನ ದೃಷ್ಟಿಯಿಂದ ಅತಿ ಮುಖ್ಯವೂ ಶ್ರೇಷ್ಠವೂ ಆದುದು. ಅದೆಂದರೆ ಜಗತ್ತಿನಾದ್ಯಂತ ಇರುವ ಜನಸಾಮಾನ್ಯರು ತಮ್ಮ ದಿನನಿತ್ಯದ ಜೀವನದಲ್ಲಿ ಪುಸ್ತಕ ಅತಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆಂಬುದನ್ನು ಅರಿಯಬೇಕು ; ಅವರು ತಮ್ಮ ಜೀವನದಲ್ಲಿ ಪುಸ್ತಕಗಳನ್ನು ಓದುವ ಹವ್ಯಾಸವನ್ನೂ ಒಳ್ಳೆಯ ಪುಸ್ತಕಗಳ ಬಗ್ಗೆ ಪ್ರೀತಿಯನ್ನೂ ಬೆಳೆಸಿಕೊಳ್ಳಬೇಕು.

ಪುಸ್ತಕಗಳನ್ನು ಸ್ತುತಿಸುತ್ತ ಬಾರ್ಥೋಲಿನಿ ಅಲ್ಲವೆ ಹೀಗೆ ಹೇಳಿದ್ದು : "ಪುಸ್ತಕಗಳಿಲ್ಲದಿದ್ದರೆ ದೇವರು ಮೌನ, ನ್ಯಾಯ ಸುಪ್ತ, ವಿಜ್ಞಾನ ತಟಸ್ಥ, ತತ್ತ್ವಶಾಸ್ತ್ರ ಕುಂಟು, ಸಾಹಿತ್ಯ ಕುರುಡು, ಮತ್ತು ಉಳಿದವೆಲ್ಲ ಗಾಢಾಂಧಕಾರದಲ್ಲಿ ಮುಳುಗಿರುತ್ತವೆ."

ಅದ್ಭುತ ಪುಸ್ತಕಲೋಕದ ನಿಕಟ ಸಂಪರ್ಕವಿಲ್ಲದೆ ಹೋಗಿದ್ದರೆ ಎಷ್ಟೋ ಜನ ಮಹಾಪುರುಷರು ಪಾಮರರಾಗಿಯೇ ಉಳಿಯುತ್ತಿದ್ದರು ; ಮತ್ತು ಅವರು ಮಾನವಕುಲ ಸಂಪಾದಿಸಿರುವ ಜ್ಞಾನರಾಶಿಗೆ ಯಾವುದೇ ಗಣನೀಯವಾದ ಸಹಾಯ ಮಾಡದೆ ಹಾಗೆಯೇ ಜೀವನ ತಳ್ಳಿ ಕಣ್ಮರೆಯಾಗಿಬಿಡುತ್ತಿದ್ದರು. ಇಂಥ ಮಹಾಪುರುಷರ ನಿದರ್ಶನಗಳ ಪಟ್ಟಿಯನ್ನು ಬೆಳೆಸುತ್ತ ಹೋಗಬಹುದು. ಎರಡು ನಿದರ್ಶನಗಳನ್ನು ನೋಡಲು ಒಂದು ಕ್ಷಣ ನಿಲ್ಲೋಣ. ಬ್ರಿಟನ್ನಿನ ಗಣ್ಯ ಭೌತರಸಾಯನ ವಿಜ್ಞಾನಿ ಮೈಕೆಲ್ ಫ್ಯಾರಡೆ ಆರಂಭದಲ್ಲಿ ಪರಮಪಾಮರನಾಗಿದ್ದ. ಲಂಡನ್ನಿನ 18ನೆಯ ಶತಮಾನದ ಪುಸ್ತಕ ವ್ಯಾಪಾರಿಯೂ ಲೇಖನ ಸಾಮಗ್ರಿ ವ್ಯಾಪಾರಿಯೂ ಆದ ರೈಬೋ ಎಂಬಾತ ಈ ಎಳೆಯ ಫ್ಯಾರಡೆಗೆ ತನ್ನ ಅಂಗಡಿಯಲ್ಲಿ ಪುಸ್ತಕಕ್ಕೆ ರಟ್ಟುಕಟ್ಟುವುದನ್ನು ಪುಕ್ಕಟೆಯಾಗಿ ಕಲಿಯಲು ಅವಕಾಶ ದಯಪಾಲಿಸಿದ. ಈ ಕೂಸು ತನ್ನ ದಿನದ ಕಾಯಕ ಮುಗಿಸಿದ ಅನಂತರ ಬಿಡುವು ವೇಳೆಯಲ್ಲಿ ರೈಬೋ ಅಂಗಡಿಗೆ ಬೈಂಡುಮಾಡಲು ಬಂದ ಎಲ್ಲ ಬಗೆಯ ಪುಸ್ತಕಗಳನ್ನೂ ಕಣ್ಣಲ್ಲಿ ಕಣ್ಣಿಟ್ಟು ಓದಿದ. ಈ ಪುಸ್ತಕಗಳ ಪುಟಗಳಲ್ಲಿ ಆತ ಕಂಡು ಹಿಡಿದದ್ದು ನಿಜವಾಗಿಯೂ ಒಂದು ಸೋಜಿಗವೂ ಅದ್ಭುತವೂ ಆದ ಲೋಕವನ್ನು. "ನನ್ನ ಕೈ ಬಳಿಯಿದ್ದ ವೈಜ್ಞಾನಿಕ ಪುಸ್ತಕಗಳನ್ನು ನಾನು ವಿಶೇಷವಾಗಿ ಓದಬಯಸುತ್ತಿದ್ದೆ" ಎಂದು ಅವನು ಹೇಳುತ್ತಿದ್ದ. ಹೀಗೆ ಫ್ಯಾರಡೆಯ ಮನಸ್ಸಿನಲ್ಲಿ ಪ್ರತಿಭೆಯ ಕಿಡಿ ಪ್ರದೀಪ್ತವಾಯಿತು; ಆತ ಅಂತರರಾಷ್ಟ್ರೀಯ ಖ್ಯಾತಿವೆತ್ತ ಭೌತರಸಾಯನ ವಿಜ್ಞಾನಿಯಾಗಿ ಅರಳಿದ.

ರಷ್ಯನ್ ಭಾಷೆಯ ಹಿರಿಯ ಲೇಖಕನಾದ ಮ್ಯಾಕ್ಸಿಮ್ ಗಾರ್ಕಿಯ ಪುಸ್ತಕಗಳು ತನ ಮೇಲೆ ಹೇಗೆ ಪ್ರಭಾವ ಬೀರಿ ಪರಿವರ್ತಿಸಿದುವು ಎನ್ನುವುದನ್ನು ಹೇಳುತ್ತ, "ನನ್ನಲ್ಲಿರುವ ಸತ್ತ್ವಕ್ಕೆಲ್ಲ ಗ್ರಂಥಗಳೇ ಕಾರಣ", ಎನ್ನುತ್ತಾನೆ.

ಲಂಡನ್ನಿನ ಬಡವರ ಕೇರಿಯಲ್ಲಿ ಇದ್ದ ಇನ್ನೊಬ್ಬ ಜನಸಾಮಾನ್ಯನಾದ ಮಾರ್ಕ್ಸನಿಗೆ 18 ವರ್ಷಗಳ ಕಾಲ ಸತತವಾಗಿ ಬ್ರಿಟಿಷ್ ಮ್ಯೂಸಿಯಮ್ ಗ್ರಂಥಾಲಯಕ್ಕೆ ಹೋಗುವ ಸದವಕಾಶ ದೊರೆತಿತ್ತು. ಇದರ ಫಲವಾಗಿ ಆವನ "ದಾಸ್ ಕ್ಯಾಪಿಟಲ್" ಎಂಬ ಮೇರುಕೃತಿ ಹೊರಬಂತು.

ಆದರೆ ಈಚಿನ ದಿನಗಳಲ್ಲಿ ಪುಸಕ್ತಗಳು ಸಾಮಾನ್ಯನ ಕೈಗೆ ಎಟುಕದಂಥವು ; ಅವುಗಳ ಬೆಲೆ ದುಬಾರಿ, ಸಂಖ್ಯೆಯೂ ಅಪಾರ. ಅದರಲ್ಲೂ ಅಗತ್ಯ ವಸ್ತುಗಳ ಬೆಲೆ ಒಂದೇ ಸಮನೆ ಏರುತ್ತಿರುವಾಗ ಪುಸ್ತಕಗಳು ಜನಸಾಮಾನ್ಯನಿಗೆ ಹಾಬ್‌ಸನನ ಆಯ್ಕೆಯೇ ಸರಿ. ಅಂದರೆ ಒಳ್ಳೆಯ ಪುಸ್ತಕ ಕೊಂಡುಕೊಳ್ಳಬೇಕೇ ಒಳ್ಳೆಯ ಅಂಗಿ ಕೊಂಡುಕೊಳ್ಳಬೇಕೇ ಎಂಬ ಸಮಸ್ಯೆ ಹುಟ್ಟಿದಾಗ ಹಣವಿಲ್ಲದವನ ಮುಂದೆ ಇರುವ ಆಯ್ಕೆ ಎರಡಲ್ಲ, ಒಂದೇ (ಅಂದರೆ ಅಂಗಿ). ಆದ್ದರಿಂದ ಸಾರ್ವಜನಿಕ ಗ್ರಂಥಾಲಯಗಳ ವಲಯದ ಮೂಲಕ ಪುಸ್ತಕಗಳನ್ನು ಜನ ಸಾಮಾನ್ಯನಿಗೆ ರಾಷ್ಟ್ರ ಒದಗಿಸಬಹುದು ; ಒದಗಿಸಬೇಕು.

ಜನಸಾಮಾನ್ಯರಿಗೆ ಗ್ರಂಥಾಲಯಗಳ ಪ್ರಾಮುಖ್ಯ ಎಷ್ಟಿದೆಯೆಂಬುದನ್ನು ಆಧುನಿಕ ಲೋಕದ ರಾಷ್ಟ್ರಗಳಲ್ಲಿ ಮೊದಲು ಅರಿತ ದೇಶವೆಂದರೆ ಬ್ರಿಟನ್. 1850ರಲ್ಲಿ ಬ್ರಿಟಿಷ್ ಪಾರ್ಲಿಮೆಂಟು ಮೊಟ್ಟಮೊದಲಿಗೆ ಸಾರ್ವಜನಿಕ ಗ್ರಂಥಾಲಯಗಳ ಕಾಯಿದೆಯನ್ನು ಅಂಗೀಕರಿಸಿತು. ಹೆಚ್ಚು ಕಡಮೆ ಅದೇ ಕಾಲದಲ್ಲೇ ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಆಧುನಿಕ ಗ್ರಂಥಾಲಯ ಚಳವಳಿಯ ತಾಯ್ನಾಡೆಂದು ಕರೆಯಲಾದ ಮ್ಯಾಸಚೂಸೆಟ್ಸ್ ರಾಜ್ಯ ಒಂದು ಗ್ರಂಥಾಲಯ ಕಾಯಿದೆಯನ್ನು ಅಂಗೀಕರಿಸಿತು.

ಭಾರತದಲ್ಲಿ ಅಂಥ ಪ್ರಯತ್ನಗಳಲ್ಲೆಲ್ಲ ಮೊಟ್ಟಮೊದಲನೆಯದನ್ನು ಬರೋಡದ ಆಗಿನ ಮಹಾರಾಜ ಸಯಾಜಿರಾವ್ ಗಾಯಕ್‌ವಾಡ್ ಮಾಡಿದರು. ಅವರು 1910 ರಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದರು. ಈ ಸ್ತುತ್ಯರ್ಹ ಯೋಜನೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಜನಸಾಮಾನ್ಯರಿಗೆ ಉಚಿತ ಸಾರ್ವಜನಿಕ ಗ್ರಂಥಾಲಯ ಶ್ರೇಣಿಯನ್ನು ಉಪಕ್ರಮಿಸಿದರು. ಗ್ರಂಥಾಲಯ ಕಾಯಿದೆಯನ್ನು ಜಾರಿಗೆ ತಂದ ಮೊದಲ ರಾಜ್ಯವೆಂದರೆ ಮದರಾಸು. ಹೀಗಾಗಲು ಸಯಾಜಿರಾವ್‌ರವರ ಪ್ರಯತ್ನದ ಅನಂತರ 38 ವರ್ಷಗಳು ಕಳೆಯಬೇಕಾಯಿತು.

ಸೋವಿಯತ್ ರಷ್ಯದ ನಿರ್ಮಾಣದ ಆರಂಭದಲ್ಲಿಯೇ ಲೆನಿನ್ನರು ತಮ್ಮ ದೇಶದಲ್ಲಿ ಗ್ರಂಥಾಲಯಗಳ ಆವಶ್ಯಕತೆಯ ಬಗ್ಗೆ ತೀವ್ರವಾಗಿ ಆಲೋಚಿಸಿದರು. 1920ರಲ್ಲಿ ಅವರು ಕನಿಷ್ಠ ಪಕ್ಷ 50,000 ಗ್ರಂಥಾಲಯಗಳನ್ನು ಸ್ಥಾಪಿಸಲು ತೀರ್ಮಾನಿಸಿದರು. ಇಂದು ಸೋವಿಯತ್ ದೇಶದಲ್ಲಿ 3,60,000 ಗ್ರಂಥಾಲಯಗಳಿವೆ ; 3,300 ದಶಲಕ್ಷ ಗ್ರಂಥಗಳಿವೆ.

ಕ್ಯೂಬದ ಆಡಳಿತಯಂತ್ರವನ್ನು ವಹಿಸಿಕೊಂಡ ಒಡನೆಯೇ ಫಿಡೆಲ್ ಕ್ಯಾಸ್ಟ್ರೋ ಕ್ಯೂಬ ದೇಶ ಮುಂದೆ ಬರಬೇಕಾದರೆ ಮತ್ತು ಸ್ವಯಂಪರಿಪೂರ್ಣವಾಗಬೇಕಾದರೆ ಅದು

ತನ್ನ ದೇಶದಿಂದ ಅನಕ್ಷರತೆಯನ್ನು ತೊಲಗಿಸಲೇಬೇಕು ಎಂದು ಮನಗಂಡರು. ಆದ್ದರಿಂದಲೇ ಕ್ಯಾಸ್ಟ್ರೋ ಅನಕ್ಷರತೆಯನ್ನು ತೊಲಗಿಸುವ ಉಗ್ರಕಾರ್ಯಕ್ರಮವೊಂದನ್ನು ಆರಂಭಿಸಿದರು; ಅಲ್ಲದೆ ತಮ್ಮ ದೇಶದ ಅನಕ್ಷರಸ್ಥರು ಪುನಃ ಅನಕ್ಷರಸ್ಥರಾಗದಿರಲು ಅಂಥದೇ ಇನ್ನೊಂದು ಉಗ್ರ ಕಾರ್ಯಕ್ರಮವನ್ನು ಆರಂಭಿಸಿದರು. ಈ ಯೋಜನೆಯ ಮೂಲಕ ಅವರು ತಮ್ಮ ದೇಶದವರಿಗೆ ಪುಸ್ತಕಗಳನ್ನು ನೀರಿನಷ್ಟು ಧಾರಾಳವಾಗಿಯೂ ಅಗ್ಗವಾಗಿಯೂ ದೊರಕಿಸಿಕೊಟ್ಟರು.

ಅತ್ಯಲ್ಪ ಕಾಲದಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿರುವ ಜಪಾನ್ ಹಾಗೂ ಇತರ ದೇಶಗಳ ಇತ್ತೀಚಿನ ಇತಿಹಾಸವನ್ನು ನಾವು ಓದಿದರೆ, ಜನಸಾಮಾನ್ಯರಿಗೆ ಪುಸ್ತಕಗಳನ್ನೂ ಗ್ರಂಥಾಲಯ ಸೌಲಭ್ಯಗಳನ್ನೂ ಒದಗಿಸಿಕೊಟ್ಟದ್ದೇ ಆ ದೇಶಗಳ ಸಾಧನೆಯ ಗುಟ್ಟು ಎಂಬುದೂ ಇಂತಹ ಸೌಲಭ್ಯಗಳಿಂದಾಗಿ ಅವರು ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದು ಮಾತ್ರ ವಲ್ಲದೆ ಇಡೀ ದೇಶದ ಪ್ರಗತಿಗೆ ಗಣನೀಯವಾದ ಸೇವೆಮಾಡಬಹುದು ಎಂಬುದೂ ನಮಗೆ ತಿಳಿಯುತ್ತದೆ. ಸರಿಯಾದ ಕಾಲದಲ್ಲಿ ಮತ್ತು ಸರಿಯಾದ ಸ್ಥಳದಲ್ಲಿ ಸರಿಯಾದ ಪುಸ್ತಕಗಳು ದೊರಕದೆ ಹೋಗಿ ಜನಸಾಮಾನ್ಯನ ಉತ್ಸಾಹ ಉಡುಗಿ ನಂದಿಹೋಗುತ್ತದೆ.

ಪ್ರಜಾಸತ್ತೆ ಎಂಬುದು ಒಂದು ಮಹಾ ಸಾಹಸ. ಇಪ್ಪತ್ತೈದು ವರ್ಷಗಳ ಹಿಂದೆ ನಮ್ಮ ದೇಶ ಈ ಮಾರ್ಗದಲ್ಲಿ ಹೆಜ್ಜೆಯಿಟ್ಟಿತು. ಪ್ರಜಾಸತ್ತೆಯೆಂಬ ಪ್ರಯೋಗಕ್ಕೆ ತಿಳಿವಳಿಕೆ ಯುಳ್ಳ ಮತದಾರರು ಇರುವುದು ಅನಿವಾರ್ಯ. ಪ್ರಜಾಸತ್ತೆ ಎಂದರೆ ದೇಶದ ಹೊಣೆಯನ್ನು ಎಲ್ಲರೂ ಸಮನಾಗಿ ಹೊತ್ತುಕೊಳ್ಳುವುದು. ಸಹಕಾರ ಮತ್ತು ಪರಸ್ಪರ ಸಾಮರಸ್ಯಗಳಿಲ್ಲದಿದ್ದರೆ ಹೀಗೆ ಹೊತ್ತುಕೊಳ್ಳುವುದು ಸಾಧ್ಯವೇ ಇಲ್ಲ. ಅನಿರ್ಬಂಧಿತವೂ ಅಬಾಧಿತವೂ ಮುಕ್ತವೂ ಆದ ಜ್ಞಾನಪ್ರಸಾರ ವ್ಯವಸ್ಥೆಯಿದ್ದರೆ ಮಾತ್ರ ಸಹಕಾರ, ಸಾಮರಸ್ಯಗಳು ಸಫಲವಾಗಬಲ್ಲವು. ಜನ ಸಾಮಾನ್ಯನ ಗ್ರಂಥಾಲಯವಾದ ಸಾರ್ವಜನಿಕ ಗ್ರಂಥಾಲಯವೇ ಈ ಜ್ಞಾನಪ್ರಸಾರಕ್ಕೆ ಮುಖ್ಯ ವಾದ ಮಾಧ್ಯಮ.

ಆದರ್ಶ ಪ್ರಜಾಪ್ರಭುತ್ವವಾಗುವ ಪ್ರಯತ್ನದಲ್ಲಿ ಭಾರತ 6ರಿಂದ 14 ವರ್ಷಗಳೊಳಗಿನ ಎಲ್ಲ ಮಕ್ಕಳಿಗೂ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿತು. ನಮ್ಮ ಸರ್ಕಾರಗಳ ಹಾಗೂ ನಮ್ಮ ಜನತೆಯ ಸ್ತುತ್ಯರ್ಹ ಪ್ರಯತ್ನಗಳಿಂದಾಗಿ ಹಿಂದಿನ 25 ವರ್ಷಗಳಲ್ಲಿ ಸಾಕ್ಷರತೆಯ ಸೇಕಡಾವಾರು ಹೆಚ್ಚುಕಡಮೆ ದ್ವಿಗುಣವಾಗಿದೆ. ಸ್ವಾತಂತ್ರ್ಯಕಾಲದಲ್ಲಿ ಸೇಕಡ 15ರಷ್ಟು ಇದ್ದದ್ದು 1971ರ ಹೊತ್ತಿಗೆ ಸಾಕ್ಷರತೆ ಸೇಕಡ 30ರಷ್ಟಾಗಿದೆ. ಇದು ನಿಜವಾಗಿಯೂ ಗಣನೀಯವಾದ ಸಾಧನೆ. ನಾವು ಇನ್ನೂ ಬಹು ದೂರ ಸಾಗಬೇಕಾಗಿದೆ. ಕಟ್ಟಡಗಳ ಕೊರತೆ, ಸೂಕ್ತವಾದ ಜನಬಲದ ಕೊರತೆ ಇವು ನಾವು ಇನ್ನೂ ವೇಗವಾಗಿ ಸಾಗುವುದನ್ನು ತಡೆದಿರ ಬಹುದು. ಆಗಿರುವ ಸಾಧನೆ ಗಣನೀಯವಾದುದು; ಆದರೂ ಈ ಸಾಧನೆಗಳನ್ನೆಲ್ಲ ಕ್ರೋಡೀಕರಿಸಿ ಸುಭದ್ರಗೊಳಿಸಬೇಕು. ಏಕೆಂದರೆ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳನ್ನು ಬಿಟ್ಟುಬಿಟ್ಟಿ ರುವ ಅಲ್ಪ ಸ್ವಲ್ಪ ಅಕ್ಷರಸ್ಥರೂ ಅನಕ್ಷರತೆಗೆ ಮರುಕಳಿಸುವ ಅಪಾಯವಿದೆ.

ಪುಸ್ತಕಗಳು ಜನರಿಗೆ ವಿಷಯದ ಬಗೆಗೆ ತಿಳಿವಳಿಕೆ ನೀಡುತ್ತವೆ. ಇವುಗಳನ್ನು ನಮ್ಮ ದೇಶದ ಅಲ್ಪಸಂಖ್ಯಾತರಾದ ಅಕ್ಷರಸ್ಥರಿಗೆ ಒದಗಿಸಿಕೊಡಬೇಕು. ಇದರಿಂದ ಬಹುಸಂಖ್ಯಾತ ಅನಕ್ಷರಸ್ಥರು ಅಕ್ಷರಸ್ಥರ ಮೇಲ್ಪಂಕ್ತಿಯನ್ನು ಅನುಸರಿಸಬಹುದು. ಸಾರ್ವಜನಿಕ ಗ್ರಂಥಾಲಯ

ವಲಯುವನ್ನು ವಿಂಗಡಿಸಿ ವ್ಯವಸ್ಥಿಗೊಳಿಸಿದರೆ ಮಾತ್ರ ಇದನ್ನು ಸಾಧಿಸಬಹುದು. ಸಾರ್ವಜನಿಕ ಗ್ರಂಥಾಲಯುಗಳನ್ನು, ಅಂದರೆ ಜನಸಾಮಾನ್ಯರ ಗ್ರಂಥಾಲಯುಗಳನ್ನು, ರಾಜ್ಯಗಳು ಸ್ಥಾಪಿಸ ಬೇಕು. ದೇಶದ 21 ರಾಜ್ಯಗಳಲ್ಲಿ ಈಗ ನಾಲ್ಕು ರಾಜ್ಯಗಳಲ್ಲಿ ಮಾತ್ರ—ಅಂದರೆ ತಮಿಳು ನಾಡು, ಆಂಧ್ರ ಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಮಾತ್ರ—ಸಾರ್ವಜನಿಕ ಗ್ರಂಥಾಲಯು ಗಳ ಕಾಯಿದೆ ಇದೆ, ಕಾನೂನುಗಳಿವೆ. ಈ ಕಾನೂನುಗಳ ನಿಬಂಧನೆಗಳ ಪ್ರಕಾರ ಜನ ಸಾಮಾನ್ಯನ ಮನೆಬಾಗಿಲಿಗೇ ಜ್ಞಾನದೀವಿಗೆಯನ್ನು ಒಯ್ಯುವ ಪ್ರಯತ್ನ ಮಾಡಲಾಗುತ್ತಿದೆ.

ಸ್ವಲ್ಪ ಕಾಲದ ಹಿಂದೆ ಕೇಂದ್ರಸರ್ಕಾರವೇ ಸ್ವತಃ ಸಾರ್ವಜನಿಕ ಗ್ರಂಥಾಲಯುಗಳ ಮಸೂದೆಯ ಮಾದರಿಯೊಂದನ್ನು ರಚಿಸಿ ಎಲ್ಲ ರಾಜ್ಯಗಳಿಗೂ ಕಳುಹಿಸಿಕೊಟ್ಟು ರಾಜ್ಯಸರ್ಕಾರ ಗಳು ಈ ವಿಷಯುದ ಬಗ್ಗೆ ಕಾನೂನು ಜಾರಿಗೆ ತರಬೇಕೆಂದು ಸೂಚಿಸಿತು. ಅದು ಯುನೆಸ್ಕೋವಿನ ಸಹಕಾರದೊಂದಿಗೆ ನಿಜವಾಗಿಯೂ ಉಚಿತ ಸಾರ್ವಜನಿಕ ಗ್ರಂಥಾಲಯುವೊಂದನ್ನು ಅಂದರೆ ಡೆಲ್ಲಿ ಪಬ್ಲಿಕ್ ಲೈಬ್ರರಿಯನ್ನು, ರಾಜಧಾನಿಯಲ್ಲಿ ಸ್ಥಾಪಿಸಿ ದಾರಿ ತೋರಿಸಿಕೊಟ್ಟಿತು. ಡೆಲ್ಲಿ ಪಬ್ಲಿಕ್ ಲೈಬ್ರರಿ ನಮ್ಮ ದೇಶಕ್ಕೆ ಮಾತ್ರವಲ್ಲ, ಇಡೀ ಆಗ್ನೇಯ ಏಷ್ಯಕ್ಕೇ ಆದರ್ಶಪ್ರಾಯ ವಾದ ಸಾರ್ವಜನಿಕ ಗ್ರಂಥಾಲಯು. 1951ರಲ್ಲಿ ಪ್ರಧಾನಮಂತ್ರಿ ನೆಹರೂ ಅವರು ಇದನ್ನು ಉದ್ಘಾಟಿಸಿದರು. ಕೂಡಲೆ ಅದಕ್ಕೆ ಅಗಾಧವಾದ ಜಯ ದೊರೆಯಿತು. ಅದರ ಪುಸ್ತಕಗಳು ಬಹುಮಟ್ಟಿಗೆ ಅನುಕ್ರಮವಾಗಿ ಹಿಂದಿ, ಪಂಜಾಬಿ, ಉರ್ದು ಮತ್ತು ಇಂಗ್ಲಿಷ್ ಭಾಷೆಯವು. ಜ್ಞಾನಕ್ಕಾಗಿ ಹಸಿದಿದ್ದ ದೆಹಲಿಯ ಅಕ್ಷರಸ್ಥರು ಆ ಪುಸ್ತಕಗಳನ್ನು ಅಕ್ಷರಶಃ ಭಕ್ಷಿಸಿಬಿಟ್ಟರೆಂದೇ ಹೇಳಬಹುದು. ಗ್ರಂಥಾಲಯುದ ಅಧಿಕಾರಿಗಳಿಗೆ ದೆಹಲಿಯ ಸಾರ್ವಜನಿಕರ ಈ ಬೇಡಿಕೆಯನ್ನು ಪೂರೈಸುವುದು ಹೇಗೆಂಬ ಬಗ್ಗೆ ಬುದ್ಧಿಯೇ ತೋಚದಂತಾಗುವ ಕಾಲ ಒದಗಿತ್ತು. ತುಂಬ ಬೇಡಿಕೆ ಇದ್ದುದ್ದು ಹಿಂದಿ ಮತ್ತು ಇತರ ರಾಜ್ಯಭಾಷೆಗಳಲ್ಲಿ ಬರೆದ ಪುಸ್ತಕಗಳ ಕಡಮೆ ಬೆಲೆಯು ಆವೃತ್ತಿಗಳಿಗೆ. ಇವುಗಳ ಸಂಖ್ಯೆಯನ್ನು ಹೆಚ್ಚಿಸುವುದರ ಮೂಲಕ ಗ್ರಂಥಾಲಯುಕ್ಕೆ ಒದಗಿದ್ದ ಇಕ್ಕಟ್ಟಿನ ಪರಿಸ್ಥಿತಿಯನ್ನು ಭಾಗಶಃ ನಿವಾರಿಸಲಾಯಿತು.

ಜನಸಾಮಾನ್ಯರಿಗೆ ಬೇಕಾದ ಪುಸ್ತಕಗಳ ವಿಷಯಕ್ಕೆ ಬರೋಣ. ಅವರಿಗೆ, ಅದರಲ್ಲೂ ನಗರೇತರ ಹಾಗೂ ಹಳ್ಳಿಗಾಡಿನ ಜನರಿಗೆ, ಆಯಾ ಪ್ರಾದೇಶಿಕ ಭಾಷೆಗಳ ಪುಸ್ತಕಗಳ ಅಗತ್ಯವಿದೆ. ಆದ್ದರಿಂದ ಜನಸಾಮಾನ್ಯರ ಆವಶ್ಯಕತೆಗಳಿಗೆ ಸರಿಹೊಂದುವಂಥ ಪ್ರಾದೇಶಿಕ ಭಾಷೆಗಳ ಪುಸ್ತಕ ಗಳನ್ನು ಸಂಗ್ರಹಿಸುವ ಕಾರ್ಯಕ್ಕೆ ಸಾರ್ವಜನಿಕ ವ್ಯವಸ್ಥೆ ಹೆಚ್ಚು ಪ್ರಾಮುಖ್ಯ ನೀಡುವುದು ಅವಶ್ಯವಾಗುತ್ತದೆ. ಈ ಕೆಲಸವನ್ನು ಬಹಳ ತುರ್ತಾಗಿಯೂ ಮಾಡಬೇಕಾಗಿದೆ. ಪ್ರಾದೇಶಿಕ ಭಾಷೆಗಳ ಪುಸ್ತಕಗಳಿಗೆ ಒಂದೇ ಸಮನಾಗಿ ಬೇಡಿಕೆ ಇದೆ. ಇವುಗಳ ಸಂಗ್ರಹಕ್ಕೆ ಕುಂದುಬರುವಂತೆ ಈಗ ಇಂಗ್ಲಿಷ್ ಹಾಗೂ ಇತರ ವಿದೇಶೀ ಭಾಷೆಗಳಲ್ಲಿನ ದುಬಾರಿ ಬೆಲೆಯ ಪರಾಮರ್ಶನ ಗ್ರಂಥಗಳನ್ನೂ ಅದೇ ಭಾಷೆಗಳಲ್ಲಿನ ವಿಶೇಷ ಅಧ್ಯಯನಕ್ಕೆ ಸಂಬಂಧಿಸಿದ ಪುಸ್ತಕಗಳನ್ನೂ ಗ್ರಂಥಾಲಯುಗಳಲ್ಲಿ ಕೊಳ್ಳಲಾಗುತ್ತಿದೆ. ಇಂಥ ನಿದರ್ಶನಗಳು ಹೇರಳವಾಗಿ ದೊರಕುತ್ತವೆ. ಈ ವ್ಯಾಮೋಹವನ್ನು ತಡೆಗಟ್ಟಿ ಸಾರ್ವಜನಿಕ ಗ್ರಂಥಾಲಯುಗಳು ತಮ್ಮ ಅತ್ಯಲ್ಪ ಹಣವನ್ನು ಸಮಾಜದ ಜನಸಾಮಾನ್ಯರ ಅನುಕೂಲಕ್ಕೆ ಬರುವಂತಹ ಪುಸ್ತಕಗಳನ್ನು ಕೊಳ್ಳಲು ವಿನಿಯೋಗಿಸ ಬೇಕು. ಆದ್ದರಿಂದ ಸಮಾಜದ ಅಕ್ಷರಸ್ಥರೆಲ್ಲರ—ಕ್ಷೌರಿಕ, ದರ್ಜಿ, ಬಡಗಿ, ಗೃಹಿಣಿ, ವ್ಯಾಪಾರಿ,

ಗಿರಾಕಿ, ಗುರುಶಿಷ್ಯರು, ಸ್ತ್ರೀಪುರುಷರು, ಮಗು, ಗಂಡಹೆಂಡತಿಯರು, ಸೋದರ ಸೋದರಿಯರು, ತಂದೆ, ಮಗ, ಮೊಮ್ಮಗ, ಮೊದಲಾದವರೆಲ್ಲರ—ಪ್ರಯೋಜನಕ್ಕಾಗಿ ಪುಸ್ತಕಗಳನ್ನು ಕೊಂಡು ಶೇಖರಿಸುವುದು ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯ ಕರ್ತವ್ಯವಾಗುತ್ತದೆ.

ನಮ್ಮ ದೇಶದಲ್ಲಿ ಕೇವಲ 30% ಅಕ್ಷರಸ್ಥರಿದ್ದಾರೆ, 70% ಅನಕ್ಷರಸ್ಥರಿದ್ದಾರೆ. ಈ 30% ಅಕ್ಷರಸ್ಥರಿಗೆ ಸಾರ್ವಜನಿಕ ಗ್ರಂಥಾಲಯ ಮಾಡುವ ವ್ಯವಸ್ಥೆ ಇಷ್ಟಾದರೆ, ಇನ್ನು ಬಹುಪಾಲು ಅನಕ್ಷರಸ್ಥ ಸಮುದಾಯಕ್ಕೆ ಅದು ಇನ್ನೂ ಹೆಚ್ಚು ಮಾಡಬೇಕು. ಸಾರ್ವಜನಿಕ ಗ್ರಂಥಾಲಯವ್ಯವಸ್ಥೆ ತನ್ನ ಇತರ ಮಾಧ್ಯಮಗಳ—ಅಂದರೆ ಅದರ ಚಲನಚಿತ್ರ ಸಂಗ್ರಹ, ವಾಕ್ಚಿತ್ರಗಳ ಧ್ವನಿಮುದ್ರಿತ ಸಂಗ್ರಹ, ಹಸ್ತಲಿಖಿತ ಮತ್ತು ಮುದ್ರಿತ ಚಿತ್ರಗಳು, ಮತ್ತಿತರ ಶ್ರವಣ ವೀಕ್ಷಣ ಸಾಧನಗಳು (audio visual aids) ಮತ್ತು ಉಪನ್ಯಾಸಗಳು, ಸಂಭಾಷಣೆಗಳನ್ನು ಏರ್ಪಡಿಸುವುದು, ಕ್ಲಿಪ್ತ ವೇಳೆಯಲ್ಲಿ ಕಥೆಗಳನ್ನು ಹೇಳುವುದು, ಇವುಗಳ— ಮೂಲಕ ಜನಗಳಿಗೆ ತಿಳಿವಳಿಕೆ ಕೊಟ್ಟು ಸುಶಿಕ್ಷಿತರನ್ನಾಗಿ ಮಾಡಬಹುದು. ಆದ್ದರಿಂದಲೆ ಅಲ್ಲವೆ ಒಂಬತ್ತನೆ ಶತಮಾನದ ನಮ್ಮ ಅಗ್ರಮಾನ್ಯ ಕವಿಗಳಲ್ಲೊಬ್ಬ, ಅಷ್ಟಾಗಿ ಓದುಬರಹ ಬಾರದವರೂ ಮಹಾಕಾವ್ಯದ ಸ್ವಾರಸ್ಯವನ್ನು ಮೆಚ್ಚಬಲ್ಲರು ಎಂದು ಹೇಳಿದ್ದು ? ಒಂಬತ್ತನೆ ಶತಮಾನದ ಕನ್ನಡಿಗನಾದ ನೃಪತುಂಗ ತನ್ನ ಪ್ರಜೆಗಳನ್ನು ಕುರಿತು ಕವಿರಾಜಮಾರ್ಗದಲ್ಲಿ "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್" ಎಂದಿದ್ದಾನೆ. ಜನಸಾಮಾನ್ಯರಿಗಾಗಿ ಪುಸ್ತಕಗಳ ಹಾಗೂ ಕಾವ್ಯಗಳ ವಾಚನ ಮಾಡುವುದು ಸಾರ್ವಜನಿಕ ಗ್ರಂಥಾಲಯದ ಒಂದು ಅತಿಮುಖ್ಯವಾದ ಹಾಗೂ ಪ್ರಧಾನವಾದ ಕೆಲಸ. ರೇಡಿಯೋ, ದೂರದರ್ಶನ ಇವು ಗ್ರಾಮಾಂತರ ಪ್ರದೇಶಗಳನ್ನು ಪ್ರವೇಶಿಸಿದೆಂತೆಲ್ಲ ಅವುಗಳನ್ನೂ ಸಾರ್ವಜನಿಕ ಗ್ರಂಥಾಲಯದ ಒಂದು ಜ್ಞಾನ ಪ್ರಸಾರ ಮಾಧ್ಯಮವನ್ನಾಗಿ ಉಪಯೋಗಿಸಿಕೊಳ್ಳಬಹುದು. ಕುರುಡರೋ ಕಿವುಡರೋ ಮೂಗರೋ ಆಗಿರುವಂತಹ, ಇಲ್ಲವೆ ಆಸ್ಪತ್ರೆಗಳಲ್ಲೋ ಸೆರೆಮನೆಗಳಲ್ಲೋ ವಾಸಿಸಬೇಕಾದಂತಹ ನತದೃಷ್ಟರ ಯೋಗಕ್ಷೇಮವನ್ನೂ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ನೋಡಿಕೊಳ್ಳಬೇಕು. ಯಥೋಚಿತವಾದ ಬ್ರೇಲ್(Braille)ಪುಸ್ತಕಗಳು ಹಾಗೂ ಧ್ವನಿ ಮುದ್ರಿತ ವಾಕ್‌ಪುಸ್ತಕಗಳು ಮೊದಲಾದ ಸಂಗ್ರಹಗಳಿಂದ ಅಂಗವಿಕಲರ ಆವಶ್ಯಕತೆಗಳನ್ನು ಪೂರೈಸಬೇಕು. ಆಸ್ಪತ್ರೆಗಳಿಗೂ ಸೆರೆಮನೆಗಳಿಗೂ ವಿಶೇಷ ಗ್ರಂಥಾಲಯಗಳನ್ನು ಒದಗಿಸಬೇಕು.

ಸಂಚಾರೀ ರೈಲುಗಳಲ್ಲಿ ಹಾಗೂ ವಾಯುಯಾನ ಜಲಯಾನಗಳಲ್ಲಿ ದುಡಿಯುವವರ ಪುಸ್ತಕಾವಶ್ಯಕತೆಗಳ ಕಡೆಯೂ ಗ್ರಂಥಾಲಯ ವ್ಯವಸ್ಥೆ ಸಾಕಷ್ಟು ಗಮನ ಕೊಡಬೇಕು.

ಇನ್ನು ಪುಟಾಣಿ ಮಕ್ಕಳ ಬಗ್ಗೆ ಏನುಮಾಡಬೇಕು ? ಅವರ ಬಗ್ಗೆ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ವಿಶೇಷ ಜವಾಬ್ದಾರಿ ವಹಿಸಬೇಕು. "ಮನುಷ್ಯನಿಗೆ ಮಗು ತಂದೆ" ಎಂದು ವರ್ಡ್ಸ್‌ವರ್ತ್ ಕವಿ ಹೇಳಿದ. ಇಂದಿನ ಮಕ್ಕಳೇ ನಾಳಿನ ನಾಯಕರು, ಅವರೇ ದೇಶವನ್ನು ಕಟ್ಟುವವರು. ಓದುವ ಅಭ್ಯಾಸವನ್ನು, ಅದರಲ್ಲೂ ಸಂತೋಷಕ್ಕಾಗಿ ಓದುವ ಅಭ್ಯಾಸವನ್ನು, ಇನ್ನು ಶೈಕ್ಷಣಿಕ ವಯಸ್ಸಿನಲ್ಲಿಯೇ ಮಕ್ಕಳಿಗೆ ಕಲಿಸಬೇಕು. ,ಡೆಲ್ಲಿ ಪಬ್ಲಿಕ್ ಲೈಬ್ರರಿಯ ಮಕ್ಕಳ ವಿಭಾಗ, ಕಲ್ಕತ್ತದ ನ್ಯಾಷನಲ್ ಲೈಬ್ರರಿ, ಕಲ್ಕತ್ತದಲ್ಲಿ ರಾಮಕೃಷ್ಣಾಶ್ರಮ ನಡೆಸುತ್ತಿರುವ ಮಕ್ಕಳ ಗ್ರಂಥಾಲಯ ಮತ್ತು ಬ್ರಿಟಿಷ್ ಕೌನ್ಸಿಲ್ ಗ್ರಂಥಾಲಯಗಳ ಮಕ್ಕಳ

ವಿಭಾಗಗಳು ಈ ಸಂದರ್ಭದಲ್ಲಿ ನೆನೆಯಬಹುದಾದಂಥವು.

ದೇಶದ ಮೂಲೆಮೂಲೆಗಳಲ್ಲಿ ವಾಸಿಸುವ ಜನಸಾಮಾನ್ಯರನ್ನು ತಲುಪುವ ಸಲುವಾಗಿ ಗ್ರಂಥಾಲಯ ವ್ಯವಸ್ಥೆ ಸಂಚಾರೀ ಪುಸ್ತಕಾಲಯಗಳ ವ್ಯೂಹದ ನೆರವನ್ನು ತೆಗೆದುಕೊಳ್ಳಬೇಕು.

ಕೊನೆಯದಾಗಿ, ಹಣ ಸೌಕರ್ಯವಿದ್ದರೆ ಗ್ರಂಥಾಲಯ ವ್ಯವಸ್ಥೆ ಸಾಮಾನ್ಯ ಜನತೆಯಲ್ಲಿ ಅನುಕೂಲ ವರ್ಗಕ್ಕೆ ಸೇರಿದ ವಕೀಲರು, ಎಂಜಿನಿಯರುಗಳು, ವೈದ್ಯರು, ಉಪಾಧ್ಯಾಯರು ಮೊದಲಾದವರ ಆವಶ್ಯಕತೆಗಳನ್ನೂ ಪೂರೈಸಬೇಕು.

ಭಾರತದಲ್ಲಿ ಸೇಕಡ 70 ರಷ್ಟು ಜನ ಹಳ್ಳಿಗಾಡುಗಳಲ್ಲಿ ವಾಸಿಸುತ್ತಾರೆ. ಹಳ್ಳಿಗಳಲ್ಲಿ ಗ್ರಂಥಾಲಯ ಸೌಕರ್ಯಗಳು ಇಲ್ಲದಿರುವುದು ಎದ್ದುಕಾಣುತ್ತದೆ. ಈಗ ನಮ್ಮಲ್ಲಿ ನ್ಯಾಷನಲ್ ಲೈಬ್ರರಿ, ಸ್ಟೇಟ್ ಸೆಂಟ್ರಲ್ ಲೈಬ್ರರಿಗಳು, ಹಲವಾರು ಡಿಸ್ಟ್ರಿಕ್ಟ್ ಸೆಂಟ್ರಲ್ ಲೈಬ್ರರಿಗಳು ಮತ್ತು ಸಿಟಿ ಸೆಂಟ್ರಲ್ ಲೈಬ್ರರಿಗಳೇನೋ ಇವೆ. ಆದರೆ ಗ್ರಂಥಾಲಯವ್ಯವಸ್ಥೆ ಈಗಲೂ ಗ್ರಾಮಾಂತರ ಪ್ರದೇಶಗಳ ಮೇಲೆ ಮಲತಾಯಿ ಧೋರಣೆ ತೋರಿಸಿದೆ. ಈ ಕರ್ತವ್ಯ ಲೋಪವನ್ನು ಮನಗಂಡು ಕೇಂದ್ರ ಸರ್ಕಾರ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಂಥಾಲಯಗಳ ಆವಶ್ಯಕತೆಯ ಬಗ್ಗೆ ತನ್ನ ಗಮನ ಹರಿಸಿರುವುದು ಸರಿಯಾಗಿಯೇ ಇದೆ. ಮಹಾ ವಿದ್ವಾಂಸರಾದ ರಾಜಾ ರಾಮಮೋಹನರಾಯ್ ಅವರ ದ್ವಿಶತಮಾನೋತ್ಸವ ಸಂದರ್ಭವಾದ 1972 ರಲ್ಲಿ 'ರಾಜಾ ರಾಮಮೋಹನರಾಯ್ ಗ್ರಂಥಾಲಯ ದತ್ತಿ'ಯನ್ನು ಸ್ಥಾಪಿಸಲಾಯಿತು. ಇದರ ಪ್ರಧಾನ ಉದ್ದೇಶ, ಗ್ರಾಮಾಂತರ ಪ್ರದೇಶಗಳಲ್ಲಿನ ಆವಶ್ಯಕತೆಗಳನ್ನು ಪೂರೈಸಲು ಆ ಪ್ರದೇಶಗಳಲ್ಲಿ ಗ್ರಂಥಾಲಯಗಳನ್ನು ಆರಂಭಿಸುವುದು. ಈ ಸ್ಥಾಪನೆಯ ಉದಾತ್ತ ಧ್ಯೇಯವನ್ನು ನೆರವೇರಿಸಲು ಕೇಂದ್ರ ಸರ್ಕಾರ ಒಂದೇ ಸಲಕ್ಕೆ 50 ಲಕ್ಷ ರೂಪಾಯಿಗಳನ್ನು ಅದಕ್ಕೆ ದತ್ತಿಯಾಗಿ ನೀಡಿದೆ.

ಪ್ರತಿ ಕ್ಷಣದಲ್ಲೂ ಒಂದೊಂದು ಪುಸ್ತಕ ಹುಟ್ಟಿಕೊಳ್ಳುತ್ತಿರುತ್ತದೆ. ಇವುಗಳಲ್ಲಿ ಬಹುಪಾಲು ಪುಸ್ತಕಗಳು ಜನಸಾಮಾನ್ಯರ ಉಪಯೋಗಕ್ಕೆ ಬರುವಂಥವು. ಈ ಪುಸ್ತಕಗಳನ್ನು ಜನಸಾಮಾನ್ಯರಿಗೆ ಗ್ರಂಥಾಲಯಗಳ ವ್ಯೂಹದ ಮೂಲಕ—ಅಂದರೆ ಸಾರ್ವಜನಿಕ ಗ್ರಂಥಾಲಯಗಳ ಮೂಲಕ—ದೊರಕಿಸಿಕೊಡಬೇಕು.

ಜನಸಾಮಾನ್ಯರ ಗ್ರಂಥಾಲಯವಾದ ಸಾರ್ವಜನಿಕ ಗ್ರಂಥಾಲಯವನ್ನು 'ಸಾಮಾನ್ಯ ಜನರ ವಿಶ್ವವಿದ್ಯಾನಿಲಯ' ಎಂದು ಕರೆಯಲಾಗಿದೆ. ಅಮೆರಿಕದ ಮಹಾಕವಿಯಾದ ಕಾರ್ಲ್ ಷಾಪಿರೋ ಇದೇ ಅಭಿಪ್ರಾಯವನ್ನೇ ಬೇರೆ ಮಾತುಗಳಲ್ಲಿ ಹೇಳುತ್ತ, ಸಾರ್ವಜನಿಕ ಗ್ರಂಥಾಲಯ ಜನಸಾಮಾನ್ಯನ ಶಾಲೆ ಅಥವಾ ಕಾಲೇಜು ; ಇದರ ಉಪಾಧ್ಯಾಯ ವರ್ಗದವರಾದರೋ ಸದಾ ಕಾಲವೂ ರಜೆಯಲ್ಲಿರುತ್ತಾರೆ! ಎಂದು ಹೇಳುತ್ತಾರೆ. ಓದುವ ಅಭ್ಯಾಸ ಒಳ್ಳೆಯದು; ಪ್ರತಿಯೊಬ್ಬರೂ ಓದಬೇಕು. ನಾವು ಒಂದು ಲೋಟ ಟೀಯಿಂದಲೋ ಕಾಫಿಯಿಂದಲೋ ದಿನವನ್ನು ಆರಂಭಿಸುತ್ತೇವೆ; ಹಾಗೆಯೇ ಒಂದು ಒಳ್ಳೆಯ ಪುಸ್ತಕದ 10 ಪುಟಗಳನ್ನಾದರೂ ಓದಿ ದಿನವನ್ನು ಮುಗಿಸೋಣ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

ಮಾನವಿಕ ಕರ್ಣಾಟಕ

ಪ್ರಬುದ್ಧ ಕರ್ಣಾಟಕ

ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್

'ಪ್ರಸಾರಾಂಗ'

ಮಾನಸ ಗಂಗೋತ್ರಿ, ಮೈಸೂರು-೫೭೦೦೦೬